ಶಿವರಾಮು ಕಾಡನಕುಪ್ಪೆ ಅವರ ಸಾಹಿತ್ಯ

(ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ನಿಬಂಧ)

ವಿದ್ಯಾರ್ಥಿ ನೊಂದಣಿ ಸಂಖ್ಯೆ : ಕೆ.ಆರ್.ಎಸ್.ಎಂ.ಕೆ.ಎಸ್.00633

Reg. No. : KRSMKS00633

೨೦೧೨-೨೦೧೩

ಕನ್ನಡ ವಿಶ್ವವಿದ್ಯಾನಿಲಯ
ಹಂಪಿ

ಶಿವರಾಮು ಕಾಡನಕುಪ್ಪೆ ಅವರ ಸಾಹಿತ್ಯ

(ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ನಿಬಂಧ)

ವಿದ್ಯಾರ್ಥಿ ನೊಂದಣಿ ಸಂಖ್ಯೆ : ಕೆ.ಆರ್.ಎಸ್.ಎಂ.ಕೆ.ಎಸ್.00633

Reg. No. : KRSMKS00633

೨೦೧೨-೨೦೧೩

ಕನ್ನಡ ವಿಶ್ವವಿದ್ಯಾನಿಲಯ
ಹಂಪಿ

ಶಿವರಾಮು ಕಾಡನಕುಪ್ಪೆ ಅವರ ಸಾಹಿತ್ಯ

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ – ವ್ಯಾಪ್ತಿ

ವ್ಯಕ್ತಿಯಲ್ಲಿರುವ ಕಾರ್ಯಶೀಲತೆ, ಸಾಧನೆಯ ಹಾದಿ, ಸಿದ್ಧಿಗಳನ್ನು ಪಡೆಯುವ ಪ್ರತಿಭೆಯನ್ನು ಹೊಂದಿರುವವರು ಮಾತ್ರ ಕವಿ, ವಿಮರ್ಶಕ, ಕಾದಂಬರಿಕಾರ, ಲೇಖಕನಾಗಿ ರೂಪುಗೊಳ್ಳುತ್ತಾರೆ. ಇಂತಹವರ ಸಾಲಿನಲ್ಲಿ ಗುರುತಿಸಬಹುದಾದ ಪ್ರಮುಖ ಸಾಹಿತಿಗಳಲ್ಲಿ ಶಿವರಾಮು ಕಾಡನಕುಪ್ಪೆ ಅವರು ಒಬ್ಬರಾಗಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರು ಲೇಖಕ, ಹೋರಾಟಗಾರ, ಸಂಸ್ಕೃತಿ ಚಿಂತಕರಾಗಿ ಸಾಕಷ್ಟು ಹೆಸರು ಮಾಡಿದ್ದಾರೆ. ಇವರು ಹಲವು ಸಾಹಿತ್ಯ ಕೃತಿಗಳನ್ನು ರಚನೆ ಮಾಡಿದ್ದಾರೆ. ನಿಷ್ಪಕ್ಷಪಾತ ದೃಷ್ಟಿ, ವಸ್ತು ನಿಷ್ಠತೆ, ಸಮತಾ ತತ್ವವನ್ನು ತಮ್ಮ ಬರಹದ ಉಸಿರಾಗಿಸಿಕೊಂಡಿದ್ದಾರೆ. ಇವರ ಸಾಹಿತ್ಯ ಕೃಷಿ ಬಹುಮುಖವಾದುದು ಉದಾಹರಣೆಗೆ ವಿಮರ್ಶೆ, ಗ್ರಂಥ ಸಂಪಾದನೆ, ಕಾವ್ಯ, ಕಾದಂಬರಿ, ವೈಚಾರಿಕ ಬರಹ ಪ್ರಮುಖವಾದವುಗಳು.

ಇಂತಹ ಹಿರಿಯ ಲೇಖಕರನ್ನು ಮತ್ತು ಅವರ ಸಾಹಿತ್ಯ ಕೃಷಿಯ ಆಳವನ್ನು ಅವಲೋಕಿಸುವ ಪ್ರಯತ್ನವೇ ಈ ನಿಬಂಧದ ರಚನೆಯಾಗಿದೆ. ನಿಬಂಧವು ಶಿವರಾಮು ಕಾಡನಕುಪ್ಪೆ ಅವರ ಬಗೆಗಿನ ಮೊದಲನೆ ಪ್ರಯತ್ನವಾಗಿದೆ. ಸಾಹಿತಿಯ ಬಗ್ಗೆ ಮತ್ತು ಅವರ ಸಾಹಿತ್ಯದ ವಸ್ತುವಿನ ಬಗ್ಗೆ ಪ್ರೀತಿ ಮತ್ತು ಕುತೂಹಲವಿದ್ದಾಗ ಆಯ್ಕೆ ಮಾಡಿಕೊಂಡ ವಿಷಯವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ವಿಶ್ಲೇಷಿಸಲು ಸಹಾಯವಾಗುತ್ತದೆ.

ಪ್ರಸ್ತುತ ನಿಬಂಧದಲ್ಲಿ ಶಿವರಾಮು ಕಾಡನಕುಪ್ಪೆ ಅವರ ವಿವಿಧ ಸಾಹಿತ್ಯ ಪ್ರಕಾರಗಳನ್ನು ಅಧ್ಯಯನ ಮಾಡಲಾಗುತ್ತದೆ. ಶಿವರಾಮು ಕಾಡನಕುಪ್ಪೆ ಅವರ ಜೀವನ ಮತ್ತು ವ್ಯಕ್ತಿತ್ವದ ಬಗ್ಗೆ ಅಧ್ಯಯನ ಕೈಗೊಂಡು ಅವರ ಬಾಲ್ಯ, ವಿದ್ಯಾಭ್ಯಾಸ, ಪ್ರಾಧ್ಯಾಪಕರಾಗಿ ಅವರು ಸಲ್ಲಿಸಿದ ಪ್ರಾಮಾಣಿಕ ಸೇವೆ, ವಿವಿಧ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಬಗೆ, ಅವರಿಗೆ ಸಂದ ಬಿರುದು ಬಾವಲಿಗಳನ್ನು ಕುರಿತಂತೆ ಚರ್ಚೆ ನಡೆಸಿ ಅವುಗಳ ಸಾರ್ಥಕತೆಯ ಬಗ್ಗೆ ತಿಳಿಸಿ ಕೊಡಲಾಗಿದೆ.

ಪ್ರಕೃತಿಯ ನಿಯಮದಂತೆ ಏಕಾಏಕಿ ಬಂದೆರಗುವ ಸಾವು–ನೋವುಗಳ ನಡುವಿನ ಸಂಬಂಧವನ್ನು 'ನೀಲಿ ಚಂದ್ರಮ' ಕವನ ಸಂಕಲನದಿಂದ ತಿಳಿಯಬಹುದಾಗಿದೆ. ಇಲ್ಲಿನ ಸಾವು, ಬಂಡಾಯದವರು, ಕಳಚಬೇಕಿದೆ ದೃಷ್ಟಿಗಡ್ಡವಿರುವ ಬಟ್ಟೆ, ನೇಸರ, ನೆಲದ ಮಕ್ಕಳ ಹಾಡು ಮುಂತಾದ ಕಾವ್ಯಗಳನ್ನು ಕುರಿತು ಚರ್ಚಿಸಲಾಗಿದೆ.

ಪ್ರಕೃತಿಯ ಮೇಲೆ ಶ್ರೀಮಂತರು, ರಾಜಕಾರಣಿಗಳು, ಗಣಿದಣಿಗಳು ನಡೆಸುತ್ತಿರುವ ಶೋಷಣೆಯನ್ನು ವ್ಯಕ್ತಪಡಿಸಿ ಸಿನಿಮೀಯ ತಿರುವು ಪಡೆದು ಮುಕ್ತಾಯ ಪಡೆದಿರುವ 'ವಸುಂಧರೆ' ಕಾದಂಬರಿಯಲ್ಲಿನ ಪ್ರಮುಖ ವ್ಯಕ್ತಿಗಳು ಅಧಿಕಾರ ಮತ್ತು ಹಣದ ವ್ಯಾಮೋಹದಿಂದ ಪ್ರಕೃತಿಯ ಮಡಿಲನ್ನು ಬರಿದು ಮಾಡುತ್ತಿರುವ ಚಿತ್ರಣಗಳನ್ನು ನೀಡಲಾಗಿದೆ. ಕಾದಂಬರಿಯನ್ನು ವಿಶ್ಲೇಷಣೆಗೆ ಒಳಪಡಿಸುವ ಮೂಲಕ ಸಮಕಾಲೀನ ಸಂದರ್ಭದ ಉಳ್ಳವರ ಮತ್ತು ಅಧಿಕಾರಶಾಹಿಗಳ ಅನೈತಿಕ ಸಂಬಂಧ ಮತ್ತು ಅದರ ಪರಿಣಾಮ ಪ್ರತಿಮೀಕರಣಗೊಂಡಿರುವ ಬಗೆಯನ್ನು ವಿವರಿಸಲಾಗಿದೆ.

ರಾಷ್ಟ್ರಕವಿ ಕುವೆಂಪು ಅವರ ಕೃತಿಗಳ ವಿಮರ್ಶೆಯನ್ನು ಮಾಡುವ ಮೂಲಕ ಓದುಗರಿಗೆ ಉಪಯೋಗಕರವಾಗಿರುವುದನ್ನು ತಿಳಿಸಲಾಗಿದೆ. 'ಸಂವಹನ' 'ಸಮನ್ವಯ' ಮತ್ತು 'ಸಾಮಾಜಿಕ ನೆಲೆ' ಕೃತಿಯಲ್ಲಿರುವ ವಿಮರ್ಶಾ ವಿಧಾನ ಮತ್ತು ವಿಚಾರಗಳನ್ನು ತಿಳಿಸುವ ಪ್ರಯತ್ನವನ್ನು ನಿಬಂಧದಲ್ಲಿ ಮಾಡಲಾಗಿದೆ.

ಶಿವರಾಮು ಕಾಡನಕುಪ್ಪೆ ಅವರು ಹಲವಾರು ಚಿಂತನ ಬರಹಗಳ ಮೂಲಕ ಜನರಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸುವ ಪ್ರಯತ್ನ ಮಾಡಿದ್ದಾರೆ. ಇದನ್ನು ವಿಶ್ಲೇಷಣೆಗೆ ಒಳಪಡಿಸಿ ಚರ್ಚಿಸಲಾಗಿದೆ. ಇಲ್ಲಿ ವಿಶ್ಲೇಷಣೆಗೆ ಒಳಪಡುವ ಕೃತಿಗಳೆಂದರೆ 'ಕುಕ್ಕರಹಳ್ಳಿ' 'ಬಯಲಬೆಳೆ' ಹಾಗೂ ಮಂಡ್ಯ ಕರ್ನಾಟಕ ಸಂಘ ಹೊರ ತರುತ್ತಿರುವ 'ಅಭಿವ್ಯಕ್ತಿ' ಸಂಚಿಕೆಯಲ್ಲಿನ ಬರಹಗಳು.

ಶಿವರಾಮು ಕಾಡನಕುಪ್ಪೆ ಅವರ ಪ್ರಾಮಾಣಿಕತೆ ಮತ್ತು ನಿಷ್ಠೆಯ ಫಲದಿಂದ ಹೊರ ಬಂದ ಸಂಪಾದಿತ ಕೃತಿಗಳಾದ ವಿನಾಯಕ, ಹಾ.ಮಾ.ನಾ., ಶಿವರಾಮ ಕಾರಂತರ ವಿಮರ್ಶಾ ಲೇಖನಗಳ ಬಗ್ಗೆ ವಿವರಿಸಲಾಗಿದೆ.

ದುಡಿವ ಮಹಿಳೆಯರನ್ನು ಕುರಿತ ಚಿಂತನೆಯನ್ನು ಒಳಗೊಂಡಿರುವ 'ಭೂಮಿ ತೂಕದ ಕಣ್ಣೀರು' ಕೃತಿಯು ಸ್ತ್ರೀಯರ ಶೋಷಣೆ ಮತ್ತು ಸಮಸ್ಯೆಯ ಮೇಲೆ ಬೆಳಕು ಚೆಲ್ಲುವ ಸೂಕ್ಷ್ಮವೂ, ಗಾಢವೂ ಆದ ಆಲೋಚನೆಯನ್ನು ನಮ್ಮಲ್ಲಿ ಮೂಡಿಸುತ್ತದೆ.

ಶಿವರಾಮು ಕಾಡನಕುಪ್ಪೆ ಅವರು ಸಾಮಾಜಿಕ ಸ್ಪಂದನೆಯನ್ನುಳ್ಳ ವ್ಯಕ್ತಿಯಾಗಿದ್ದು, ಭಾಷಿಕ ಚಳುವಳಿಗಳಲ್ಲಿ, ದಲಿತ – ಬಂಡಾಯ ಚಳುವಳಿಗಳಲ್ಲಿ, ಮಹಿಳಾ ಸಬಲೀಕರಣ ಚಳುವಳಿಗಳಲ್ಲಿ ತೊಡಗಿಸಿಕೊಂಡ ಬವಣೆಯನ್ನು ವಿವರಿಸಲಾಗಿದೆ. ಇಂತಹ ಚಳುವಳಿಗಳ ಮೂಲಕ ಪರಿವರ್ತನಾಶೀಲ ಸಮಾಜವನ್ನು ಉತ್ತಮವಾಗಿ ಕಟ್ಟಬೇಕೆಂಬ ಅವರ ಭಾವನೆಯನ್ನು ವಿವರಿಸಲಾಗುತ್ತದೆ. ಈ ಅಧ್ಯಯನದ ಕೊನೆಯಲ್ಲಿ ಒಂದು ಸಂದರ್ಶನ ಲೇಖನವನ್ನು ಅಳವಡಿಸಲಾಗುತ್ತದೆ.

ಕೊನೆಯದಾಗಿ ಉಪ ಸಂಹಾರವನ್ನು ನೀಡಲಾಗಿದೆ. ಶಿವರಾಮು ಕಾಡನಕುಪ್ಪೆ ಅವರು ಆಧುನಿಕ ಕವಿ ಮತ್ತು ಲೇಖಕರಲ್ಲಿ ಪ್ರಮುಖರಾಗಿದ್ದು, ಪರಿವರ್ತನಶೀಲ ದಲಿತ ಗ್ರಾಮದ ಚಿತ್ರಣವನ್ನು ಹಾಗೂ ತಮ್ಮ ಸ್ವ ಅನುಭವಗಳ ಮೂಲಕ ಸಮಾಜದಲ್ಲಿ ಬದಲಾವಣೆಯ ಆಶಯ, ಭೂಮಿ ತಾಯಿಯ ಒಡಲನ್ನು ಕಾಪಾಡಬೇಕೆಂಬ ಅವರ ಭಾವನೆ, ದುಡಿಯುವ ಮಹಿಳೆಯರ ಬಗೆಗಿನ ಕಾಳಜಿ, ವಿವಿಧ ಕೃತಿಗಳ ವಿಶ್ಲೇಷಣೆ ಮಾಡುವ ಮೂಲಕ ಕೃತಿಗಳ ಒಳಿತು ಕೆಡಕುಗಳನ್ನು ಜನತೆಗೆ ತಿಳಿಸಿಕೊಡುವ ಪ್ರಯತ್ನ ಮಾಡಲಾಗಿದೆ.

ಇವರ ಕೃತಿಗಳಿಂದ ತಿಳಿದು ಬರುವ ಪ್ರಮುಖ ಅಂಶಗಳೆಂದರೆ, ದಲಿತರಿಗೂ ಬದಲಾವಣೆಗೆ ಅವಕಾಶ ಕೊಡಬೇಕು, ಪ್ರಕೃತಿಯ ಒಡಲಾಳವನ್ನು ಸಂರಕ್ಷಿಸುವ ಭಾವನೆ, ವೈಚಾರಿಕ ವಿಚಾರಧಾರೆಗಳಿಂದ ಸಮಾಜದಲ್ಲಿನ ಸಣ್ಣ ವಿಷಯಗಳ ಬಗೆಗೂ ಹೆಚ್ಚಿನ ಆದ್ಯತೆಯನ್ನು ನೀಡಬೇಕೆಂಬುದು.

ಅಧ್ಯಾಯ -೨

ಶಿವರಾಮು ಕಾಡನಕುಪ್ಪೆ ಅವರ ಜೀವನ ಮತ್ತು ವ್ಯಕ್ತಿತ್ವ

ಕನ್ನಡ ಸಾಹಿತ್ಯ ಕ್ಷೇತ್ರದ ವಿಮರ್ಶೆ ಮತ್ತು ಬಂಡಾಯ ಎರಡನ್ನೂ ಪರಿಗಣನೆಗೆ ತೆಗೆದುಕೊಂಡರೆ ಸಿಗುವ ಹೆಸರುಗಳು ತೀರ ವಿರಳ. ಇಂತಹವರಲ್ಲಿ ಪ್ರೊ.ಶಿವರಾಮು ಕಾಡನಕುಪ್ಪೆ ಅವರು ಸಹ ಒಬ್ಬರಾಗಿದ್ದಾರೆ. ತಮ್ಮ ಜೀವನದುದ್ದಕ್ಕೂ ಬಂಡಾಯಗಾರರಾಗಿ ಬದುಕನ್ನು ಸಾಗಿಸಿದ ಇವರು ಹಲವು ವಿಮರ್ಶೆ ಮತ್ತು ಸಂಪಾದಿತ ಸಾಹಿತ್ಯ ರಚಿಸುವ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ಹೆಸರು ಮಾಡಿದ್ದಾರೆ.

ಸಾಮಾನ್ಯ ರೈತ ಕುಟುಂಬದಿಂದ ಬಂದಂತಹ ಅಪ್ಪಟ ಬಂಡಾಯಗಾರ ಎನ್ನಬಹುದಾದ ಪ್ರೊ.ಶಿವರಾಮು ಕಾಡನಕುಪ್ಪೆ ಅವರು ಹುಟ್ಟಿದ್ದು ೯ ನೇ ಆಗಸ್ಟ್ ೧೯೫೩ ರಂದು ಇಂದಿನ ರಾಮನಗರ ಜಿಲ್ಲೆ (ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿತ್ತು) ರಾಮನಗರ ತಾಲ್ಲೂಕಿನ ಕಾಡನಕುಪ್ಪೆ ಎಂಬ ಪುಟ್ಟ ಗ್ರಾಮದಲ್ಲಿ. ಇವರ ತಂದೆ ಲಿಂಗೇಗೌಡ, ತಾಯಿ ಶಿವಮ್ಮ ಅವರುಗಳು.

ಶಿವರಾಮು ಕಾಡನಕುಪ್ಪೆ ಅವರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಮನಗರದಲ್ಲಿ, ಪದವಿ ಶಿಕ್ಷಣವನ್ನು ಮಂಡ್ಯದ ಸರ್ಕಾರಿ ಪದವಿ ಕಾಲೇಜಿನಲ್ಲಿ ಮುಗಿಸಿ ೧೯೭೬ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಡೆದುಕೊಂಡರು.

ಬಾಲ್ಯದಿಂದಲೆ ಬಂಡಾಯ ಮನೋಭಾವನೆಯನ್ನು ಮೈಗೂಡಿಸಿಕೊಂಡಿದ್ದ ಶಿವರಾಮು ಕಾಡನಕುಪ್ಪೆ ಅವರು ಕಾಲೇಜು ದಿನಗಳಲ್ಲಿ ಬಂಡಾಯ ಮನೋಭಾವದ ವಿರುದ್ಧ ನೇರವಾಗಿ ಬೀದಿಗಿಳಿದು ಹೋರಾಟಕ್ಕೆ ದುಮುಕಿದರು. ಎಂಬತ್ತರ ದಶಕದಲ್ಲಿ ಪ್ರೊ.ಎಂ.ಡಿ.ನಂಜುಂಡ ಸ್ವಾಮಿ ಅವರು ಹುಟ್ಟುಹಾಕಿದ ರೈತಪರ ಹೋರಾಟ, ಕನ್ನಡದ ಸುಸ್ಥಿರ ಅಸ್ತಿತ್ವ ಹಾಗೂ ಸಂವರ್ಧನೆಗಾಗಿ ನಡೆದ ಭಾಷಾ ಚಳುವಳಿಗಳು (ಮುಖ್ಯವಾಗಿ ಗೋಕಾಕ್ ಚಳುವಳಿ) ಇವುಗಳಿಂದ ಪ್ರೇರಣೆಗೊಂಡ ಶಿವರಾಮು ಕಾಡನಕುಪ್ಪೆ ಅವರು, ಹೋರಾಟ ಮತ್ತು ಅಭಿವ್ಯಕ್ತಿಯನ್ನು ಪ್ರಮುಖ ಅಸ್ತ್ರವನ್ನಾಗಿ ಮಾಡಿಕೊಂಡು ಸಾರ್ವಜನಿಕ ಬದುಕಿಗೆ ಪ್ರವೇಶಿಸಿದರು.

ಲೇಖಕ, ಸಂಸ್ಕೃತಿ ಚಿಂತಕ, ಹೋರಾಟಗಾರ ಮೂರನ್ನು ಸಮಾನವಾಗಿ ಮೈಗೂಡಿಸಿಕೊಂಡಿರುವ ಇವರಲ್ಲಿ ಎಲ್ಲವೂ ಪ್ರಾಧಾನ್ಯಗೊಂಡಿವೆ. ಶಿವರಾಮು ಕಾಡನಕುಪ್ಪೆ

ಅವರು ಕನ್ನಡದ ಹೆಸರಾಂತ ವಿಮರ್ಶಕರು. ಇವರು ಕವಿ ಕಾದಂಬರಿಕಾರ, ಅಂಕಣ ಬರಹಗಾರರಾಗಿ ಸಾಹಿತ್ಯ ಸೇವೆ ಸಲ್ಲಿಸುತ್ತಿದ್ದಾರೆ. ಸಾಮಾಜಿಕ, ಸಾಹಿತ್ಯಿಕ, ಭಾಷಿಕ ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಮೇಲಾಗಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಗೆ ಹೆಸರಾಗಿರುವ ಡಾ.ರಾಗೌ ಶಿಷ್ಯ ಪರಂಪರೆಯಲ್ಲಿ ಪ್ರಥಮವಾಗಿ ನಿಲ್ಲುತ್ತಾರೆ.

ಸ್ನಾತಕೋತ್ತರ ಶಿಕ್ಷಣ ಮುಗಿದ ನಂತರ ೧೯೭೬ ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯನ್ನು ಪ್ರಾರಂಭಿಸಿದ ಅವರು, ೧೯೭೮ ರಲ್ಲಿ ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆಗೆ ಸೇರಿದರು. ನಂತರ ಇದೆ ಕಾಲೇಜಿನಲ್ಲಿ ರೀಡರ್ ಆಗಿ, ಪ್ರಾಧ್ಯಾಪಕರಾಗಿ, ೧೯೯೯ ರಿಂದ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರು ಬಾಲ್ಯದಿಂದಲೂ ಬಂಡಾಯ ಪ್ರವೃತ್ತಿಯುಳ್ಳವರು. ತಮಗೆ ಇಷ್ಟವಿಲ್ಲದ ಕೆಲಸವನ್ನು ಅವರು ಎಂದು ಒಪ್ಪಿಕೊಂಡವರಲ್ಲ ಹಾಗೂ ಮಾಡಿದವರಲ್ಲ. ಕಾಲೇಜು ದಿನಗಳಲ್ಲಿ ರೈತಪರ ಹೋರಾಟ ಮತ್ತು ರಾಮ ಮನೋಹರ ಲೋಹಿಯಾ ಅವರ ಚಿಂತನೆಗಳಿಂದ ಪ್ರೇರೇಪಣೆಗೊಂಡು ಹೋರಾಟಕ್ಕೆ ದುಮುಕುವ ಮೂಲಕ ತಮ್ಮ ಬಂಡಾಯ ಮನೋಭಾವಕ್ಕೆ ವೇದಿಕೆ ಕಲ್ಪಿಸಿಕೊಂಡರು.

ಸಮಾಜದಲ್ಲಿ ಅವ್ಯವಸ್ಥೆಗಳ ವಿರುದ್ಧ ಎಂದಿಗೂ ಅವರು ಸುಮ್ಮನಿದ್ದವರಲ್ಲ. ಇದಕ್ಕಾಗಿಯೇ ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯನ್ನು ರಚಿಸಿದ್ದರು. ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಹೊಂದಿದ್ದ ಇವರು ಸಮಾಜದಲ್ಲಿ ವೈಜ್ಞಾನಿಕ ಮತ್ತು ವೈಚಾರಿಕ ಅರಿವನ್ನು ಮೂಡಿಸಲು ಮಾನವ ಮಂಟಪ ಸಂಘಟನೆಯನ್ನು ಪ್ರಾರಂಭಿಸಿ ಯುವ ಸಮುದಾಯವನ್ನು ಒಟ್ಟುಗೂಡಿಸಿದ್ದರು.

ರೈತಪರವಾದ ಚಳುವಳಿಗಳು ನಡೆಯುವ ಸಂದರ್ಭದಲ್ಲಿ ಎಂದಿಗೂ ಇವರು ಸುಮ್ಮನೆ ಕುಳಿತುಕೊಂಡವರಲ್ಲ. ತುರ್ತು ಪರಿಸ್ಥಿತಿ ಸಮಯದಲ್ಲಿ ವ್ಯವಸ್ಥೆಯ ವಿರುದ್ಧ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಅವರು, ೮೦ ರ ದಶಕದಲ್ಲಿ ನಡೆದ ಗೋಕಾಕ್ ಚಳುವಳಿಯಲ್ಲಿ ಬೀದಿಗಿಳಿದು ಹೋರಾಟ ನಡೆಸಿ ಸೆರಮನೆ ವಾಸವನ್ನು ಅನುಭವಿಸಿದ್ದಾರೆ. ನಿವೃತ್ತಿಯ ಅಂಚಿನಲ್ಲಿರುವ ಶಿವರಾಮು ಕಾಡನಕುಪ್ಪೆ ಅವರು ಇಂದಿಗೂ ತಮ್ಮ ಅನಾರೋಗ್ಯವನ್ನು ಲೆಕ್ಕಿಸದೆ ಮೈಸೂರು, ಚಾಮರಾಜನಗರ, ಮಂಡ್ಯ, ಮಡಿಕೇರಿ, ಹಾಸನ ಸೇರಿದಂತೆ ರಾಜ್ಯದ

ನಾನಾ ಭಾಗಗಳಲ್ಲಿ ನಡೆಯುವ ರೈತಪರ ಚಳುವಳಿಗಳು, ವಿಚಾರ ಸಂಕೀರ್ಣಗಳು, ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದಾರೆ.

ರಾಷ್ಟ್ರಕವಿ ಕುವೆಂಪು ಅವರ ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ಶಿವರಾಮು ಕಾಡನಕುಪ್ಪೆ ಅವರು ಯಾವುದೆ ಅದ್ದೂರಿ, ಆಡಂಬರಗಳಿಗೆ ಕಿವಿಗೊಟ್ಟವರಲ್ಲ. ಅತ್ಯಂತ ಸರಳ ಸಜ್ಜನಿಕೆಯ ಮೂಲಕ ತಮ್ಮ ಬದುಕನ್ನು ಕಟ್ಟಿಕೊಂಡವರಾಗಿದ್ದಾರೆ. ಕುವೆಂಪು ಅವರ ಆದರ್ಶ ಬದುಕಿನಿಂದ ಪ್ರೇರಣೆಗೊಂಡ ಅವರು 'ಮಂತ್ರ ಮಾಂಗಲ್ಯ'ದ ಮೂಲಕ ಸರಳ ವಿವಾಹವಾದವರು. ಇಷ್ಟು ಮಾತ್ರವಲ್ಲದೆ ೮೦ ರ ದಶಕದಲ್ಲಿ ರಾಮನಗರ, ಚನ್ನಪಟ್ಟಣ, ಮಂಡ್ಯ ಪ್ರಾಂತ್ಯದಲ್ಲಿ ಅದ್ದೂರಿ ಮದುವೆಗಳನ್ನು ತಿರಸ್ಕರಿಸಿ ಸರಳ ವಿವಾಹಗಳನ್ನು ಪುರಸ್ಕರಿಸುವಂತೆ ಯುವ ಸಮುದಾಯಕ್ಕೆ ಕರೆಕೊಟ್ಟು ಇದರಲ್ಲಿ ಯಶಸ್ವಿಯನ್ನು ಕಂಡವರು.

ಶಿವರಾಮು ಕಾಡನಕುಪ್ಪೆ ಅವರು ಎಂದಿಗು ಪ್ರಶಸ್ತಿ ಪುರಸ್ಕಾರಗಳಿಗಾಗಿ ಹಿಂದೆ ಬಿದ್ದವರಲ್ಲ. ಅಲ್ಲದೆ ಇವರ ವೈಜಾರಿಕ ಮನೋಭಾವದ ಹಿನ್ನಲೆಯಲ್ಲಿ ಅನೇಕರು ಇವರನ್ನು ನೇರವಾಗಿ ಎದುರಿಸಲು ಸಾಧ್ಯವಾಗದೆ ದೂರ ಉಳಿದದ್ದು ಉಂಟು. ಯಾವುದೆ ವಿಚಾರವಾಗಲಿ ತಮ್ಮ ಮನಸ್ಸಿಗೆ ಸರಿ ಹೊಂದದಿರುವುದನ್ನು ನೇರವಾಗಿ ಪ್ರಶ್ನಿಸುವ ಮತ್ತು ತಿರಸ್ಕರಿಸುವ ಮನೋಭಾವದಿಂದಲೆ ಇವರನ್ನು ಅನೇಕರು ಇಂದಿಗೂ ಆದರ್ಶವಾಗಿ ಸ್ವೀಕರಿಸಿದ್ದಾರೆ.

ಜಾತಿ ವ್ಯವಸ್ಥೆಯನ್ನು ಮೂಲದಿಂದಲೂ ತಿರಸ್ಕರಿಸುತ್ತ ಬಂದಿರುವ ಇವರು ಇಂದಿಗೂ ಜಾತ್ಯಾತೀತ ಮನೋಭಾವದಿಂದ ಬದುಕುತ್ತಿದ್ದಾರೆ ಎನ್ನುವುದಕ್ಕೆ ಅವರು ಅಂತರ್ಜಾತಿ ವಿವಾಹವಾಗಿರುವುದೆ ಸಾಕ್ಷಿಯಾಗಿದೆ. ಸರಳ ಬದುಕಿಗೆ ತಮ್ಮನ್ನು ಮಾತ್ರ ಸೀಮಿತಗೊಳಿಸಿಕೊಳ್ಳದ ಇವರು ತಮ್ಮ ಸಹೋದರರು ಹಾಗೂ ಬಂಧು, ಬಾಂಧವರನ್ನು ತಮ್ಮತ್ತ ಸೆಳೆಯುವ ಮೂಲಕ ಅಂದಿನ ದಿನಗಳಲ್ಲಿ ಸರಳ ವಿವಾಹಕ್ಕೆ ಹೊಸ ವೇದಿಕೆಯನ್ನು ಕಲ್ಪಿಸಿದ್ದರು. ಇವರ ಸಹೋದರ ರಾಮನಗರದ ಹೆಸರಾಂತ ವಕೀಲರಾದ ಎಲ್.ಚಿಕ್ಕಪ್ಪಾಜಿ ಅವರು ಸಹ ಅಂದು ಸರಳ ವಿವಾಹವಾಗುವ ಮೂಲಕ ತಮ್ಮ ಅಣ್ಣನ ಹಾದಿಯನ್ನು ತುಳಿದಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರು ತಮ್ಮ ಸರಳ ವ್ಯಕ್ತಿತ್ವದ ಮೂಲಕ ತಮ್ಮ ಪ್ರಾಧ್ಯಾಪಕ ವೃತ್ತಿಯಲ್ಲಿ ವಿದ್ಯಾರ್ಥಿಗಳಿಗೆ ಪ್ರೀತಿ ಪಾತ್ರರು, ಆದರ್ಶ ಪ್ರಾಯರು ಆಗಿದ್ದಾರೆ. ವೃತ್ತಿಯನ್ನು ಹೃದಯ ತುಂಬಿ ಪ್ರೀತಿಸಿ ಗೌರವಿಸುವವರಲ್ಲಿ ಇವರು ಸಹ ಅಗ್ರಗಣ್ಯರಾಗಿ ನಿಲ್ಲುತ್ತಾರೆ. ಕಳೆದ ಕೆಲವು ವರ್ಷಗಳ ಹಿಂದೆ ತೀವ್ರ ಅನಾರೋಗ್ಯ ಪರಿಸ್ಥಿತಿಯ ಸಂದರ್ಭದಲ್ಲಿಯೂ ಅನಿವಾರ್ಯ

ಕಾರಣಗಳನ್ನು ಹೊರತು ಪಡಿಸಿ ವೃತ್ತಿಯಿಂದ ವಿಮುಖರಾದವರಲ್ಲ. ಇದರಿಂದಲೆ ಇವರ ಶಿಷ್ಯವೃಂದ ಇಂದಿಗೂ ಇವರನ್ನು ಅತೀವ ಗೌರವಗಳಿಂದ ಕಾಣುತ್ತಾರೆ.

ಪರಿಚಿತರಾಗಲಿ ಅಥವಾ ಅಪರಿಚಿತರಾಗಲಿ ಅವರೊಡನೆ ಅತಿ ಬೇಗನೆ ಸ್ನೇಹ ಪೂರ್ವಕವಾಗಿ ಹೊಂದಿಕೊಳ್ಳುವ ಗುಣ ಶಿವರಾಮು ಕಾಡನಕುಪ್ಪೆ ಅವರಲ್ಲಿದೆ. ಇದರಿಂದಲೆ ಏನೋ ಇವರಿಗೆ ಮಿತ್ರ ವರ್ಗವೂ ಸಹ ಹೆಚ್ಚಿನ ಸಂಖ್ಯೆಯಲ್ಲಿದೆ. ಮೈಸೂರಿನ ಸುತ್ತಮುತ್ತಲ ಯಾವುದೆ ಸ್ಥಳಗಳಲ್ಲಿ ರೈತಪರ ಚಳವಳಿ, ವಿಚಾರ ಸಂಕೀರ್ಣಗಳು ನಡೆದರೂ ಇವರ ಉಪಸ್ಥಿತಿ ಇದ್ದೆ ಇರುತ್ತದೆ. ತಮಗಿಂತ ಕಿರಿಯವರನ್ನು ಅತ್ಯಂತ ಹೆಚ್ಚಿನ ಗೌರವ ಮತ್ತು ಪ್ರೀತಿಯಿಂದ ಇವರು ಮಾತನಾಡಿಸುವ ಗುಣ ಹೊಂದಿದ್ದಾರೆ.

ನುಡಿದಂತೆ ನಡೆಯುವ, ನಡೆದಂತೆ ಬರೆಯುವ ಗುಣವುಳ್ಳ ಶಿವರಾಮು ಕಾಡನಕುಪ್ಪೆ ಅವರು, ಇಂದಿನವರೆಗೂ ಬದುಕಿನುದ್ದಕ್ಕೂ ಬಂಡಾಯದ ವಿರುದ್ಧ ಧ್ವನಿ ಎತ್ತುತ್ತಾ ಬಂದಿದ್ದಾರೆ. ಇವರು ರಚಿಸುವ ಯಾವುದೆ ಕೃತಿಯನ್ನು ನೋಡಿದರು, ಅಲ್ಲಿ ಶೋಷಿತರ ಪರವಾದ ಧ್ವನಿ ಹಾಗೂ ಬಂಡಾಯದ ವಿರುದ್ಧದ ಧ್ವನಿ ಇದ್ದೇ ಇದೆ. ಇದರಿಂದಲೆ ಇವರು ಜಾತಿಯ ಚೌಕಟ್ಟಿಗೂ ಮೀರಿದ ಗೌರವವನ್ನು ಪಡೆದುಕೊಂಡಿದ್ದಾರೆ.

ಬರಹಗಾರರು ಅನೇಕರು ಸಿಗುತ್ತಾರೆ. ಆದರೆ ವಿಮರ್ಶಕರನ್ನು ಹುಡುಕುವುದು ಕಷ್ಟ ಇಂತಹ ಸಂದರ್ಭದಲ್ಲಿ ಶಿವರಾಮು ಕಾಡನಕುಪ್ಪೆ ಅವರು ಕೃತಿ ವಿಮರ್ಶಕರಲ್ಲಿ ಅಗ್ರಗಣ್ಯರಾಗಿ ನಿಲ್ಲುತ್ತಾರೆ. ಬಾಲ್ಯದಲ್ಲಿಯೇ ರಾಷ್ಟ್ರಕವಿ ಕುವೆಂಪು ಅವರ ಪ್ರಭಾವಕ್ಕೆ ಒಳಗಾದ ಇವರು, ಸಮನ್ವಯ, ಸಂವಹನ, ಕುವೆಂಪು ಸಾಹಿತ್ಯ ಮತ್ತು ವಿಚಾರ, ಸಾಮಾಜಿಕ ನೆಲೆ ಮತ್ತಿತರ ವಿಮರ್ಶೆಗಳ ಮೂಲಕ ತಮ್ಮ ಸಾಹಿತ್ಯದ ಬೇರನ್ನು ಕನ್ನಡ ಸಾಹಿತ್ಯ ಲೋಕದಲ್ಲಿ ಗಟ್ಟಿಗೊಳಿಸಿದ್ದಾರೆ. ಇದಲ್ಲದೆ ಸಾಕ್ಷರರಿಗಾಗಿಯೇ ನಗರ ಚಕ್ರವರ್ತಿಯ ಕಥೆ, ಅತಿಯಾಸೆ ಗತಿಕೇಡು, ಮೂರು ಹಿತ ನುಡಿಗಳು ಮತ್ತಿತರ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಪ್ರತಿಯೊಂದು ಕೃತಿಯಲ್ಲಿಯೂ ತಮ್ಮ ಬಂಡಾಯ ಮನೋಧರ್ಮ, ಶೋಷಿತರ ಪರವಾದ ಧ್ವನಿ ಎತ್ತಿರುವುದನ್ನು ನಾವು ಕಾಣಬಹುದಾಗಿದೆ.

ಶಿವರಾಮು ಕಾಡನಕುಪ್ಪೆ ಅವರ ವೈಚಾರಿಕ ಚಿಂತನೆಗಳು ಕಲ್ಪನೆಗೂ ಮೀರಿದ್ದು. ಇವರು ಎಂದಿಗೂ ದೇವರು, ಪೂಜೆ, ಪುರೋಹಿತಶಾಹಿ ಮನೋಧರ್ಮವನ್ನು ಪ್ರೋತ್ಸಾಹಿಸಿದವರಲ್ಲ. ಸದಾ ವೈಚಾರಿಕತೆಯ ನೆಲೆಗಟ್ಟಿನಲ್ಲಿ ಸ್ಪಷ್ಟ ನಾಸ್ತಿಕರಾಗಿರುವ ಇವರು ತಮ್ಮ ಜೀವನದುದ್ದಕ್ಕೆ

ಇದೆ ಮಾರ್ಗದಲ್ಲಿ ಮುನ್ನಡೆದಿದ್ದಾರೆ ಮಾತ್ರವಲ್ಲದೆ, ಇದೆ ಮಾರ್ಗದಲ್ಲಿ ಸಾವಿರಾರು ಶಿಷ್ಯ ವೃಂದವನ್ನು ಸಮಾಜಕ್ಕೆ ನೀಡಿದ್ದಾರೆ.

ಇವರು ರಚಿಸಿರುವ ಕುಕ್ಕರಹಳ್ಳಿ ವೈಚಾರಿಕ ಅಧ್ಯಯನದ ಕೃತಿ ಪರಿವರ್ತನಶೀಲ ದಲಿತ ಗ್ರಾಮದ ಚಿತ್ರಣವನ್ನು ಕಣ್ಮುಂದೆ ತರುತ್ತದೆ. ಅಲ್ಲದೆ ಈ ಕೃತಿಯು ಮೈಸೂರು ವಿಶ್ವವಿದ್ಯಾನಿಲಯದ ಬಿ.ಕಾಂ., ಬಿಬಿಎಂ., ಬಿಎಚ್ಎಂ., ಶಿಕ್ಷಣ ಪಡೆಯುತ್ತಿರುವ ಮೂರನೆ ಸೆಮಿಷ್ಟರ್ ವಿದ್ಯಾರ್ಥಿಗಳಿಗೆ ಅವಿಸ್ತರ ಪಠ್ಯ ವಿಷಯವಾಗಿದೆ. ಇವರ ಮತ್ತೊಂದು ಸುವಿಸ್ತಾರ ಕಾದಂಬರಿ ವಸುಂಧರೆ ಕೃತಿಯು ಇಂದಿನ ಪರಿಸರ ವಿನಾಶ, ಅಕ್ರಮ ಗಣಿಗಾರಿಕೆಯ ಸ್ಪಷ್ಟ ಚಿತ್ರಣವನ್ನು ಸಮುದಾಯದ ಕಣ್ಮುಂದೆ ತರುತ್ತದೆ.

ಈಚಿನ ತಲೆಮಾರಿನ ಮುಖ್ಯ ಲೇಖಕರಲ್ಲಿ ಒಬ್ಬರಾಗಿ ಶಿವರಾಮು ಕಾಡನಕುಪ್ಪೆ ಅವರು ಪ್ರಸಿದ್ಧರಾಗಿದ್ದಾರೆ. ಕಳೆದ ಎರಡುವರೆ ದಶಕಗಳಿಂದ ವಿದ್ವಾಂಸರಾಗಿ, ವಿಮರ್ಶಕರಾಗಿ ಹೋರಾಟಗಾರರಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಯಾವುದೆ ಸಿದ್ಧಾಂತ ಪಂಥ ಅಥವಾ ಪ್ರಕಾರವಿರಲಿ ಪ್ರಾಮಾಣಿಕವಾದ ಮತ್ತು ತೀವ್ರವಾದ ಸ್ಪಂದನ ಅಥವಾ ಪ್ರತಿಕ್ರಿಯೆಯನ್ನು ನೀಡುವ ಜಾಯಮಾನ ಅವರದು. ಸಾಹಿತ್ಯ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಲವಲವಿಕೆಯ ಮತ್ತು ವೈಚಾರಿಕತೆಯ ಆತ್ಮೀಯ ಸಂಬಂಧ ಕಲ್ಪಿಸಬಲ್ಲ ಸಮರ್ಥ, ವಿಚಾರವಂತ ಬರಹಗಾರ. ಪ್ರಾಚೀನ ಮತ್ತು ಆಧುನಿಕ ಸಾಹಿತ್ಯಗಳೆರಡರಲ್ಲೂ ಸಮಾನ ಆಸಕ್ತಿ, ಪರಿಣತಿಗಳನ್ನು ಹೊಂದಿರುವ ಶಿವರಾಮು ಕಾಡನಕುಪ್ಪೆ ಅವರು, ಅವುಗಳ ಮುಖ್ಯ ವಾಹಿನಿಗಳ ಬಗ್ಗೆ ಮತ್ತು ಸಾಹಿತ್ಯಿಕ ಸಾಂಸ್ಕೃತಿಕ ಸ್ಥಿತ್ಯಂತರಗಳ ಬಗ್ಗೆ ಮಾತನಾಡಬಲ್ಲವರಾಗಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರು ವಿಮರ್ಶಕರಾಗಿ ಆರಂಭದ ದಿನಗಳಲ್ಲಿ ಪ್ರಕಟಿಸಿದ 'ಸಮನ್ವಯ' ಮತ್ತು 'ಸಂವಹನ' ಕೃತಿಗಳು ಇಂದಿಗೂ ಗಮನ ಸೆಳೆಯುತ್ತವೆ. ಅವರ ವಿಮರ್ಶ ಪ್ರಜ್ಞೆಗೆ ಇವು ಉತ್ತಮ ನಿದರ್ಶನಗಳಾಗಿವೆ. ಕುವೆಂಪು ಕುರಿತ ಅವರ ವೈಚಾರಿಕ ಬರಹಗಳು ವಿಭಿನ್ನ ದೃಷ್ಟಿಯಲ್ಲಿ ಕುವೆಂಪು ಅವರನ್ನು ನೋಡಲು ಸಾಧ್ಯವಾಗಿದೆ ಎನಿಸುತ್ತದೆ. ಇವರ 'ನೀಲಿ ಚಂದ್ರಮ' ಕವನ ಸಂಕಲನ ಇವರು ಹಲವು ವರ್ಷಗಳಲ್ಲಿ ರಚಿಸಿರುವ ಕವನಗಳ ಸಂಗ್ರಹವಾಗಿದ್ದು, ಇವರ ಸೃಜನಶೀಲ ಪ್ರತಿಭೆಗೆ ಇದು ಸಾಕ್ಷಿಯಾಗಿ ನಿಲ್ಲುತ್ತದೆ. ಇವರು ಹೆಚ್ಚಿನ ಕೃತಿಗಳನ್ನು ಪ್ರಕಟಿಸಿಲ್ಲವಾದರೂ ಸಹ ಇವರು ಬರೆದಿರುವ ಎಲ್ಲಾ ಕೃತಿಗಳು ಓದುಗರ ದೃಷ್ಟಿಯಲ್ಲಿ ಮುಖ್ಯವಾಗಿರುವಂತೆ ನೋಡಿಕೊಂಡಿರುವುದನ್ನು ನಾವು ಕಾಣುತ್ತೇವೆ.

ಯಾವುದೆ ಪ್ರಗತಿಪರ ಚಳುವಳಿ ಅಥವಾ ಪ್ರತಿಭಟನೆಯಲ್ಲಿ ಶಿವರಾಮು ಕಾಡನಕುಪ್ಪೆ ಅವರು ಮುಂಚೋಣಿಯಲ್ಲಿ ನಿಲ್ಲುತ್ತಾರೆ. ಅದು ಭಾಷೆಯ ಪರವಾಗಿರಬಹುದು, ಮಹಿಳೆಯ ಪರವಾಗಿರಬಹುದು ಅಥವಾ ರೈತರ ಪರವಾಗಿರಬಹುದು. ಇಲ್ಲಿ ಅವರ ಕ್ರಿಯಾಶೀಲ ಪಾತ್ರ ಇರುವುದನ್ನು ನಾವು ಗಮನಿಸಬಹುದಾಗಿದೆ. ಪರಿವರ್ತನಶೀಲ ಸಮಾಜದಲ್ಲಿ ವೈಚಾರಿಕ ಉದಾರವಾದಿ ನೆಲಯಲ್ಲಿ ಸಮಾಜವನ್ನು ಗುಣಾತ್ಮಕವಾಗಿ ಕಟ್ಟುವ ಆಸಕ್ತಿಯುಳ್ಳ ಶಿವರಾಮು ಕಾಡನಕುಪ್ಪೆ ಅವರು, ಆಧುನಿಕ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲೊಂದಾದ ಬಂಡಾಯ ಸಂಘಟನೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಮಹಾತ್ಮಾ ಗಾಂಧೀಜಿ, ಅಂಬೇಡ್ಕರ್, ರಾಮ ಮನೋಹರ ಲೋಹಿಯಾ ಮೊದಲಾದವರ ವಿಚಾರ ಧಾರೆಗಳು ಹಾಗೂ ಆದರ್ಶಗಳಿಂದ ಪ್ರಭಾವಿತರಾಗಿರುವ ಶಿವರಾಮು ಕಾಡನಕುಪ್ಪೆ ಅವರು ಜಾತಿ ರಹಿತ ವರ್ಗರಹಿತ, ಧರ್ಮ ನಿರಪೇಕ್ಷ ಸಮಾಜದ ದೃಷ್ಟಿಯುಳ್ಳವರು. ಸಾಹಿತ್ಯದಲ್ಲಿ ಪಂಥ ಸಿದ್ಧಾಂತಗಳಿದ್ದರೆ ಅದನ್ನು ಮೀರಿ ಬೆಳೆಯುವ ಧೋರಣೆಯುಳ್ಳವರಾಗಿದ್ದಾರೆ.

ಕೇವಲ ಸಾಹಿತ್ಯ ರಚನೆಗೆ ಮಾತ್ರ ತಮ್ಮನ್ನು ತೊಡಗಿಸಿಕೊಳ್ಳದ ಶಿವರಾಮು ಕಾಡನಕುಪ್ಪೆ ಅವರು ಕಾಲೇಜು ದಿನಗಳಲ್ಲಿಯೇ ಕರ್ನಾಟಕ ವಿಚಾರವಾದಿ ಒಕ್ಕೂಟ, ಸಮಾಜವಾದಿ ಯುವಜನ ಸಭಾ, ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ, ಮಾನವ ಸೌಹಾರ್ದ ಸಮಿತಿ, ಮಾನವ ಮಂಟಪ ಸಂಘಟನೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಖಾಸಗಿ ಕಾಲೇಜು ಅಧ್ಯಾಪಕರ ಸಂಘದ ಮತ್ತು ಕ್ಷೇಮಾಭಿವೃದ್ಧಿ ಸಂಘದ ಸಾಂಸ್ಥಿಕ ಸದಸ್ಯರಾಗಿ, ಕರ್ನಾಟಕ ರಾಜ್ಯ ಸರ್ಕಾರಿ ಹಾಗು ಖಾಸಗಿ ಕಾಲೇಜು ಪ್ರಾಂಶುಪಾಲರ ವೇದಿಕೆಯ ಸ್ಥಾಪಕ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ಮೈಸೂರು ವಿಶ್ವ ವಿದ್ಯಾನಿಲಯದ ರೆಗ್ಯೂಲೇಷನ್ ಸಮಿತಿ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಎಂ.ಪಿ.ಎಲ್.ಇ.ಸಿ. ಸದಸ್ಯರಾಗಿ ಶಿವರಾಮು ಕಾಡನಕುಪ್ಪೆ ಅವರು ವಿವಿಧ ಸ್ಥರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. 'ವಸುಂಧರೆ' ಕಾದಂಬರಿಗೆ ಮಂಡ್ಯದ ಕರ್ನಾಟಕ ಸಂಘದಿಂದ 'ವರ್ಷಶ್ರೇಷ್ಠ ಕಾದಂಬರಿ' ಪ್ರಶಸ್ತಿ ಬಂದಿದೆ.

ಸೇವಾ ನಿವೃತ್ತಿಯ ಕೊನೆಯಲ್ಲಿರುವ ಇವರು ಮೈಸೂರಿನಲ್ಲಿ ವಾಸವಿದ್ದು, ಇವರ ಪತ್ನಿ ಸುವರ್ಣ ಅವರು ಕವಿಯತ್ರಿಯಾಗಿದ್ದಾರೆ. ಇವರ ಮಗಳು ಡಾ.ಸುಶಿ ಕಾಡನಕುಪ್ಪೆ ಅವರು ದಂತ ವೈದ್ಯೆಯಾಗಿ ಸೇವೆ ಸಲ್ಲಿಸುತ್ತಿದ್ದು, ಪುತ್ರ ನೇಸರ ಕಾಡನಕುಪ್ಪೆ ಅವರು ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಅಧ್ಯಾಯ – ೩

ಶಿವರಾಮು ಕಾಡನಕುಪ್ಪೆ ಅವರ ಸಾಹಿತ್ಯ

ಶಿವರಾಮು ಕಾಡನಕುಪ್ಪೆ ಅವರ ಬರವಣಿಗೆಯನ್ನು ರೂಪಿಸಿದ ಪ್ರಮುಖ ಅಂಶಗಳೆಂದರೆ, ಸಾಮಾಜಿಕ ಕಳಕಳಿ, ಮಹಿಳಾಪರವಾದ ಉದಾತ್ತ ಭಾವನೆ, ದಲಿತರ ಉದ್ಧಾರ, ವೈಚಾರಿಕ ಪ್ರಜ್ಞೆಯ ಅಗತ್ಯತೆ, ಭ್ರಷ್ಟ ರಾಜಕಾರಣದ ವಿರೋಧ ಮೊದಲಾದವುಗಳು. ಈ ಎಲ್ಲಾ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಹಲವಾರು ವಿಭಿನ್ನ ರೀತಿಯ ಕೃತಿಗಳ ರಚನೆ ಮಾಡಿದ್ದಾರೆ. ಕೆಲವು ಕೃತಿಗಳು ವಿಮರ್ಶಾ ನೆಲೆಯಲ್ಲಿ ರಚನೆಗೊಂಡಿವೆ. ಮತ್ತಷ್ಟು ಕೃತಿಗಳು ವಿವಿಧ ಲೇಖಕರು ಬರೆದಂತಹ ಲೇಖನಗಳ ಸಾರವನ್ನು ಒಳಗೊಂಡ ಸಂಪಾದಿತ ಕೃತಿಗಳಾಗಿವೆ. ಕೆಲವು ಆಧುನಿಕ ಸಮಾಜದಲ್ಲಿ ದುಡಿಯುವ ಜಾಗದಲ್ಲಿ ಶೋಷಣೆಗೆ ಒಳಗಾದ ಸ್ತ್ರೀಯರ ತುಮುಲ, ನೋವು, ದುಃಖವನ್ನು ಪ್ರತಿಬಿಂಬಿಸುವ ಕೃತಿಗಳಾಗಿದ್ದು, ಸ್ತ್ರೀಪರ ಚಿಂತನೆಯನ್ನು ಹೊಂದಿವೆ. ತಮ್ಮ ಜೀವನದ ಅನುಭವ ಮನಸ್ಸಿನ ಭಾವನೆಗಳನ್ನು ಕವನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಈ ರೀತಿಯ ಕೃತಿಗಳ ರಚನೆಗೆ ಪ್ರಭಾವ ಬೀರಿರುವ ಪ್ರಮುಖ ವ್ಯಕ್ತಿಗಳೆಂದರೆ, ಕುವೆಂಪು, ಲೋಹಿಯಾ, ಅಂಬೇಡ್ಕರ್ ಮುಂತಾದವರು. ಇವರ ಆದರ್ಶಗಳನ್ನು ತಮ್ಮದಾಗಿಸಿಕೊಂಡು ತಮ್ಮ ಕೃತಿಗಳಲ್ಲಿ ಅವುಗಳನ್ನು ಅಳವಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಈ ವಿಷಯುಗಳನ್ನು ಆಧಾರವಾಗಿಟ್ಟುಕೊಂಡು ಅವರ ಕೃತಿಗಳ ಬಗ್ಗೆ ಸಂಶೋಧನೆಯನ್ನು ಕೈಗೊಂಡಿದ್ದೇನೆ. ಅವರ ಕೃತಿಗಳನ್ನು ಅಧ್ಯಯನಕ್ಕೆ ಯೋಗ್ಯವಾಗಲೆಂದು ಈ ಕೆಳಕಂಡಂತೆ ವಿಭಾಗಿಸಿಕೊಳ್ಳಲಾಗಿದೆ.

೧. ಕಾವ್ಯ

೨. ಕಾದಂಬರಿ

೩. ವಿಮರ್ಶೆ

೪.ಚಿಂತನಾ ಬರಹಗಳು

೫. ಸಂಪಾದಿತಕೃತಿಗಳು

೧. ಕಾವ್ಯ

ಎಪ್ಪತ್ತರ ದಶಕದಲ್ಲಿ ಕನ್ನಡ ಸಾಹಿತ್ಯ ಹೊಸ ದಿಕ್ಕಿನೆಡೆಗೆ ಸಾಗುವ ದಿಶೆಯಲ್ಲಿತ್ತು. ಅಂತಹ ಸಂದರ್ಭದಲ್ಲಿ ಕನ್ನಡ ದಲಿತ ಬಂಡಾಯ ಸಾಹಿತ್ಯ ರೂಪುಗೊಳ್ಳುವ ಹಿನ್ನಲೆಯಲ್ಲಿ ಹೋರಾಟ ಮತ್ತು ಅಭಿವ್ಯಕ್ತಿಯನ್ನು ಪ್ರಮುಖ ಅಸ್ತ್ರವಾಗಿ ಮಾಡಿಕೊಂಡು ಸಾಹಿತ್ಯ ಕ್ಷೇತ್ರ ಮತ್ತು ಸಾರ್ವಜನಿಕ ಬದುಕನ್ನು ಪ್ರವೇಶಿಸಿ ಕನ್ನಡ ಸಾಹಿತ್ಯಕ್ಕೆ ತಮ್ಮದೆ ಕೊಡುಗೆಯನ್ನು ನೀಡಿದಂತಹ ಪ್ರಮುಖ ಕವಿಗಳಲ್ಲಿ ಶಿವರಾಮು ಕಾಡನಕುಪ್ಪೆ ಅವರು ಸಹ ಒಬ್ಬರಾಗಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರು ಕವಿತೆಗಳನ್ನು ರಚಿಸುವುದರ ಮೂಲಕ ತಮ್ಮ ಬರಹದ ಬದುಕನ್ನು ಪ್ರಾರಂಭಿಸಿದರು. ೧೯೯೯ರಲ್ಲಿ ತಮ್ಮ ಮೊಟ್ಟ ಮೊದಲ ಕವನ ಸಂಕಲನ 'ನೀಲಿ ಚಂದ್ರಮ' ಪ್ರಕಟಿಸಿದರು. ಅವರ ಈ ಕವನ ಸಂಕಲನವು ಜೀವನದಲ್ಲಿನ ರಹಸ್ಯಗಳನ್ನು ಶೋಧಿಸುವ ಹಾದಿಯಲ್ಲಿ ಹಲವಾರು ಅನುಭವಗಳ ಸಾರವನ್ನು ಅಡಗಿಸಿಕೊಂಡಿದೆ. ಈ ಕವನ ಸಂಕಲನವು ಹೆಸರಿಗೆ ತಕ್ಕಂತೆ ಔಚಿತ್ಯ ಪೂರ್ಣವಾದ ಕವಿತೆಗಳನ್ನು ಒಳಗೊಂಡಿದೆ. ಇಲ್ಲಿನ ಕವಿತೆಗಳಲ್ಲಿ ಸಾತ್ವಿಕ ಸಿಟ್ಟಿನ ಲಾವಾರಸ ಪ್ರವಹಿಸಿರುವುದನ್ನು ಕಾಣಬಹುದಾಗಿದೆ. ಇಲ್ಲಿನ ಕವಿತೆಗಳು ಅಷ್ಟೊಂದು ಮಾರ್ಮಿಕವಾಗಿ, ಸೌಂದರ್ಯಯುತವಾಗಿ ಬಿತ್ತರಗೊಳ್ಳದಿದ್ದರೂ, ಜೀವನದ ಅನುಭವಗಳ ಸಾರವನ್ನು ಪ್ರದರ್ಶಿಸುವ ಕವಿತೆಗಳಾಗಿವೆ.

ಆಧುನಿಕ ಸಮಾಜದ ಬದಲಾವಣೆಯಿಂದ ಉಂಟಾದ ಬವಣೆಯನ್ನು ಅವರ 'ನೆಲದ ಮಕ್ಕಳ ಹಾಡು' ಕವಿತೆಯಲ್ಲಿ ಅರ್ಥಪೂರ್ಣವಾಗಿ ವರ್ಣಿಸಿದ್ದಾರೆ.

"ಈ ರಾಮ ರಾಜ್ಯದುದಯಕ್ಕೆ
ನಮ್ಮ ರಕ್ತ ಸಮ ಹರಿದಿದೆ, ಬೆವರು ಸುರಿದಿದೆ.
ಅಲ್ಲಿ ಕನಸಿದ ನಮ್ಮ ಮಕ್ಕಳ ಸುಖ
ಕಾರ್ಖಾನೆ ಹೊಗೆ ಗೂಡಲ್ಲಿ ಬೆಂದು ಕರಿಕಾಗಿದೆ,
ಕಚೇರಿಗಳ ಕಡತಗಳಲ್ಲಿ ಧೂಳಾಗಿದೆ,
ಪೊಲೀಸು ಲಾಟಿ ಗುಂಡುಗಳಿಗೆ ಎದೆಯಾಗಿದೆ.
ಆದರೂ ಸಾಗಿದ್ದೇವೆ.
ನಮ್ಮ ಮಕ್ಕಳ ಮುಗ್ಧ ನಗುವ ಸವಿಯುತ್ತಾ
ಮತ್ತೆ ಅವರ ಸುಖ ಕನಸುತ್ತಾ" (ಪುಟ – ೭೫)

ಗಾಂಧಿ ಬಯಸಿದ ರಾಮ ರಾಜ್ಯದ ಕನಸನ್ನು ನನಸು ಮಾಡುವ ಹಾದಿಯಲ್ಲಿ

ಭಾರತೀಯರು ರಕ್ತ ಮತ್ತು ಬೆವರು ಸುರಿಸಿ ದುಡಿಯುತ್ತಿದ್ದಾರೆ. ಆದರೆ ಆಧುನಿಕರಣದ ಫಲದಿಂದಾಗಿ ಎಲ್ಲೆಡೆ ಕಾರ್ಖಾನೆಗಳು ತಲೆಎತ್ತಿ ನಿಂತಿವೆ. ಅವುಗಳಿಂದ ವಿಷಾನಿಲಗಳು ಹೊರಬಂದು ನಮ್ಮ ದೇಶದ ಮಕ್ಕಳ ಸುಖವನ್ನು ಬೇಯಿಸಿ ಕರಕಲಾಗಿಸುವ ಪ್ರಯತ್ನದಲ್ಲಿವೆ. ಆದರೂ ನಮ್ಮ ಜನ ಉತ್ತಮ ಸಮಾಜದ ಬರುವಿಕೆಗಾಗಿ ಕಾತರದಿಂದ ಕಾಯುತ್ತಾ ತಮ್ಮ ಎದೆಯನ್ನು ಪೊಲೀಸರ ಲಾಠಿ, ಗುಂಡುಗಳಿಗೆ ಒಡ್ಡುತ್ತಾ ಮುಂದೆ ಸಾಗುತ್ತಿರುವುದನ್ನು ಕಾಣಬಹುದು. ತಮ್ಮ ಛಲದಿಂದ ದುಡಿಮೆ ಮಾಡಿ, ಬೆವರ ಫಲವನ್ನು ನಿರೀಕ್ಷಿಸುತ್ತಾ ತಮ್ಮ ಹಕ್ಕಿಗಾಗಿ ಹೋರಾಡುತ್ತಾ ಮುಂದೆ ಸಾಗುವ ಹಂಬಲದ ನೋಟ ಕಾಣ ಸಿಗುತ್ತದೆ.

" ನಾವು ಬಂಡಾಯದವರು,
ಮರಗಳನ್ನು ಕಡಿಯುವುದಿಲ್ಲ
ಕಡಿದ ಜಾಗದಲ್ಲಿ ಹೊಸ ಹಸಿರ
ಮೂಡಿಸುತ್ತೇವೆ.
ಬಣ್ಣ ಜಾತಿ ಎಣಿಸುವುದಿಲ್ಲ
ನಿವಾರಿಸುತ್ತೇವೆ.
ಮಿಶ್ರಗೊಂಡ ಸಮಾನತಳಿ ಸೃಷ್ಟಿಸುತ್ತೇವೆ." (ಪುಟ – ೭೧)

ಈ ಸಾಲುಗಳು 'ಬಂಡಾಯಗಾರರು' ಕವಿತೆಯ ಸಾಲುಗಳಾಗಿದ್ದು, ಕವಿಗಳು ಬಂಡಾಯಗಾರರಾಗಿದ್ದರು ಯಾವುದೆ ಕ್ರೂರತನದ ವರ್ತನೆಯನ್ನು ಮಾಡದೆ ಸರಳ ಸುಂದರ ಸಮಾಜವನ್ನು ಜಾತಿ ಬೇಧವಿಲ್ಲದೆ, ಸಮಾನತೆಯಿಂದ ಕೂಡಿ ಬಾಳುವ, ಮಿಶ್ರ ಕುಟುಂಬವನ್ನು ಕಟ್ಟುವ ಕನಸು ಕಾಣುತ್ತಾರೆ, ಹಿಂಸೆಯನ್ನು, ಅಸಮಾನತೆಯನ್ನು ತೊಲಗಿಸಿ ಶಾಂತಿಯ ವಾತಾವರಣವನ್ನು ಸೃಷ್ಟಿಸಲು ಇಚ್ಛಿಸುತ್ತಾರೆ. ಎಲ್ಲರಿಗೂ ಪ್ರೀತಿಯನ್ನು ಹಂಚಿ ಪ್ರೀತಿ ಪೂರ್ವಕ ಜೀವನವನ್ನು ನಡೆಸುವುದರ ಮೂಲಕ ತಮ್ಮ ಸುತ್ತಮುತ್ತಲಿನ ಪ್ರಾಣಿ ಪಕ್ಷಿಗಳನ್ನು ನೆಲ ಗಾಳಿ ಜನರನ್ನು ಪ್ರೀತಿಯಿಂದ ಕಾಣುವ ಸಂದೇಶ ನೀಡುತ್ತಾರೆ. ಒಟ್ಟಾರೆ ಈ ಕವಿತೆಯಲ್ಲಿ ಪ್ರೀತಿಯಿಂದ, ಪ್ರೀತಿಗಾಗಿ, ಪ್ರೀತಿಗೋಸ್ಕರ ಎಂಬ ನಿಯಮವನ್ನು ಪಾಲಿಸಿದ್ದಾರೆ.

ಮಹಲುಗಳನ್ನು ಉಳಿಸಿ ಅವುಗಳನ್ನು ಶಾಂತಿಯ ನಿವೇಶನಗಳನ್ನಾಗಿ ಬೆಳೆಸುವ ಹಾಗೂ ಗುಡಿಸಲುಗಳನ್ನು ನಂದನವನಗಳನ್ನಾಗಿ ಮಾಡುವ ಕನಸು ಕಂಡಿದ್ದಾರೆ. ನೊಂದು ಬೆಂದಿರುವ ಹೆಣ್ಣುಗಳಿಗೆ ಸಾಂತ್ವನ ನೀಡಿ, ಸುಂದರ ವಾತಾವರಣ ಸೃಷ್ಟಿಸುವ ಬಂಡಾಯದವರಾಗಿ, ಕಾಯಕ ಯೋಗವನ್ನು ತಮ್ಮದಾಗಿಸಿಕೊಳ್ಳುವ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ.

'ಕೆಲವು ಪದ್ಯಗಳು' ಎಂಬ ಕವಿತೆಯಲ್ಲಿ ಮತಾಂಧತೆಯಿಂದ ಉಂಟಾಗುವ ಪರಿಣಾಮ, ಗುಂಡಿಗೆ ಬಿದ್ದು ಧೈರ್ಯದಿಂದ ಮೇಲೇಳುವ ಕಲೆಯನ್ನು ಕಲಿಯುವ ಚಿತ್ರಣವನ್ನು ನೀಡಲಾಗಿದೆ.

ಮತಾಂಧತೆ :

"ಮತಾಂಧತೆ ಎನ್ನುವುದು
ನೀವು ಗುರಿಯಿರದ
ಸಾಧನೆಗೆ
ಶ್ರಮವನ್ನು ದ್ವಿಗುಣಗೊಳಿಸುತ್ತಾ ಸಾಗಿ
ಕೊನೆಗೆ
ನಿರ್ವೀರ್ಯಗೊಳ್ಳುವ ಕ್ರಿಯೆ" (ಪುಟ – ೬೪)

ನಮ್ಮ ಭಾರತದಲ್ಲಿ ಮತಾಂಧತೆ ಎನ್ನುವುದು ಭೂತವಾಗಿ ಬೆಳೆದು ನಿಂತಿದೆ. ಜನ ಇದನ್ನು ಕಿತ್ತು ಹಾಕುವ ಬದಲು, ಅದನ್ನು ಬೆಳೆಸಲು ತಮ್ಮ ಶ್ರಮವನ್ನು ಮುಡುಪಾಗಿಟ್ಟು ಗುರಿಯಿಲ್ಲದೆ ಮುಂದು ಸಾಗುತ್ತಿದ್ದಾರೆ. ಇದರಿಂದ ಯಾವುದೆ ಗುರಿಯನ್ನು ಸಾಧಿಸಲು ಸಾಧ್ಯವಿಲ್ಲ. ಜಗದಲ್ಲಿನ ಮತದ ಭೂತವನ್ನು ಬೇರು ಸಮೇತ ಕಿತ್ತುಹಾಕಿ ಬಾಂಧವ್ಯದಿಂದ ಸಹಬಾಳ್ವೆ ನಡೆಸಬೇಕೆಂದಿದ್ದಾರೆ.

ಗುಂಡಿಗೆ ಬಿದ್ದವನು :

"ಹೆದರಿಕೆಯೆಂಬ
ಗೊಬ್ಬರದ ಗುಂಡಿಗೆ ಯಾವನು ಬೀಳಬಲ್ಲನೋ
ಅವನೇ ಅಲ್ಲಿಂದೇಳುವ ಕಲೆಯ ಬಲ್ಲ !
ಕಲೆತು ಧೈರ್ಯದಿ ಗರ್ಜಿಸಬಲ್ಲ !" (ಪುಟ – ೬೩)

ಯಾರಿಗೆ ಜೀವನದಲ್ಲಿ ಕಷ್ಟವೆಂಬುದು ಬರುತ್ತದೊ ಅವನು ಅದನ್ನು ನಿಭಾಯಿಸಿ ಸುಖದ ಹಾದಿಯನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಹಾಗೆಯೇ ಯಾವುದೇ ವ್ಯಕ್ತಿ ಹೆದರಿಕೆಯೆಂಬ ಗುಂಡಿಗೆ ಬಿದ್ದಾಗ ಹೇಗಾದರೂ ಮಾಡಿ ಅಲ್ಲಿಂದ ಪಾರಾಗಿ ಮೇಲೆ ಬರುವ ಪ್ರಯತ್ನವನ್ನು ನಿರಂತರವಾಗಿ ಮಾಡಬಲ್ಲವನಾಗಿರುತ್ತಾನೆ. ಅವಿರತ ಪ್ರಯತ್ನದಿಂದ ಗುರಿಮುಟ್ಟಿ ಮೇಲೆ ಬರುವ ಕಲೆಯನ್ನು ಕರಗತ ಮಾಡಿಕೊಂಡು ಧೈರ್ಯದಿಂದ ಮುನ್ನುಗುತ್ತಾನೆ. ಆದ್ದರಿಂದ ಪ್ರತಿಯೊಬ್ಬರು ಕಷ್ಟವನ್ನು ಸಹಿಸಿ ಧೈರ್ಯದಿಂದ ಮುಂದೆ ಸಾಗಿದಾಗ ನಮ್ಮ ಗುರಿ

ತಲುಪುವಲ್ಲಿ ಸಫಲರಾಗುತ್ತೇವೆ ಎಂಬ ಸಂದೇಶ ನೀಡಿದ್ದಾರೆ.

'ಮತ್ತೆ ಮಳೆ ಬರಲಿಲ್ಲ' ಎಂಬ ಕವಿತೆಯಲ್ಲಿ ಮಳೆ ಬಾರದೆ ಪ್ರಕೃತಿಯಲ್ಲಿ ಉಂಟಾದ ಬದಲಾವಣೆಯನ್ನು, ರೈತನ ಕಷ್ಟವನ್ನು, ಸುಡು ಬಿಸಿಲ ಬೇಗೆಯನ್ನು ವರ್ಣಿಸಿದ್ದಾರೆ.

"ನೆಲ ಬಿರಿದು ಮನ ಬಿರಿದು ನಿಂತಿದೆ
ಮರದ ಮೇಲೆ ಕೋಗಿಲೆ ದನಿ ಸೊರಗಿದೆ
ಬರಿದಾದ ಕೆರೆ ಮಣ್ಣು ಒಣ ಚಿತ್ತಾರ ಬರೆದಿದೆ
ಆದರೂ ಮತ್ತೆ ಮಳೆ ಬರಲಿಲ್ಲ" (ಪುಟ – ೭೩)

ಮಳೆ ಬಾರದೆ ಭೂಮಿಯ ಒಡಲೆಲ್ಲಾ ಒಣಗಿ ತರಗೆಲೆಯಂತಾಗಿದೆ. ಮರದಲ್ಲಿ ಚಿಗುರು, ಹಸಿರೆಲೆಗಳಿಲ್ಲದೆ ಕೋಗಿಲೆಗಳು ಕೂಗುವುದನ್ನೆ ನಿಲ್ಲಿಸಿವೆ. ನೀರಿನಿಂದ ನಳ ನಳಿಸುತ್ತಿದ್ದ ಕೆರೆಗಳೆಲ್ಲಾ ಬತ್ತಿ ಕೆರೆಯ ಮಣ್ಣಿನಲ್ಲಿ ಒಡಕಲು ಚಿತ್ತಾರಗಳನ್ನು ಕಾಣಬಹುದಾಗಿದೆ.

ಇಷ್ಟೆಲ್ಲಾ ಹೀನ ಸ್ಥಿತಿಯಿದ್ದರು, ಮತ್ತೆ ಮಳೆ ಬಾರದೆ ಕಷ್ಟದ ವಾತಾವರಣವನ್ನು ಸೃಷ್ಟಿಸಿದೆ. ಇದರಿಂದ ಬರಗಾಲದ ಸ್ಥಿತಿ ಉಂಟಾಗಿದೆ. ಪ್ರತಿಯೊಬ್ಬ ರೈತರು ಮಳೆಯ ನಿರೀಕ್ಷೆಯಲ್ಲಿ, ಪ್ರತಿನಿತ್ಯ ಆಕಾಶವನ್ನು ದಿಟ್ಟಿಸಿ ನೋಡಿ ಕತ್ತು ನೋವು ಮಾಡಿಕೊಂಡಿದ್ದಾರೆ. ಅವರ ನೇಗಿಲುಗಳಿಂದ ಭೂಮಿ ತಾಯಿಯನ್ನು ಉತ್ತು ಉತ್ತಮ ಬೆಳೆ ತೆಗೆಯಬೇಕೆಂಬ ನೆಲದ ಮಕ್ಕಳ ಆಸೆ ನುಚ್ಚು ನೂರಾಗಿರುವುದನ್ನು ಕಾಣಬಹುದು.

'ನೇಸರ' ಎಂಬ ಕವಿತೆಯಲ್ಲಿ ಮಗುವಿನ ಆಗಮನದಿಂದ ಉಂಟಾಗುವ ಸಂತೋಷ, ಮಗುವಿಲ್ಲದಾಗಿನ ಸ್ಥಿತಿಯ ವರ್ಣನೆಯಿದೆ.

"ಇವ ನೇಸರ
ಇಡಿ ನಮ್ಮ ಮನೆ ಇವನಿಂದ ಬೆಳಕಿನ,
ಮಹಾಪೂರ – ಇಲ್ಲವೆ
ಏಳು ಸಮುದ್ರದ ಒತ್ತಡ, ದುಃಖದ ಭಾರ.
ಮೋಡ ಮುಸುಕಿ ಜಗತ್ತೆಲ್ಲ ಕತ್ತಲೆಯಿಲ್ಲದ
ಕತ್ತಲು
ಎಲ್ಲಿ ಹೋದೆ ನೇಸರ ? ನಿನ್ನ ನಗುವ ನಗು
ಬಾ ನೇಸರ

ಹಗಲು ರಾತ್ರಿಗಳ ಒಂದು ಮಾಡು.
ತೊಟ ತೊಟ ತೊಟ್ಟಿಕ್ಕುವ ಹೆಮ್ಮಾರಿ
ದುಃಖ ಮಳೆಯ ಹೊಡೆದೋಡಿಸು ಬಾ." (ಪುಟ – ೪೨)

ಮಗುವಿನ ಜನನದಿಂದ ಮನೆ ಮಂದಿಯೆಲ್ಲಾ ಸಂತೋಷ ಹೊಂದಿ ಮನೆಯಲ್ಲಿ ಬೆಳಕಿನ ಮಹಾಪೂರ ಉಂಟಾಗುತ್ತದೆ. ಮಗುವಿಲ್ಲದ ಮನೆ ಒತ್ತಡ ಮತ್ತು ಸಂಕಟದಿಂದ ಕೂಡಿರುತ್ತದೆ. ಸೂರ್ಯನಿಲ್ಲದ ಕಲ್ಪನೆ ಸಾಧ್ಯವಿಲ್ಲವೋ ಹಾಗೆ ಮಗುವಿಲ್ಲದೆ, ಮಗುವಿನ ನಗುವಿಲ್ಲದೆ ಇರಲು ಸಾಧ್ಯವಿಲ್ಲ. ಮಗು ಮನೆ ಮಂದಿಯಲ್ಲಿರುವ ದುಃಖವನ್ನೆಲ್ಲಾ ತನ್ನ ಕಿಲಕಿಲ ನಗುವಿನಿಂದ ಓಡಿಸಿ ಆನಂದದ ವಾತಾವರಣವನ್ನು ಉಂಟು ಮಾಡುತ್ತದೆ ಎಂದಿದ್ದಾರೆ.

'ಸಾವು ಸಾಯಲೇ ಬೇಕಾಗಿ ಬಂದರೆ' ಕವಿತೆಯಲ್ಲಿ ಕವಿ ಸಾಯುವುದಕ್ಕೂ ಮುನ್ನ ಪ್ರಕೃತಿಯಲ್ಲಿ ಹರಿಯುವ ನದಿಗಳನ್ನು, ಕಲರವ ಪ್ರಾಣಿ ಪಕ್ಷಿಗಳ ಸಂತೋಷದ ನಗೆಯನ್ನು ನೋಡಲು ಬಯಸುತ್ತಾರೆ. ಜಗತ್ತಿನ ಹಲವಾರು ಜನ ದುಃಖದಿಂದ, ನೋವಿನಿಂದ ನರಳುತ್ತಿದ್ದಾರೆ. ಅಂತಹ ಜನರು ಕ್ಷಣ ಕಾಲವಾದರೂ ನರಳಾಟವನ್ನು ಮರೆತು ನಗು ನಗುತ್ತಾ ಇರುವಂತೆ ಮಾಡಲು ಇಚ್ಛಿಸುತ್ತಾರೆ. ಹಿಂದಿನ ಇತಿಹಾಸವನ್ನು ಗಮನಿಸಿದಾಗ ಅಹಂಕಾರಿಗಳು ದೇಶ ನಾಶ ಮಾಡಿ ಮೆರೆದಾಡಿದ್ದಾರೆ. ಅಂತಹ ಜನರು ಸತ್ತು ಬಿದ್ದಿರುವುದನ್ನು ನೋಡಬೇಕೆಂದಿದ್ದಾರೆ. ಈ ಎಲ್ಲಾಕರ್ತವ್ಯಗಳನ್ನು ಮುಗಿಸಿದ ಮೇಲೆ ಸಾಯುವುದರಲ್ಲಿಯೂ ಆನಂದ ಕಾಣುತ್ತೇನೆ ಎಂದಿದ್ದಾರೆ.

'ಸಾವು – ೩' ಕವಿತೆಯಲ್ಲಿ ಸಾವಿನ ವಿವಿಧತೆಯನ್ನು ಕಾಣಬಹುದು. ಸಾವು ಎಲ್ಲರಲ್ಲಿಯೂ ಒಂದೆ ರೀತಿಯಲ್ಲಿ ಬರುವುದಿಲ್ಲ. ಕೆಲವು ಸಾವುಗಳು ಅನಿರೀಕ್ಷಿತವಾಗಿ ಸಿಡಿಲಿನಂತೆ ಬಂದು ಅಪ್ಪಳಿಸುತ್ತವೆ. ನಮ್ಮನ್ನು ಮರಗಟ್ಟುವಂತೆ ಮಾಡುತ್ತವೆ ಉದಾ : ಹೃದಯಾಘಾತ. ಇದು ಮನುಷ್ಯನನ್ನು ಕ್ಷಣ ಕಾಲದಲ್ಲಿ ಆವರಿಸಿ ಇಹಲೋಕ ಯಾತ್ರೆಯನ್ನು ಮುಗಿಸುವಂತೆ ಮಾಡುತ್ತದೆ. ಕೆಲವು ಸಾವುಗಳು ನಿರಂತರವಾಗಿ ನಮ್ಮನ್ನು ಕಾಡಿ, ಸಾಕಪ್ಪ ಈ ಬದುಕು ಎಂಬಂತಹ ಸ್ಥಿತಿಗೆ ಕರೆದುಕೊಂಡು ಹೋಗುತ್ತವೆ. ಮತ್ತೆ ಕೆಲವು ಸಾವುಗಳು ಯಾವುದೊ ವರ ಪ್ರಸಾದದಂತೆ ಬಂದು ಜಗತ್ತಿನಿಂದ ಬಿಡುಗಡೆಯ ಆನಂದವನ್ನು ತುಂಬಿಸಿ, ನಮಗೆ ಗೊತ್ತಾಗಿಯೂ ಗೊತ್ತಿಲ್ಲದಂತೆ ಕರೆದುಕೊಂಡು ಹೋಗುವ ಗುಣವನ್ನು ಹೊಂದಿರುತ್ತದೆ ಎಂದಿದ್ದಾರೆ.

'ದೇವರು – ರಾಕ್ಷಸ' ಕವಿತೆಯಲ್ಲಿ ಪ್ರಕೃತಿಯ ಸೌಂಧರ್ಯಕ್ಕೆ ಮಿಗಿಲಾದುದು ಯಾವುದು ಇಲ್ಲ ಎಂಬುದನ್ನು ತಿಳಿಸಿದ್ದಾರೆ.

"ನಾನು ಕ್ಷಣ ನಿಶ್ಚಲ ನಿಂತೆ:
ಭುವಿಯಲ್ಲಿ ಬೆಳೆದು ನಿಂತ
ಗಿಡ ಮರ ಹೂ ಬಳ್ಳಿ ಕಾಯಿ
ಸಮೃದ್ಧ ತೊನೆದವು.
ನಾನು ದೇವನಿಗೆ ಬರುವುದಿಲ್ಲ ಎಂದೆ." (ಪುಟ – ೧೭)

ಕವಿಗೆ ಒಮ್ಮೆ ಕೈ ತೋಟದಲ್ಲಿ ಒಂದು ಆಶ್ಚರ್ಯ ಕಾದಿತ್ತು. ಕವಿಯನ್ನು ಕರೆದುಕೊಂಡು ಹೋಗಲು ಕಿರೀಟಧಾರಿಯಾದ ದೇವರು ಧರೆಗಿಳಿದು ಬಂದಿದ್ದ. ಅವನ ಜೊತೆಯಲ್ಲಿ ದಪ್ಪ ಮೀಸೆಯನ್ನುಳ್ಳ ರಾಕ್ಷಸನು ಬಂದಿದ್ದ. ದೇವರು ಸ್ವರ್ಗದ ಕಡೆ ಕೈ ತೋರಿಸಿ ಬಾ ಎಂದು ಕರೆದು ಕವಿಯನ್ನು ಆಹ್ವಾನಿಸಿದ. ರಕ್ಕಸ ಭೂಮಿಯ ಕಡೆಗೆ ಕೈ ತೋರಿ ಭುವಿಯ ವಾಸನೆ ಎಷ್ಟು ಚಂದವಾಗಿದೆ ನೋಡು ಎಂದ. ಆಗ ಕವಿಗೆ ಸ್ವರ್ಗಕ್ಕಿಂತ ಪ್ರಕೃತಿಯ ಸೌಂದರ್ಯ, ಗಿಡ ಮರ ಹೂ ಬಳ್ಳಿ ಕಾಯಿಗಳ ಸಮೃದ್ಧತೆಯನ್ನು ಬಿಟ್ಟು ಹೋಗಲು ಇಚ್ಚೆಯಾಗಲಿಲ್ಲ. ಆದ ಕಾರಣ ದೇವರ ಆಹ್ವಾನವನ್ನು ತಿರಸ್ಕರಿಸಿದ.

'ಕತ್ತಲೆ ಖಾಲಿಯಲ್ಲ' ಕವಿತೆಯಲ್ಲಿ ಜೀವನ ಚಕ್ರದಲ್ಲಿ ಒಂದು ವಸ್ತು ಮತ್ತೊಂದು ವಸ್ತುವನ್ನು ಆಶ್ರಯಿಸಿರುವ ಚಿತ್ರಣವನ್ನು ಕಾಣಬಹುದಾಗಿದೆ.

" ನಕ್ಷತ್ರ ನಕ್ಕರೆ ಮಿಂಚು ಹುಳು
ಹಾಡುತ್ತಿತ್ತು.
ಗೂಬೆ ಬಾವಲಿ ಇಲಿ ಹಾವು
ಜೀವ ಸಮರ !
ಪ್ರಕೃತಿ ಚಕ್ರ ತಿರುಗುತ್ತಿತ್ತು.
ಕಪ್ಪಗೆ ಗಾಳಿಗೆ ತೂಗುವ ಮರ
ಸೊಯ್ಯೆನ್ನುವ ಗಾಳಿ
ದೂರದ ಮನೆಯ ಎಳೆ ಕಂದನ ಅಳು
ಎಲ್ಲವೂ
ಇಹದ ಬೆಳಕಿನಿರುವನ್ನು
ಮೂಡಿಸಿದ್ದವು." (ಪುಟ – ೧೮)

ಪ್ರಕೃತಿ ಚಕ್ರದಲ್ಲಿ ಪ್ರತಿಯೊಂದು ವಸ್ತುಗಳು ಒಂದನ್ನು ಮತ್ತೊಂದು ಆಶ್ರಯಿಸಿರುತ್ತವೆ.

ಹಾವು ಇಲಿಯನ್ನು ತನ್ನ ಆಹಾರಕ್ಕಾಗಿ ಆಶ್ರಯಿಸಿದ್ದರೆ, ಗೂಬೆಯು ಬಾವಲಿಯನ್ನು ಆಶ್ರಯಿಸಿದೆ. ನಕ್ಷತ್ರದ ಮಿಂಚಿನಲ್ಲಿ ಮಿಂಚು ಹುಳುಗಳು ಮಿನುಗುವುದನ್ನು ಕಾಣಬಹುದು. ಕತ್ತಲೆಯ ನಂತರ ಬೆಳಕು ಮೂಡುವುದು ಪ್ರಕೃತಿಯ ನಿಯಮ. ಪ್ರಕೃತಿಯ ವೈಚಿತ್ರವನ್ನು ನೋಡಲು ಕತ್ತಲೆ ಬೇಕೇ ಬೇಕು. ಅದು ಖಾಲಿಯಲ್ಲ ಬೆಳಕಿನ ತಾಯಿ ಎಂದಿದ್ದಾರೆ ಕವಿ.

'ಮೆದುವಾಗು ಕವಿತೆಯೆ' ಕವಿತೆಯಲ್ಲಿ ಮಾನವತೆಯಿಂದ, ಸ್ನೇಹ ಭಾವನೆಯಿಂದ, ಮನಬಿಚ್ಚಿ ಎಲ್ಲವನ್ನು ವೀಕ್ಷಿಸುವ ಸಂದೇಶ ನೀಡಿದ್ದಾರೆ.

" ಆರ್ಭಟ ರೊಚ್ಚು ಭಾವದ ಹುಚ್ಚು
ತರುವುದಿಲ್ಲ ಸ್ನೇಹ ಕೊಡುವುದಿಲ್ಲ ಮನ ;
ಎದೆ ತುಂಬ ಕೊಡುವುದ ಕಲಿಸು
ಮನ ತುಂಬುವ ಲೋಕಾಲಿಂಗನದ ಕನಸು."   (ಪುಟ – ೦೧)

ಜೀವನದಲ್ಲಿ ಕಿರುಚಾಡಿ, ಗುದ್ದಾಡಿ ಮಾನಸಿಕ ತುಮುಲಗಳನ್ನು ಹೊರ ಚಲ್ಲುವುದರಿಂದ ಶಾಂತಿ ವಾತಾವರಣ ಕಂಡು ಬರುವುದಿಲ್ಲ. ಸ್ನೇಹ ಭಾವನೆ ಕಾಣಿಸುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ಮನಃಪೂರ್ವಕವಾಗಿ ಎಲ್ಲರಿಗೂ ಸ್ನೇಹವನ್ನು ಹಂಚಿ ಎಲ್ಲರ ಜೊತೆ ಬಾಳುವ ಮೃದು ಭಾವನೆಯನ್ನು ನೀಡುವಂತೆ ಕೇಳಿಕೊಂಡಿದ್ದಾರೆ. ಪ್ರತಿಯೊಂದು ಪ್ರಾಣಿ ಪಕ್ಷಿಗಳಲ್ಲಿ, ಹುಲ್ಲು ಸಸಿಗಳಲ್ಲಿಯೂ ನೋವಿನ ಎಳೆಗಳಿರುತ್ತವೆ. ಅದನ್ನು ಮನಬಿಚ್ಚಿ ನೋಡುವುದನ್ನು ಕಲಿಯಬೇಕು. ಮಗುವಿನ ನಗುವಿನಂತೆ, ಶ್ರೀಗಂಧದ ಸುವಾಸನೆಯಂತೆ ನಮ್ಮ ಮನ ಮೆದುವಾಗಿರಬೇಕೆಂದು ಕೇಳಿಕೊಂಡಿದ್ದಾರೆ.

'ಕಳಚಬೇಕಿದೆ ದೃಷ್ಟಿಗಡ್ಡವಿರುವ ಬಟ್ಟೆ' ಕವಿತೆಯಲ್ಲಿ ಪ್ರಕೃತಿ ತಾಯಿ ಮಡಿಲಲ್ಲಿ ಬೆಳೆದು ದೊಡ್ಡವನಾದ ಮಾನವ ಇಂದು ಪ್ರಕೃತಿ ಮಾತೆಯನ್ನೇ ಬರಿದು ಮಾಡುವ ಪ್ರಯತ್ನದಲ್ಲಿದ್ದಾನೆ. ಮಾನವ ಭೂಮಿಯ ಮೇಲೆ ಮೊದಲು ಹುಟ್ಟಿದಾಗ ಪ್ರಕೃತಿಯಲ್ಲಿನ ಮರ ಹೂ ಗಿಡಗಳ ಸುಖ, ಹಕ್ಕಿಗಳ ಇಂಪಾದ ದನಿಯನ್ನು ಮಾತು ಬಾರದಿದ್ದರೂ ಎಲ್ಲವನ್ನು ಅರ್ಥಮಾಡಿಕೊಂಡು ಸಂವಾದ ನಡೆಸುತ್ತಿದ್ದ. ಅದೇ ಪ್ರಕೃತಿಯ ಪಾಲನೆ ಪೋಷಣೆಯಿಂದ ಬಲಿತ ಮನುಷ್ಯ ಪರಿಸರ ನಾಶ ಮಾಡುವ ಕಾಯಕಕ್ಕೆ ತನ್ನನ್ನು ತೊಡಗಿಸಿಕೊಂಡಿದ್ದಾನೆ. ಹಿಂದೆ ಪರಿಸರ ಹೇಗಿತ್ತೋ ಹಾಗೆಯೇ ಇದೆ. ಆದರೆ ಬಟ್ಟೆ ಧರಿಸಿದ ಮಾನವ, ಕಿವಿ ಇದ್ದು ಕಿವುಡನಂತೆ, ಕಣ್ಣಿದ್ದು ಕುರುಡನಂತೆ, ಮಾತು ಬಂದರೂ ಮೂಗನಂತೆ ವರ್ತಿಸುತ್ತಿದ್ದಾನೆ. ಇಂತಹ ನಡತೆಯನ್ನು ಬದಲಾಯಿಸಿಕೊಂಡು ಪ್ರಕೃತಿಯ ಸಂರಕ್ಷಣೆಗೆ ಅಡಿಯಿಡಬೇಕೆಂದು ತಿಳಿಸಿದ್ದಾರೆ.

'ನಗಬಹುದು ನೊಂದ ಜೀವ' ಕವಿತೆಯಲ್ಲಿ ಸ್ವಿಟೇನಿಯಾ ಮಹಾಗನಿ ಮರದ ಬಗ್ಗೆ ತಿಳಿಸಿದ್ದಾರೆ. ಕಷ್ಟ ಕಳೆದ ನಂತರ ಸುಖ ಬಂದೆ ಬರುತ್ತದೆ. ವಾತಾವರಣದಲ್ಲಿ ವಿವಿಧ ಕಾಲಗಳನ್ನು ಕಾಣಬಹುದು. ಬೇಸಿಗೆ ಕಾಲದಲ್ಲಿ ಮರ ಗಿಡಗಳು ಒಣಗಿದ್ದರೆ, ಮಳೆ ಗಾಲದಲ್ಲಿ ಹಸಿರಿನಿಂದ ತೋಯ್ದಾಡುತ್ತವೆ. ವಸಂತ ಕಾಲದಲ್ಲಿ ಎಲೆ ಹೂ ರೆಂಬೆ ಕೊಂಬೆಗಳಲ್ಲಿ ಕಂಗೊಳಿಸುತ್ತವೆ. ಮಳೆ ಬಂದರೆ ಬೆಳೆ, ನೊಂದ ಜೀವಕ್ಕೆ ನಗು ಬರುವುದು.

'ಇದು ಉತ್ತಮ ಪ್ರಿಯೆ' ಕವಿತೆಯಲ್ಲಿ ಗುಲಾಮನಾಗಿರುವುದಕ್ಕಿಂತ ಸ್ವಾಭಿಮಾನಿಯಾಗಿ ಸ್ವತಂತ್ರವಾಗಿ ಜೀವಿಸಬೇಕೆಂದಿದ್ದಾರೆ.

"ಸಾಯುವುದಕ್ಕಿಂತ ಬದುಕುವುದು
ದ್ವೇಷಕ್ಕಿಂತ ಪ್ರೀತಿಸುವುದು
ನಾಶ ಮಾಡುವುದಕ್ಕಿಂತ ಸೃಷ್ಟಿಸುವುದು
ಸುಮ್ಮನಿರುವುದಕ್ಕಿಂತ
ಏನಾದರೊಂದು ಒಳಿತು ಮಾಡುವುದು
ಎಲ್ಲಕ್ಕಿಂತ ಮಿಗಿಲಾಗಿ
ಗುಲಾಮನಾಗಿರುವುದಕ್ಕಿಂತ ಸ್ವತಂತ್ರನಾಗಿರುವುದು." (ಪುಟ – ೫೪)

ಜಗತ್ತಿನಲ್ಲಿ ಹುಟ್ಟಿದ ಮೇಲೆ ನಾವು ಒಳ್ಳೆಯ ಕಾರ್ಯವನ್ನು ಮಾಡಬೇಕು. ಜನರನ್ನು ದ್ವೇಷ ಮಾಡುವ ಬದಲು ಪ್ರೀತಿಯಿಂದ ಕಾಣಬೇಕು. ವಸ್ತುಗಳನ್ನು ನಾಶ ಮಾಡದೆ ಸೃಷ್ಟಿಸುವ ಕಾರ್ಯ ಮಾಡಬೇಕು. ಇಂತಹ ಒಳ್ಳೆಯ ಕೆಲಸಗಳ ಜೊತೆಗೆ ಇತರರ ಬಳಿ ಗುಲಾಮನಾಗಿ ಕೆಲಸ ಮಾಡದೆ ಸ್ವತಂತ್ರವಾಗಿ ಕೆಲಸ ಮಾಡುವ, ಜೀವಿಸುವ ಕಲಿಕೆಯನ್ನು ರೂಢಿಸಿಕೊಳ್ಳಬೇಕು. ಇದೆ ಮಾನವ ಧರ್ಮ ಎಂಬ ಮಂತ್ರವನ್ನು ಸಾರಿದ್ದಾರೆ. ಇದರಿಂದ ಜಗದ ಮತ್ತು ಸ್ವ ಪ್ರಗತಿ ಉಂಟಾಗಲು ಸಾಧ್ಯ ಎಂದಿದ್ದಾರೆ.

'ಬೆಂಕಿ' ಕವಿತೆಯಲ್ಲಿ ಬೆಂಕಿಯು, ಸದುಪಯೋಗಕ್ಕಿಂತ ದುರುಪಯೋಗದ ಬಳಕೆಯಲ್ಲಿ ಹೆಚ್ಚಾಗಿ ಕಂಡು ಬರುವುದನ್ನು ಹಾಗೂ ಬೆಂಕಿಯಿಂದಾಗುವ ಅನಾಹುತವನ್ನು ತಿಳಿಸಿದ್ದಾರೆ.

"ನಿಮ್ಮ ಮಗುವಿಗೆ ಹಾಲು ಬಿಸಿ ಮಾಡಲು
ಬಿಸಿ ನೀರ ಸ್ನಾನ ಮಾಡಿಸಲು
ಅಡುಗೆ ಮಾಡಿ ಬಡಿಸಲು

ಬೆಂಕಿ ಬೇಕೇ ?
ಆದರದು ಸಿಗುವುದಿಲ್ಲ ! "   (ಪುಟ – ೫೮)

ಸಮಾಜದಲ್ಲಿ ಕೆಟ್ಟ ಕೃತ್ಯಗಳಾದ ಹೊಲ ಗದ್ದೆ ಸುಡಲು, ಜೀವಂತವಾಗಿ ಸೊಸೆಯನ್ನು ಸುಡಲು, ಮನುಷ್ಯರ ಎದೆಗೆ ಹಚ್ಚಲು ಬೆಂಕಿ ದಾರಾಳವಾಗಿ ಸಿಗುತ್ತದೆ. ಅದೆ ಬೆಂಕಿ ಬಡವರ ಮಕ್ಕಳಿಗೆ ಹಾಲು ಕಾಯಿಸಲು, ಬಿಸಿ ನೀರು ಕಾಯಿಸಲು, ಅಡುಗೆ ಮಾಡಲು ದೊರೆಯುವುದೇ ಇಲ್ಲ. ನಾವು ಪ್ರತಿಯೊಬ್ಬರಿಗೂ ಪ್ರೀತಿಯನ್ನು ಹಂಚಬೇಕೇ ಹೊರತು ದ್ವೇಷವನ್ನಲ್ಲ.

'ರೂಪ' ಕವನದಲ್ಲಿ ಮನುಷ್ಯನ ವಿವಿಧ ಮುಖಗಳು ಮತ್ತು ವ್ಯಕ್ತಿತ್ವದ ಬದಲಾವಣೆಯನ್ನು ತಿಳಿಸಲಾಗಿದೆ.

"ಕರುಣೆ ತುಂಬಿದ ಕಣಜ ಮಾನವನೆದೆ
ಅನುಕಂಪೆಯ ಮುಕುರ ಮನುಜ ಮುಖ
ಮತ್ತೆ ಪ್ರೀತಿಯೋ, ತುಂಬಿ ಹರಿವ ಮಾನವತೆ
ಶಾಂತಿಯ ದಿರಿಸು ನೋಡು ಮಾನವ ದೇಹ ! "   (ಪುಟ – ೬೧)

ಒಮ್ಮೊಮ್ಮೆ ಮಾನವ ಇತರರ ಕಷ್ಟಗಳಿಗೆ ಕರಗುವ ಕರುಣೆಯನ್ನು ತುಂಬಿಕೊಂಡವನಂತೆ, ಪ್ರೀತಿಯನ್ನು ಹಂಚುವವನಂತೆ ಕಾಣುತ್ತಾನೆ. ಶಾಂತಿಯ ಮೂರ್ತಿಯಂತೆ ಇರುತ್ತಾನೆ. ಇದೆ ರೀತಿಯಿದ್ದ ಮಾನವ ಕೆಲವೊಮ್ಮೆ ಕ್ರೂರತೆಯನ್ನು ತನ್ನದಾಗಿಸಿಕೊಂಡು, ಕಠಿಣ ಹೃದಯವನ್ನು ಹೊಂದಿ, ಸ್ವಾರ್ಥಿಯಾಗಿ, ಮತ್ಸರಿಯಾಗಿ ಭಯಾನಕತೆಯ ರೂಪವನ್ನು ತನ್ನಲ್ಲಿ ಹೊತ್ತವನಂತೆ ಇರುತ್ತಾನೆ. ಈ ರೀತಿಯ ರೂಪವನ್ನು ಶಾಶ್ವತವಾಗಿ ತ್ಯಜಿಸಿ ಇತರರಿಗೆ ಸಹಾಯ ಮಾಡುವ, ಹೃದಯದಲ್ಲಿ ಅಮರವಾಗಿ ನಿಲ್ಲುವ ರೂಪ ಮಾನವನಲ್ಲಿರಬೇಕು.

'ನಲ್ವತ್ತರ ನಗು' ಕವಿತೆಯು ಜೀವನದ ವಿವಿಧ ಅನುಭವಗಳನ್ನು, ಕೆಟ್ಟ ಅನುಭವದ ಪರಿಚಯವನ್ನು ಮಾಡಿಕೊಡುವುದರ ಜೊತೆಗೆ, ಶಾಂತಿ ಮಂತ್ರವನ್ನು ತಮ್ಮದಾಗಿಸಿಕೊಂಡು ಅಹಿಂಸೆಯ ಮಾರ್ಗದಲ್ಲಿ ಸಾಗುವ ಸೂಚನೆಯನ್ನು ಕೊಡುತ್ತದೆ.

"ನಕ್ಷತ್ರ ಯುದ್ಧದಾಹದ ದೈತ್ಯ ಶಕ್ತಿಯೆದುರು
ನನ್ನ ಹರೆಯ ಚಿಕ್ಕದೇನಲ್ಲ !
ಬೆಂಕಿಯ ಮಧ್ಯೆ ಶಾಂತಿ ತಂಪನ್ನೆರೆಚುವ
ಗುಂಡಿನ ಮಳೆಯ ಮಧ್ಯೆ ಅಹಿಂಸೆಯ ನಗುವ
ಸೀತೆ – ಗಾಂಧಿಯರ ಜೀವ ಭೂಮಿ ನಾನು ! "   (ಪುಟ – ೫೦)

ಕವಿಯೂ ಹಲವಾರು ಯುದ್ಧಗಳನ್ನು ಕಂಡಿದ್ದಾರೆ. ಅವೆಲ್ಲವೂ ಬಂದೂಕಿನಿಂದ ಗುಂಡಿನ ಸುರಿಮಳೆಗರೆದು ಬೆಂಕಿಯ ಜ್ವಾಲೆಯನ್ನು ಹೊತ್ತಿಸಿವೆ. ಇಂತಹ ಭೀಕರ ವಾತಾವರಣದಲ್ಲಿ ಶಾಂತಿಯೆಂಬ ಮಂತ್ರ ಮತ್ತು ಅಹಿಂಸೆಯ ನಗುವನ್ನು ಚೆಲ್ಲಿದ ಸೀತೆ – ಗಾಂಧಿ ಅವರಂತಹ ಉತ್ತಮ ವ್ಯಕ್ತಿಗಳನ್ನು ಕಂಡ ಕವಿ ನಗುವನ್ನು ಚೆಲ್ಲಿದ್ದಾರೆ.

'ಕರೆ – ಮಣ್ಣು' ಕವಿತೆಯು ಪ್ರಕೃತಿ ಮಾತೆಯ ವರ್ಣನೆಯನ್ನು ಮಾಡುತ್ತದೆ. ವಸುಂಧರೆ ನಮ್ಮನ್ನೆಲ್ಲ ತನ್ನ ತೋಳುಗಳಲ್ಲಿ ಎತ್ತಿ ಆಡಿಸಿ ತೃಪ್ತಿಯ ಜೀವನ ನಡೆಸಲು ಸಹಕಾರಿಯಾಗಿದ್ದಾಳೆ. ನಮ್ಮ ಅಳುವಿಗೆ ಅತ್ತು, ನಲಿವಿಗೆ ನಕ್ಕು ನಮ್ಮ ಜೀವಕ್ಕೆ ಆಸರೆಯಾಗಿದ್ದಾಳೆ. ಅಂತಹ ಮಹಾ ಮಾತೆಯನ್ನು ಮುದ್ದಿಸಿ ಪ್ರೀತಿಯಿಂದ ಕಾಣಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಹೀಗೆ ವಿಭಿನ್ನ ಸಂದೇಶಗಳನ್ನು ನೀಡುವ 'ನೀಲಿ ಚಂದ್ರಮ' ಕವನ ಸಂಕಲನವು ವಿವಿಧ ಅನುಭವಗಳ ಸಾರವನ್ನು ಹೊಂದಿದ್ದು, ಕನ್ನಡಿಯ ಪ್ರತಿಬಿಂಬವಾಗಿದೆ. ಜೀವನದ ಕೆಲವು ಉತ್ತಮ ಕ್ಷಣಗಳನ್ನು, ಘಟನೆಗಳನ್ನು, ಅನುಭವಗಳನ್ನು ಕವಿತೆಗಳಾಗಿ ಮೂಡಿಸುವುದು ಒಂದು ಸುಂದರ ಅಭಿವ್ಯಕ್ತಿಯಾಗಿದೆ. ಇಂತಹ ಅಭಿವ್ಯಕ್ತಿಗೆ ಉತ್ತಮ ಉದಾಹರಣೆಯಾಗಿ ನಿಲ್ಲುವ ಸಾಮರ್ಥ್ಯವನ್ನು ಹೊಂದಿರುವಂತಹವರು ಶಿವರಾಮು ಕಾಡನಕುಪ್ಪೆ ಅವರು.

೨. ಕಾದಂಬರಿ :

ಶಿವರಾಮು ಕಾಡನಕುಪ್ಪೆ ಅವರು ಕವಿ, ಲೇಖಕರಾಗಿ ಪ್ರಸಿದ್ಧಿ ಪಡೆಯುವುದರ ಜೊತೆಗೆ ಕಾದಂಬರಿಕಾರರಾಗಿಯೂ ಆಧುನಿಕ ಕನ್ನಡ ಸಾಹಿತ್ಯದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಕೃಷಿ ಕುಟುಂಬದಲ್ಲಿ ಜನಿಸಿದ ಶಿವರಾಮು ಕಾಡನಕಕುಪ್ಪೆ ಅವರಿಗೆ ಭೂ ಮಾತೆಯ ಬಗ್ಗೆ ಅಪಾರವಾದ ಪ್ರೀತಿಯಿದ್ದು, ಆ ಪ್ರೀತಿಯನ್ನು 'ವಸುಂಧರೆ' ಕಾದಂಬರಿಯಲ್ಲಿ ಅನನ್ಯವಾಗಿ ವ್ಯಕ್ತಪಡಿಸಿದ್ದಾರೆ. ಈ ಕಾದಂಬರಿ ರಚನೆಗೆ ಕಾಡನಕುಪ್ಪೆಯ ಅಕ್ಕ-ಪಕ್ಕದಲ್ಲಿರುವ ಬೆಟ್ಟ-ಗುಡ್ಡ, ಕಾಡು-ಮೇಡು, ಸಸ್ಯ ಸಂಪತ್ತುಗಳ ಮೇಲೆ ಮಾನವ ನಡೆಸುತ್ತಿರುವ ಕ್ರೌರ್ಯವು ಪ್ರಭಾವ ಬೀರಿದೆ.

ವರ್ತಮಾನ ಜೀವನದಲ್ಲಿ ರಾಜಕಾರಣಿಗಳು, ಗಣಿ ಉದ್ಯಮಿಗಳು ಹಣದ ದುರಾಸೆಯಿಂದ ಪ್ರಕೃತಿ ಮಾತೆಯ ಒಡಲನ್ನು ಕೊರೆದು, ಕೊಯ್ದು ಅಂಗಾಂಗ ಸಾಧನೆಗಾಗಿ ಪ್ರಾಮಾಣಿಕ ಮನುಷ್ಯರನ್ನು ಬಲಿ ತೆಗೆದುಕೊಳ್ಳುತ್ತಾ ಅಟ್ಟಹಾಸದಿಂದ ಮೆರೆದಾಡುತ್ತಾ ಅನೈತಿಕ ಚಟುವಟಿಕೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಭೂಮಿಯ ಸ್ವಾಸ್ಥ್ಯವನ್ನು ಕಸಿದುಕೊಳ್ಳುತ್ತಿರುವ ವಾಸ್ತವ ದೃಷ್ಟಿಯ ಪ್ರಖರತೆ ಕೃತಿಯಲ್ಲಿ ಅಡಗಿದೆ. ಕಾದಂಬರಿಯಲ್ಲಿ ವರ್ತಮಾನದ ಬದುಕು ಭೂತ ಭವಿಷ್ಯಗಳ ಸೂಕ್ಷ್ಮ ಗ್ರಹಿಕೆಯಲ್ಲಿ ತೆರೆದುಕೊಳ್ಳುತ್ತದೆ. ಕೃತಿಯಲ್ಲಿನ ಕಥಾವಸ್ತು ಶಿವರಾಮು ಕಾಡನಕುಪ್ಪೆ ಅವರ ಜೀವನದ ಸತ್ಯ ಅನುಭವವಾಗಿದೆ. ಕಾದಂಬರಿಯ ಅಂತ್ಯವು ಸಿನಿಮೀಯ ರೀತಿಯಲ್ಲಿ ರೋಚಕ ತಿರುವನ್ನು ಪಡೆದು ಶಿಷ್ಟರಿಗೆ ಗೆಲುವನ್ನು ದುಷ್ಟರಿಗೆ ಮರಣವನ್ನು ವಿಧಿಸಿ ಕ್ರೌರ್ಯಕ್ಕೆ ತಕ್ಕ ಶಾಸ್ತಿ ಮಾಡುವುದನ್ನು ಕಾದಂಬರಿ ತಿಳಿಸುತ್ತದೆ.

ಕಾದಂಬರಿಯು ವಿಭಿನ್ನ ರೀತಿಯ ಕಥಾ ವಸ್ತುವನ್ನು ಹೊಂದಿದೆ. ಕನಕಪುರದ ಆಸುಪಾಸಿನ ಪರಿಸರವು ವಿವಿಧ ಮರಗಿಡಗಳಿಂದ ಆವೃತ್ತವಾಗಿ ಸುಂದರತೆಯಿಂದ ಕೂಡಿತ್ತು. ಜೊತೆಗೆ ಇಲ್ಲಿನ ಹೊಲ ಗದ್ದೆಗಳು ಬೆಲೆಬಾಳುವ ಗ್ರಾನೈಟ್ಸ್‌ಗಳನ್ನು ಹೊಂದಿದ್ದವು. ರಾಮನಗರದ ಸುತ್ತಮುತ್ತಲೂ ಬೆಟ್ಟ-ಗುಡ್ಡಗಳಿದ್ದವು. ಪ್ರಕೃತಿಯ ಸೌಂದರ್ಯ ಮೈತಳೆದಂತಿದ್ದ ಇಂತಹ ಪರಿಸರದ ಮೇಲೆ ದುಷ್ಟ ರಾಜಕಾರಣಿಗಳು ಮತ್ತು ಗಣಿದಣಿಗಳ ಕಣ್ಣು ಬಿತ್ತು. ಇಲ್ಲಿನ ಸಂಪತ್ತನ್ನು ಕಬಳಿಸಿ ಸ್ವಾರ್ಥಕ್ಕಾಗಿ ದುರ್ಬಳಕೆ ಮಾಡಿಕೊಳ್ಳುವ ತವಕದಲ್ಲಿದ್ದರು. ಇಂತಹ ಅವಕಾಶ ಬಳಸಿಕೊಂಡ ಲೇಖಕರು ಪರಿಸರದ ಶೋಷಕರನ್ನು ಆಧಾರವಾಗಿಟ್ಟುಕೊಂಡು 'ವಸುಂಧರೆ' ಕಾದಂಬರಿಯನ್ನು ರಚಿಸಿದರು.

ಸಮಾಜ ದ್ರೋಹಿಗಳು, ರಾಜಕಾರಣಿಗಳು, ಗಣಿದಣಿಗಳು, ಹಣದ ದುರಾಸೆಯಿಂದ

ತಮ್ಮ ಬೆಳವಣಿಗೆಗೆ ಸಹಾಯ ಮಾಡಿದ ಭೂಮಿ ತಾಯಿಯನ್ನು ಶೋಷಣೆ ಮಾಡುವಲ್ಲಿ ತಮ್ಮನ್ನು ತೊಡಗಿಸಿಕೊಂಡು, ಸಮಾಜದಲ್ಲಿ ಉನ್ನತ ಸ್ಥಿತಿಗೆ ಏರಿರುತ್ತಾರೆ. ಇಂತಹ ಸ್ವಾರ್ಥಿಗಳಿಗೆ ಉತ್ತಮ ಉದಾಹರಣೆಯಾಗಿದೆ. ಕಾದಂಬರಿಯಲ್ಲಿ ಬರುವ ಪ್ರಮುಖ ಪಾತ್ರಗಳೆಂದರೆ ಪಿ.ಕೆ.ಮಹೇಶ, ರೆಡ್ಡಿ, ಚಂದ್ರಶೇಖರ್, ಶರಣ್ ಮುಂತಾದವರು. ಪಿ.ಕೆ. ರಾಜಕೀಯದಲ್ಲಿ ಹೆಸರು ಮಾಡುವ ಸಲುವಾಗಿ ಜನರಿಗೆ ಸಣ್ಣಪುಟ್ಟ ಸಹಾಯ ಮಾಡುವುದರ ಮೂಲಕ ಒಳ್ಳೆಯವನಂತೆ ನಟಿಸುತ್ತಾ, ಅವರ ಪ್ರತಿಯೊಂದು ಅಹವಾಲುಗಳನ್ನು ಸಮಾಧಾನದಿಂದ ಕೇಳಿ ಪರಿಹರಿಸುವ ಪ್ರಯತ್ನ ಮಾಡಿದ್ದನು. ಇದರಿಂದ ಸುತ್ತಮುತ್ತಲ ಹಳ್ಳಿಯಲ್ಲಿ ಪ್ರಸಿದ್ಧ ಪಡೆದವನಾಗಿ ಮುಂದೆ ರಾಜಕೀಯದಲ್ಲಿ ತನ್ನನ್ನು ಗೆಲ್ಲಿಸಿಕೊಂಡು ಅಧಿಕಾರ ಪಡೆಯುವ ಹಂತಕ್ಕೆ ತಲುಪುತ್ತಾನೆ. ತನ್ನ ರಾಜಕೀಯಕ್ಕೆ ಹೆಚ್ಚಿನ ಹಣಕಾಸಿನ ವ್ಯವಸ್ಥೆಯಾಗಬೇಕಾಗಿದ್ದರಿಂದ ತನ್ನ ಊರಿನ ಸುತಮುತ್ತಲಿನ ಪರಿಸರವನ್ನು ನಾಶಮಾಡಿ ಹಣ ಸಂಪಾದಿಸುವ ದುಸ್ಸಾಹಸಕ್ಕೆ ಕೈ ಹಾಕುತ್ತಾನೆ. ಇವನ ದುಷ್ಟ ಕಾರ್ಯಕ್ಕೆ ಜೊತೆ ನೀಡಲು ತಮ್ಮ, ಗೆಳೆಯನ ಮಗ ಮುಂತಾದವರು ಸಹಕರಿಸುತ್ತಾರೆ. ಕಾದಂಬರಿಯಲ್ಲಿ ರೈತರನ್ನು ಶೋಷಿಸಿ ಹೊಲ ಗದ್ದೆ ಕೊಂಡುಕೊಳ್ಳುವ ಹಲವಾರು ಚಿತ್ರಣಗಳಿವೆ.

ಬೇರೆ ಪ್ರದೇಶಗಳಿಂದ ಬಂದ ಜನರು ಇಲ್ಲಿನ ಜನರನ್ನು ಶೋಷಿಸಿರುವುದನ್ನು ಕಾಣಬಹುದು. ರೆಡ್ಡಿ ಎಲ್ಲಿಂದಲೋ ಇಲ್ಲಿಗೆ ಬಂದು ತನ್ನ ಛಾಪನ್ನು ಮೂಡಿಸಿ ಪಿ.ಕೆ.ಯ ಬಲಗೈ ಬಂಟನಾಗಿ ಕಲ್ಲು ಗಣಿಗಾರಿಕೆಯನ್ನು ಮಾಡಿ ಪ್ರಕೃತಿಯನ್ನು ನಾಶ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾನೆ. ಇವರೆಲ್ಲರ ಕೆಟ್ಟ ಕೆಲಸಗಳಿಗೆ ಜೊತೆಯಾಗಿ ನಿಂತು ಭೂಮಿಯಲ್ಲಿನ ಕಲ್ಲುಗಳ ಪರಿಶೀಲನೆ ಮಾಡಿ ಗುಣಮಟ್ಟವನ್ನು ತಿಳಿಸಿ ಶೋಷಣೆಗೆ ಅನುವು ಮಾಡಿಕೊಡುತ್ತಿದ್ದ ಮತ್ತೊಂದು ಪಾತ್ರವೆಂದರೆ ಶರಣ್. ಇವರ ಮನೆಹಾಳು ಕೆಲಸಗಳಿಗೆ ಲೈಸೆನ್ಸ್ ಕೊಡಿಸುವ ನಿಟ್ಟಿನಲ್ಲಿ ಭ್ರಷ್ಟಾಚಾರವನ್ನೆ ಬಂಡವಾಳ ಮಾಡಿಕೊಂಡ ಚಂದ್ರಶೇಖರ್. ಇವರೆಲ್ಲರು ಸೇರಿ ಖಜಾನೆಯನ್ನು ತುಂಬಿಸಿಕೊಳ್ಳುವ ನಿಟ್ಟಿನಲ್ಲಿ ಭೂಮಿ ತಾಯಿಯ ಅಂಗಾಂಗಗಳನ್ನು ಕತ್ತರಿಸುತ್ತಾ ಹೊರಟರು. ಇಷ್ಟೆಲ್ಲಾ ಅನ್ಯಾಯ ಮಾಡಿದ ಇವರೆಲ್ಲರೂ ಕೊನೆಗೆ ಸಿನಿಮೀಯ ರೀತಿಯಲ್ಲಿ ಅಂತ್ಯವನ್ನು ಕಾಣುತ್ತಾರೆ.

ಆಧುನಿಕ ಕಾಲದ ಕೃತಿಗಳಲ್ಲಿ ಪಾತ್ರ ಚಿತ್ರಣಕ್ಕೆ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. 'ವಸುಂಧರೆ' ಕಾದಂಬರಿಯಲ್ಲಿ ಶ್ರೀಮಂತವರ್ಗದವರ ಚಿತ್ರಣ ಹೆಚ್ಚಾಗಿ ಕಂಡು ಬರುತ್ತದೆ. ಇದರ ಜೊತೆಗೆ ಅಲ್ಲೊಮ್ಮೆ ಇಲ್ಲೊಮ್ಮೆ ಎಂಬಂತೆ ಮಧ್ಯಮ ವರ್ಗದ ಕುಟುಂಬದ ಬದುಕು ಬವಣೆಗಳು ಇಲ್ಲಿವೆ. ಪಿ.ಕೆ., ಮಹೇಶ, ಚಂದ್ರಶೇಖರ್, ಶರಣ್, ರೆಡ್ಡಿ ಉಚ್ಚ ವರ್ಗಕ್ಕೆ

ಸೇರಿದವರಾಗಿದ್ದಾರೆ. ಹನುಮೇಗೌಡ, ಭೂಮಿಗೌಡ ಇವರು ಮಧ್ಯಮ ವರ್ಗದಿಂದ ಬಂದವರಾಗಿದ್ದಾರೆ. 'ವಸುಂಧರೆ' ಕಾದಂಬರಿಯಲ್ಲಿ ಒಳ್ಳೆಯ, ಕೆಟ್ಟ ಪಾತ್ರಗಳ ಚಿತ್ರಣಗಳನ್ನು ಲೇಖಕರು ಮಾಡಿದ್ದಾರೆ. ಮನೋವಿಜ್ಞಾನದ ಆಧಾರಗಳನ್ನು ಬಳಸಿಕೊಂಡಿದ್ದಾರೆ. ಲೇಖಕರು ಪಾತ್ರಗಳ ನಡುವಿನ ಅಂತರ ಮತ್ತು ಬಾಹ್ಯವನ್ನು ತಿಳಿಸುವಲ್ಲಿ ಸಿದ್ಧಹಸ್ತರಾಗಿದ್ದಾರೆ.

ಭಾಷೆಯು ಅಭಿವ್ಯಕ್ತಿಯ ಪ್ರಮುಖ ಸಾಧನವಾಗಿದೆ. ಕೃತಿಕಾರರು ತಮ್ಮ ವಿಚಾರಗಳನ್ನು ತಿಳಿಸುವ ಕೊನೆಯ ಹಂತದವರೆಗೆ ಭಾಷೆ ತಲುಪುತ್ತದೆ. ವಸುಂಧರೆ ಕಾದಂಬರಿಯಲ್ಲಿನ ಭಾಷೆಯು ಸಹಜತೆ ಮತ್ತು ಸರಳತೆಯನ್ನು ಹೊಂದಿದೆ. ಈ ಕಾದಂಬರಿಯಲ್ಲಿ ಬಳಸಿರುವ ಭಾಷೆ ಪಾತ್ರ ಮತ್ತು ಪ್ರಸಂಗಗಳಿಗೆ ಅನುಕೂಲವಾಗುವಂತೆ ಇದೆ. ಭಾಷೆಯು ಸರಳವಾಗಿದ್ದು, ಸಾಕಷ್ಟು ಪ್ರಭಾವಶಾಲಿಯಾಗಿದೆ.

ಉದಾಹರಣೆಗೆ "ನೋಡಿ ಭೂಮಿ, ನನ್ನನ್ನು ನೋಡಿ. ನನ್ನಲ್ಲಿ ಎಲ್ಲವೂ ಇದೆ. ಆದರೆ ಆತ್ಮಕ್ಕೆ ಏನೋ ಕೊರತೆಯಿದೆಯೆಂದು ನಿಮಗೆ ಕಾಣುತ್ತದೆಯೇ. ಯಾವುದೆ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಅಪೂರ್ಣತೆಯೆನ್ನುವುದು ಸಹಜ. ಅದು ಇರಬೇಕು. ಅದು ಇದ್ದಾಗಲೇ ಅವನು ಪೂರ್ಣತೆಯ ಕಡೆಗೆ ಸಾಗುವ ನಿರಂತರ ಪ್ರಯತ್ನದಲ್ಲಿ ಸಾಗುತ್ತಾನೆ. ಆದರೆ ಇತ್ತೀಚೆಗೆ ನನ್ನಲ್ಲಿ ಅತೃಪ್ತಿ ಜಾಸ್ತಿಯಾಗಿದೆ. ಅದಕ್ಕೆ ನನಗೆ ಹೆದರಿಕೆಯಾಗ್ತಿದೆ, ಅದು ಆರೋಗ್ಯಕರವಲ್ಲ. ಎಲ್ಲಿ ಅತೃಪ್ತಿಯ ವ್ಯೂಹದಲ್ಲಿ ಹೊರಬರಲಾರದೆ ಹುಚ್ಚಿಯಾದರೆ ಅಂತ ಹೆದರಿಕೆಯಾಗ್ತಿದೆ." (ಪುಟ –೧೧೦)

ಕೆಲವು ವಾಕ್ಯಗಳಲ್ಲಿ ಭಾಷೆಯು ಕಡಕ್ಕಾಗಿರುವುದನ್ನು ಕಾಣಬಹುದು. ಉದಾಹರಣೆಗೆ 'ನಿನಗೆಂಥಾ ಮರ್ಯಾದೆನೋ ಗುಲಾಮ ನನ್ನಮಗ್ನೆ. ಎಂಜಲು ಕಾಸಿಗೆ ಕೈಯೊಡ್ಡುವ ನಿನಗೆ ಮರ್ಯಾದೆ ಬೇರೆ ಕೇಡು.' (ಪುಟ – ೧೨೦)

ಕಾದಂಬರಿಗೆ ಗ್ರಾಮೀಣ ಭಾಷೆಯನ್ನೂ ಒಳಗೊಂಡಿದೆ. ಉದಾಹರಣೆಗೆ 'ಅದೆಲ್ಲಾ ಇಲ್ಲಿ ಆಗಾಕಿಲ್ಲ ಕಣ್ಮಗ, ಅಡುಗೆ ಮನೆಗೆ ಯಾರ್‍ಯಾರ್‍ನೊ ಸೇರಿಸ್ಕೊಳ್ಳೋಕಾಯ್ತದ ? ನಾವು ತಿನ್ನೊ ಅನ್ನ ನಾವೇ ಬೇಯ್ಸಿ ತಿನ್ನಬೇಕು.' (ಪುಟ – ೩೨)

'ವಸುಂಧರೆ' ಕಾದಂಬರಿಯಲ್ಲಿ ಸಾಮಾಜಿಕ ದೃಷ್ಟಿ ಧೋರಣೆಯನ್ನು ಕಾಣಬಹುದು. ಪರಿಸರವನ್ನು ಉಳಿಸಿ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡುವ ಕಾಳಜಿ ಇದೆ. ಭೂಮಿ ತಾಯಿಯ ಒಡಲನ್ನು ಶೋಷಣೆಯಿಂದ ತಪ್ಪಿಸುವುದು, ಗಣಿಗಾರಿಕೆಯನ್ನು ಬುಡ ಸಮೇತ ಕಿತ್ತುಹಾಕಿ ರೈತರಿಗೆ ಉತ್ತಮ ಬೆಳೆ ಬೆಳೆಯಲು ಅವಕಾಶ ಮಾಡಿಕೊಡುವುದು ಮುಂತಾದ ಸಾಮಾಜಿಕ ಅಂಶವನ್ನು ಕಾಣಬಹುದಾಗಿದೆ.

೩. ವಿಮರ್ಶೆ :

ಶಿವರಾಮು ಕಾಡನಕುಪ್ಪೆ ಅವರು ಸಂಪಾದಕರಾಗಿ, ವಿಮರ್ಶಕರಾಗಿ, ಕವಿಯಾಗಿ ಸಾಹಿತ್ಯದ ವಿವಿಧ ಮಜಲುಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಪ್ರಮುಖವಾಗಿ ವಿಮರ್ಶನ ವಲಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾದಂಬರಿ, ಕವಿತೆ, ಕಥೆ, ಗಾದೆ ಮುಂತಾದ ಪ್ರಕಾರದಲ್ಲಿ ಸಾಹಿತ್ಯ ರಚನೆ ಮಾಡಿರುವ ಅನೇಕ ಸಾಹಿತಿಗಳ ಕೃತಿಯನ್ನು ವಿಮರ್ಶೆಗೆ ಒಳಪಡಿಸಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರು ಈವರೆಗೆ 'ಸಾಮಾಜಿಕ ನೆಲೆ', 'ಕುವೆಂಪು ಸಾಹಿತ್ಯ ಮತ್ತು ವಿಚಾರ', 'ಸಮನ್ವಯ', 'ಸಂವಹನ' ವಿಮರ್ಶಾ ಕೃತಿಗಳನ್ನು ಪ್ರಕಟಿಸಿದ್ದಾರೆ.

ಇವುಗಳಲ್ಲಿ ಇರುವ ಲೇಖನಗಳು ಆಧುನಿಕ ಸಾಹಿತಿಗಳು ರಚಿಸಿರುವ ಆಧುನಿಕ ಕನ್ನಡ ಸಾಹಿತ್ಯವನ್ನು ಕುರಿತದ್ದಾಗಿದೆ. ಕೆಲವು ಲೇಖನಗಳು ಕುವೆಂಪು ಅವರಿಗೆ ಸಂಬಂಧಿಸಿವೆ. ಪು.ತಿ.ನ, ವಿನಾಯಕ, ತ.ರಾ.ಸು, ಬಸವರಾಜ ಕಟ್ಟಿಮನಿ, ಗೊರೂರು ಮುಂತಾದ ಲೇಖಕರಿಗೆ ಸಂಬಂಧಿಸಿದ್ದಾಗಿವೆ.

'ಬಿ.ಎಂ.ಶ್ರೀ' ಅವರ 'ಹೊಂಗನಸುಗಳು' ವಿಮರ್ಶಾ ಲೇಖನವು ಉತ್ತಮ ಲೇಖನವಾಗಿದೆ. ಬಿ.ಎಂ.ಶ್ರೀ ಅವರು ಹಳೆಯ ಛಂದೋರೂಪಗಳನ್ನು ತೊಡೆದುಹಾಕಿ ನಮ್ಮ ಯುಗಕ್ಕೆ ಹೊಂದಿಕೊಳ್ಳುವ ಹೊಸ ರೀತಿಯ ಅರ್ಥಪೂರ್ಣವಾದ ಇಂಗ್ಲೀಷ್ ರೋಮ್ಯಾಂಟಿಕ್ ಕಾವ್ಯದ ಪ್ರಭಾವದಿಂದ ಹೊಸ ರೂಪವನ್ನು ನೀಡಿ ಕನ್ನಡ ಕಾವ್ಯಕ್ಕೆ ಜೀವ ತುಂಬಿದ್ದಾರೆ. ಕನ್ನಡದ ಉದ್ಧಾರದ ಜಪ ಮಾಡಿರುವ 'ಹೊಂಗನಸುಗಳು' ಕವನ ಸಂಕಲನದಲ್ಲಿನ ಕನ್ನಡ ಪರಂಪರೆಯ ಅಗಾಧ ಜ್ಞಾನವನ್ನು, ಅದರ ಮೇಲಿನ ಪ್ರೀತಿಯನ್ನು ತಿಳಿಸಿದ್ದಾರೆ.

'ಕೈಲಾಸಂ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ' ಲೇಖನವು ಸಾಮಾಜಿಕ ಸಂದರ್ಭದಲ್ಲಿ ನೆಲೆಯೂರಿರುವ ಅಪಮೌಲ್ಯಗಳನ್ನು ಬಯಲಿಗೆಳೆಯುವ ಕೈಲಾಸಂ ಅವರ ಪ್ರಜ್ಞೆಯನ್ನು ತಿಳಿಸುತ್ತದೆ. ತಮ್ಮ ನಾಟಕಗಳಲ್ಲಿ ಬರುವ ವಿವಿಧ ಪಾತ್ರಗಳ ಮೂಲಕ ಅಪಮೌಲ್ಯ, ಸಮಾಜವನ್ನು ಕಬಳಿಸುತ್ತಿರುವ ಪಟ್ಟಭದ್ರ ಹಿತಾಸಕ್ತಿ, ಮಾನವೀಯತೆಗಾಗಿ ತುಡಿಯುತ್ತಿರುವ ಜೀವಗಳ ನೋವುಗಳನ್ನು ತಮ್ಮ ನಾಟಕದಲ್ಲಿ ತೋರಿಸುವ ಪ್ರಯತ್ನ ಮಾಡಿದ್ದಾರೆ.

'ಪು.ತಿ.ನ' ಅವರ ದೋಣಿಯ ಬಿನದ ಮತ್ತು ಕವಿ' ಲೇಖನವು ಪು.ತಿ.ನ ಅವರ ಕ್ಲಿಷ್ಟ ಸಂಸ್ಕೃತಮಯವಾದ ಕನ್ನಡ ಭಾಷೆಯ ಬಗ್ಗೆ ತಿಳಿಸುತ್ತದೆ. ಇವರ ಕಾವ್ಯದ ವಸ್ತು ಪರಂಪರೆಯನ್ನು

ಅವಲಂಬಿಸಿರುವಂತೆ ಭಾಷೆಯು ಕೂಡ ಪರಂಪರೆಗೆ ಹೆಚ್ಚು ಒತ್ತು ನೀಡಿದ್ದಾಗಿದೆ.

'ಮೂಕಜ್ಜಿಯ ಕನಸುಗಳು' ಲೇಖನವು ಶಿವರಾಮ ಕಾರಂತರ ನಿರೂಪಕನ ಶೈಲಿಯನ್ನು ಉತ್ತಮವಾಗಿ ಬಿಂಬಿಸುತ್ತದೆ. ಸಂಪ್ರದಾಯ ವ್ಯವಸ್ಥೆಗೆ ಕಾರಂತರು ಹಾಕಿರುವ ಪ್ರಶ್ನೆಗಳನ್ನು ಈ ಕಾದಂಬರಿಯಲ್ಲಿ ಕಾಣಬಹುದು.

ಶಿವರಾಮ ಕಾರಂತರ 'ಹಳ್ಳಿಯ ಹತ್ತು ಸಮಸ್ತರು' ಲೇಖನವು ಗ್ರಾಮೀಣ ಜನರಲ್ಲಿನ ವಿವಿಧ ಮುಖಗಳ ನಟನೆ, ತಮ್ಮತನ, ಮಾನವೀಯ ಪ್ರೀತಿಯ ಬಾಂಧವ್ಯಗಳನ್ನು ಕಳೆದುಕೊಂಡು ಸಂಕುಚಿತ ಮನೋಭಾವಕ್ಕೆ ಒಳಗಾಗುತ್ತಿರುವ ಚಿತ್ರಣವಿದೆ. ಒಂದು ಕಡೆ ಜಾತಿ ವೈಷಮ್ಯವನ್ನು ದ್ವೇಷಿಸುವ ಕಾರಂತರ ಮನದಲ್ಲಿ ಪಾರಂಪರಿಕವಾಗಿ ಬಂದ ಮೂಲಭೂತ ವ್ಯವಸ್ಥೆಯನ್ನು ಬದಲಾಯಿಸಲು ಇಚ್ಛಿಸುವುದಿಲ್ಲ ಎಂಬುದನ್ನು ಈ ಲೇಖನ ಪ್ರತಿಧ್ವನಿಸುತ್ತದೆ.

'ಕುವೆಂಪು ಕಾದಂಬರಿಗಳಲ್ಲಿ ಪ್ರಾದೇಶಿಕತೆ' ಲೇಖನದಲ್ಲಿ ಕುವೆಂಪು ಅವರ ಕಾದಂಬರಿಗಳಾದ ಮಲೆಯಲ್ಲಿ ಮದುಮಗಳು ಮತ್ತು ಕಾನೂರು ಹೆಗ್ಗಡತಿಯಲ್ಲಿ ಆರಂಭದಿಂದ ಅಂತ್ಯದವರೆಗೂ ಪ್ರಾದೇಶಿಕತೆಯನ್ನು ಕಾಣಬಹುದಾಗಿದೆ. ಅಲ್ಲಿನ ಜನರ ಬದುಕಿನಲ್ಲಿ ಗಾಢವಾದ ಮಲೆನಾಡಿನ ಪ್ರಭಾವವಿರುವುದನ್ನು ಗಮನಿಸಬಹುದು. ಜನರ ಆಡುವ ಭಾಷೆಯ ಮೇಲೂ ಜಾತಿ ಮತ್ತು ವರ್ಗದ ಪ್ರಭಾವವಿದೆ. ಪ್ರಾದೇಶಿಕ ಪದಗಳ ಬಳಕೆಯು ಹೆಚ್ಚಾಗಿದೆ. ಮಲೆನಾಡಿನ ಜನರ ಬದುಕಿನಲ್ಲಿ ಬಡತನದಷ್ಟೇ ಭಯಂಕರವಾಗಿ ಮೌಢ್ಯವು ಮನೆ ಮಾಡಿತ್ತು ಎಂಬುದಕ್ಕೆ ಉತ್ತಮ ಉದಾಹರಣೆ ಭೂತರಾಯನ ಆರಾಧನೆ ಎಂಬಿತ್ಯಾದಿ ಸಂಗತಿಗಳನ್ನು ವಿವರಿಸಿದ್ದಾರೆ.

'ಕುವೆಂಪು ಕವನಗಳಲ್ಲಿ ರೈತ' ಲೇಖನವು ಕುವೆಂಪು ಅವರ ರೈತ ಸಮುದಾಯಕ್ಕೆ ನೀಡಿದ ಒತ್ತನ್ನು ತೋರಿಸುತ್ತದೆ. ಕುವೆಂಪು ಅವರು ಮಾನವತಾವಾದಿಯಾಗಿದ್ದು, ಮಾನವೀಯ ಮೌಲ್ಯಗಳನ್ನು ಪ್ರತಿಬಿಂಬಿಸುವ ರೈತನ ಬದುಕನ್ನು ಉತ್ತಮವಾಗಿ ತಮ್ಮ ಕವನಗಳಲ್ಲಿ ಚಿತ್ರಿಕರಿಸಿದ್ದಾರೆ. ರೈತನ ಪರವಾದ ಗೀತೆಗಳಿಗೆ ಉತ್ತಮ ಉದಾಹರಣೆಯಾದ ಕವನಗಳೆಂದರೆ ನೇಗಿಲ ಯೋಗಿ, ರೈತನ ದೃಷ್ಟಿ ಕುಳದ ಕಲಿಗೆ ಮುಂತಾದ ಪದ್ಯಗಳಲ್ಲಿನ ಪ್ರಮುಖ ಭಾಗಗಳನ್ನು ವಿವರಿಸಿದ್ದಾರೆ.

'ಅನಿಕೇತನ – ಒಂದು ದಾರ್ಶನಿಕ ಕವಿತೆ' ಲೇಖನವು ವಿಶ್ವಮಾನವ ಸಂದೇಶವನ್ನು ಹೊಂದಿರುವ ಕವಿತೆಯಾಗಿದೆ. ಜಾತಿ ಮತಗಳೆಂಬ ಬೇಧ ಭಾವಗಳನ್ನು ದೂರತಳ್ಳಿ ಎಲ್ಲರು ಏಕತೆಯಿಂದ ಬಾಳಬೇಕು ಎಂಬ ಕವಿತೆಯ ಆಶಯವನ್ನು ವಿವರಿಸಿದ್ದಾರೆ.

'ಬೇಂದ್ರೆಯವರ ಸಾಹಿತ್ಯ ವಿಮರ್ಶೆ' ಲೇಖನವು ಬೇಂದ್ರೆಯವರ ಸಾಹಿತ್ಯ ಕೃಷಿಗೆ ಹಲವಾರು ವಿಚಾರಗಳು ಪ್ರಭಾವ ಬೀರಿರುವುದರ ಬಗ್ಗೆ ತಿಳಿಸಲಾಗಿದೆ. ಅವರ ಮೇಲೆ ದ್ವೈತ ಮತದ ಪ್ರಭಾವ ಹೆಚ್ಚಾಗಿರುವುದನ್ನು ಕಾಣಬಹುದಾಗಿದೆ. ಇವರು ಭಾರತೀಯ ಸಮಾಜದ ವೇದ ಪರಂಪರೆಗಿಂತ ಆಚಾರ್ಯ ಪರಂಪರೆಯತ್ತ ಆಕರ್ಷಿತರಾಗಿರುವುದನ್ನು ಗಮನಿಸಬಹುದು. ಬೇಂದ್ರೆ ಅವರು ಪಂಪ ಮತ್ತು ರನ್ನನ ಬಗ್ಗೆ ಬರೆದಿರುವ ವಿಮರ್ಶೆಯು ಭಿನ್ನ ನೆಲೆಯಲ್ಲಿದೆ. ದುರ್ಯೋಧನನ ಗೆಳೆತನ ಕರ್ಣನ ಮೇಲೆ ಕೃತಕವಾದುದು, ಸ್ವಾರ್ಥ ಮೂಲವಾದುದು ಎಂಬುದನ್ನು ಆಧಾರ ಸಮೇತ ವಿವರಿಸುತ್ತಾರೆ.

'ಗೊರೂರರ ಸಾಹಿತ್ಯದಲ್ಲಿ ಸುಧಾರಣವಾದದ ನೆಲೆಗಳು' ಲೇಖನವು ಗೊರೂರರ ಸಾಹಿತ್ಯವು ಸುಧಾರಣವಾದದ ಹಿನ್ನೆಲೆಯಲ್ಲಿ ರಚನೆಯಾಗಿದ್ದು, ಸುಧಾರಣೆಯ ಪ್ರೀತಿಯನ್ನು ವ್ಯಕ್ತಪಡಿಸುತ್ತಲೇ ಸನಾತನ ಮೌಲ್ಯವನ್ನು ಪ್ರೀತಿಸುತ್ತಾರೆ. ವೈದಿಕ ಧರ್ಮಕ್ಕೆ ಹೆಚ್ಚು ಒತ್ತು ನೀಡಿರುವುದನ್ನು ಗಮನಿಸಬಹುದು.

'ವಿನಾಯಕ ಕಾವ್ಯ : ರೂಪ ಮತ್ತು ಅಭಿವ್ಯಕ್ತಿ' ಲೇಕನವು ವಿನಾಯಕರ ಕಾವ್ಯವೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಸಾಂದರ್ಭಿಕ ಮತ್ತು ಉದ್ದೇಶಪೂರ್ವಕ ಸೃಷ್ಟಿ ಎಂಬುದನ್ನು ತಿಳಿಸುತ್ತದೆ. ಕನ್ನಡ ಕಾವ್ಯ ಪರಂಪರೆಯಲ್ಲಿ ಅಷ್ಟಾದಶ ವರ್ಣನೆಯನ್ನು ಮಾಡಿದ ರತ್ನಾಕರ ವರ್ಣಿ ಮೊದಲಿಗರಾಗಿದ್ದು, ಅವರ ನಂತರದ ಸ್ಥಾನದಲ್ಲಿ ವಿನಾಯಕರು ನಿಲ್ಲುತ್ತಾರೆ. ಇವರು ರತ್ನಾಕರವರ್ಣಿಗಿಂತ ಸಮರ್ಪಕವಾಗಿ ವಾಸ್ತವವಾಗಿ ಅಷ್ಟಾದಶ ವರ್ಣನೆಯನ್ನು ತಮ್ಮ ಕಾವ್ಯಗಳಲ್ಲಿ ಬಳಸಿಕೊಂಡಿದ್ದಾರೆ ಎಂಬ ವಿಚಾರವನ್ನು ವಿಮರ್ಶಿಸಿದ್ದಾರೆ.

'ತಿರುಕರ ಕಥಾ ಸಾಹಿತ್ಯ' ಲೇಖನದಲ್ಲಿ ತಿರುಕರಲ್ಲಿದ್ದ ಆದರ್ಶ ಭಾವನೆಯನ್ನು ಗುರುತಿಸಲಾಗಿದೆ. ಇವರ ಕಥಾ ಸಾಹಿತ್ಯದಲ್ಲಿನ ನಾಯಕ ನಾಯಕಿಯರು ಆದರ್ಶ ಭಾವನೆಯಿಂದ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಬೆಳೆದಿರುವುದನ್ನ ವಿವೇಚಿಸಿದ್ದಾರೆ. ಇವರ ಭಾಷೆಯು ಸರಳವಾಗಿದ್ದು, ಲಲಿತವಾದ ನಡಿಗೆಯನ್ನು ಹೊಂದಿರುವುದನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ.

ತ.ರಾ.ಸು. ಅವರ 'ದುರ್ಗಾಸ್ತಮಾನ' ಎಂಬ ಶೀರ್ಷಿಕೆಯ ಲೇಖನವು ತ.ರಾ.ಸು. ಅವರ ಕಾದಂಬರಿ ದುರ್ಗಾಸ್ತಮಾನದಲ್ಲಿನ ನಾಯಕನಾದ ಮದಕರಿ ನಾಯಕನ ಪರಾಕ್ರಮವನ್ನು, ಪೌರುಷವನ್ನು ವರ್ಣಿಸುವ ಕಥೆಯನ್ನು ಸರಳವಾಗಿ ನಿರೂಪಿಸಿದ್ದಾರೆ. ಅಲ್ಲಿನ ಜನರಲ್ಲಿನ ಸ್ವಾಮಿನಿಷ್ಠೆ ಕರ್ತವ್ಯ ನಿಷ್ಠೆಗಳನ್ನು ಉದಾಹರಣೆಗಳ ಮೂಲಕ ವಿವರಿಸಿದ್ದಾರೆ.

ಬಸವರಾಜು ಕಟ್ಟೀಮನಿ ಅವರ 'ಮಾಡಿ ಮಡಿದವರು' ಸ್ವತಂತ್ರಕ್ಕಾಗಿ ಹೋರಾಟ

ಮಾಡಿದಂತಹ ನಾಯಕಿಯ ಚಿತ್ರಣವನ್ನು ಹೊಂದಿರುವ ಮಾಡಿ ಮಡಿದವರು ಕೃತಿಯ ವಿಮರ್ಶೆಯನ್ನು ಮಾಡಿದ್ದಾರೆ. ಮಾಡು ಅಥವಾ ಮಡಿ ತತ್ವದಲ್ಲಿ ನಂಬಿಕೆಯಿಟ್ಟು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿ ಹೋರಾಡಿದ ನಿಸ್ವಾರ್ಥ ಹಳ್ಳಿ ಮಕ್ಕಳ ನೈಜ ಚಿತ್ರವನ್ನು ವಿವೇಚಿಸಿದ್ದಾರೆ.

'ಕೆ.ಎಸ್.ನಿಸಾರ್ ಅಹಮದ್ ಅವರ ಕಾವ್ಯ' ಲೇಖನದಲ್ಲಿ ನಿಸಾರರು ತಮ್ಮ ಕಾವ್ಯಕ್ಕೆ ಪ್ರಮುಖ ವ್ಯಕ್ತಿಗಳ ಚಿತ್ರವನ್ನು ಅಳವಡಿಸಿಕೊಂಡಿರುವುದನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಇವರ ಕವನಗಳು ಸಾಂಸ್ಕೃತಿಕತೆಯನ್ನು ಸಾರುವ ವಿಚಾರಧಾರೆಗಳನ್ನು ವಿಶ್ಲೇಷಿಸಲಾಗಿದೆ.

'ಸಿ.ಪಿ.ಕೆ. ಕಾವ್ಯ : ಒಂದು ವಿಮರ್ಶೆ' ಲೇಖನವು ಸಿ.ಪಿ.ಕೆ. ಕಾವ್ಯಗಳಲ್ಲಿನ ಜನಪರ ಆಶಯ, ಕ್ರೌರ್ಯದಿಂದ ಪ್ರಕೃತಿಯನ್ನು ಕಬಳಿಸುವ ಚಿತ್ರನವನ್ನು ವ್ಯಕ್ತಪಡಿಸಿದ್ದಾರೆ. ನನ್ನ ಗಡಿಯಾರವನು ತಿದ್ದಲೊಲ್ಲೆ, ಬೆಳೆ, ನಮ್ಮ ಕವಿತೆ ಮುಂತಾದ ಕವನಗಳ ಮೂಲಕ ಸಮನ್ವಯ ಮನೋಧರ್ಮದಿಂದ ನಡೆಸಿರುವ ಪ್ರಯೋಗಗಳ ಬಗ್ಗೆ ವಿವೇಚಿಸಲಾಗಿದೆ.

'ರಾಗೌ ಕಾವ್ಯ : ಮೌನದಲ್ಲಿ ಹರಿವ ಮಾನವತೆಯ ತೊರೆ' ಲೇಖನವು ರಾಗೌ ಅವರ ಸಮಾಜಪರವಾದ ನಿಷ್ಠೆ ಮತ್ತು ಆತ್ಮ ನಿಷ್ಠೆ ವಿಷಯಗಳನ್ನು ಪ್ರಾಮಾಣಿಕ ದೃಷ್ಠಿಯಿಂದ ನೋಡುವ ಪ್ರಯತ್ನವನ್ನು ವಿವೇಚನೆಗೆ ಒಳಪಡಿಸಿದ್ದಾರೆ.

'ಬೆಸಗರಹಳ್ಳಿ ರಾಮಣ್ಣನವರ ಕಥೆಗಳು ಹಾಗೂ ಕನ್ನಡ ಸಾಹಿತ್ಯ ಸಂದರ್ಭ' ಲೇಖನವು ಬೆಸಗರಹಳ್ಳಿ ರಾಮಣ್ಣನವರು ತಮ್ಮನ್ನು ನವೋದಯ ಕಾಲಕ್ಕೆ ಒಗ್ಗಿಸಿಕೊಂಡು ಕುವೆಂಪು ಅವರ ಸಾಹಿತ್ಯ ಪ್ರೇರಣೆಗೆ ಒಳಗಾದ ಬಗೆಯನ್ನು, ಭಗ್ನಗೊಂಡ ಗ್ರಾಮ ಪ್ರಪಂಚದ ನೈತಿಕ ಮೌಲ್ಯಗಳ ಚಿತ್ರಣವನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

'ಸಾಹಿತ್ಯದಲ್ಲಿ ಪರಂಪರೆ, ಪ್ರಭಾವ, ಪ್ರಾಮಾಣಿಕತೆ ಇತ್ಯಾದಿ' ಲೇಖನವು ನಮ್ಮ ಪ್ರಾಚೀನ ಕವಿಗಳು ಸಾಂಪ್ರದಾಯಿಕವಾಗಿ ದಾಖಲಾಗಿದ್ದ ಶಿಷ್ಟ ಪರಂಪರೆಯನ್ನು ಅವಲಂಬಿಸಿದ ಕಾರಣವನ್ನು ವಿವೇಚನೆಗೆ ಒಳಪಡಿಸಲಾಗಿದೆ. ವಚನಕಾರರು ವಿಭಿನ್ನ ನೆಲೆಯಲ್ಲಿ ಚಿಂತಿಸುವ ಚಿಂತನೆಯನ್ನು ಹೊಸಗನ್ನಡ ಕಾಲದಲ್ಲಿನ ವೈಚಾರಿಕ ನಿಲುವನ್ನು, ನವೋದಯ ಕಾಲದಲ್ಲಿನ ಪ್ರಾಮಾಣಿಕ ವಿಚಾರಧಾರೆಯನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

'ಮಕ್ಕಳ ಸಾಹಿತ್ಯ ಸೃಷ್ಟಿ : ಪ್ರೇರಣೆ ಮತ್ತು ಪ್ರಯೋಗ' ಲೇಖನದಲ್ಲಿ ಸಾಂಪ್ರದಾಯಿಕ ಶಿಕ್ಷಣ ಕ್ರಮದಿಂದ ಮಗುವನ್ನು ವಿನೂತನ ಶಿಕ್ಷಣದೆಡೆಗೆ ಸಾಗಿಸುವಲ್ಲಿನ ಪ್ರಯತ್ನವನ್ನು ಹಾಗೂ ವಿವಿಧ ಮಕ್ಕಳ ಮಾನಸಿಕ ಹಸಿವನ್ನು ತಣಿಸುವ ಸಾಹಿತ್ಯ ರಚನೆಯಾದ ಬಗೆಯನ್ನು ವಿಮರ್ಶಿಸಲಾಗಿದೆ.

‘ಗಾದೆಗಳಲ್ಲಿ ಅಶ್ಲೀಲತೆಯ ಚಿಪ್ಪು – ಒಂದು ವಿಶ್ಲೇಷಣೆ’ ಲೇಖನವು ಅಶ್ಲೀಲತೆಯ ಚಿಪ್ಪಿನೊಳಗಿನ ಜೀವನಾನುಭವ ದ್ರವ್ಯವನ್ನು ಗಮನಿಸಲು ಹಾಗೂ ವಿಭಿನ್ನ ಸಂಪತ್ತೊಂದು ತಮ್ಮ ಕಣ್ಮುಂದೆ ಸಾಮಾಜಿಕ ಜೀವನವನ್ನು ಅನುಭವಿಸಲು ಗಾದೆಗಳು ಹೇಗೆ ಸಹಾಯಕವಾಗುತ್ತವೆ ಎಂಬುದನ್ನು ವಿವೇಚಿಸಿದ್ದಾರೆ.

‘ಹೊಸಗನ್ನಡ ಕಾವ್ಯ ಮಾರ್ಗಗಳು’ ಲೇಖನದಲ್ಲಿ ಈ ಶತಮಾನದ ಹೊಸಗನ್ನಡದ ಕಾವ್ಯ ಮಾರ್ಗಗಳು, ಕಂಡುಕೊಂಡ ಮೌಲ್ಯಗಳು, ವಿಭಿನ್ನ ನೆಲೆಗಳನ್ನು ಕಂಡು ಹಿಡಿದು ವಿಮರ್ಶೆಗೆ ಒಳಪಡಿಸಿದ್ದಾರೆ.

ಹೊಸ ಸಾಧ್ಯತೆಗಳ ಮಾರ್ಗಕೃತಿ ‘ಕರ್ವಾಲೊ’ ಲೇಖನದಲ್ಲಿ ತೇಜಸ್ವಿ ಅವರು ದೇಶಿಯ ಸಂಸ್ಕೃತಿ ಶೋಧದ ಬಗ್ಗೆ ನೀಡಿರುವ ಒತ್ತಿನ ಬಗ್ಗೆ ವಿಮರ್ಶಿಸಲಾಗಿದೆ. ವರ್ತಮಾನ – ವಿಸ್ಮೃತಿಗಳ ಸಮ್ಮಿಲನದಿಂದ ಮುಳುಗುತ್ತಿರುವ ಸತ್ಯವೊಂದರ ದರ್ಶನ ಹೇಗೆ ಉಂಟಾಗಿದೆ ಎಂಬುದನ್ನು ವಿವೇಚಿಸಲಾಗಿದೆ.

‘ಗೋವಿನ ಹಾಡು – ಒಂದು ಜನಪದ ಕಾವ್ಯವೇ ?’ ಲೇಖನದಲ್ಲಿ ‘ಗೋವಿನ ಹಾಡು’ ಜನಪದ ಕಾವ್ಯ ಅಲ್ಲ ಬದಲಾಗಿ ಜನಪ್ರಿಯ ಸಾಹಿತ್ಯ ಎನ್ನಲು ಅಗತ್ಯವಾದ ವಿಚಾರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

‘ಚಿಕ್ಕೋಳು ಹಿರಿದಿಮ್ಮವ್ವ’ : ಒಂದು ಮನಶಾಸ್ತ್ರೀಯ ವಿಶ್ಲೇಷಣೆ ಲೇಖನವು ಹಿರಿದಿಮ್ಮವ್ವನ ಕಥೆಯ ವಿಶ್ಲೇಷಣೆ ಹಾಗೂ ಮೂಲಕಥೆ ಹೊಸ ತಿರುವು ಪಡೆಯುವಲ್ಲಿ ವ್ಯಕ್ತಿಗತ ರಾಗ ಭಾವನೆಗಳ ಪ್ರಭಾವವನ್ನು ಚರ್ಚಿಸಲಾಗಿದೆ.

‘ಕೆರೆಗೆ ಹಾರ : ಒಂದು ಸಾಂಸ್ಕೃತಿಕ ವಿಶ್ಲೇಷಣೆ’ ಲೇಖನವು ಇತರ ಕಥನ ಗೀತೆಗಳಿಗಿಂತ ‘ಕೆರೆಗೆ ಹಾರ’ ಗೀತೆಯು ಹೊಂದಿರುವ ಸಾಂಸ್ಕೃತಿಕ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಶಿವರಾಮು ಕಾಡನಕುಪ್ಪೆ ಅವರ ಮತ್ತೊಂದು ವಿಮರ್ಶಾ ಕೃತಿ ‘ಕುವೆಂಪು ಸಾಹಿತ್ಯ ಮತ್ತು ವಿಚಾರ’ ಈ ಕೃತಿಯು ಕುವೆಂಪು ಅವರ ವಿವಿಧ ಸಾಹಿತ್ಯ ಪ್ರಕಾರಗಳನ್ನು ವಿಮರ್ಶೆಗೆ ಒಳಪಡಿಸಿ, ವಿಭಿನ್ನ ವಿಷಯಗಳನ್ನು ಹೊರ ತರುವ ಪ್ರಯತ್ನ ಮಾಡಿದೆ.

‘ಪರಂಪರೆ ಸ್ವೀಕರಿಸಿ ಸಂಪ್ರದಾಯ ತಿರಸ್ಕರಿಸಿದ ಕವಿ’ ಲೇಖನದಲ್ಲಿ ಕುವೆಂಪು ಅವರು ಸಂಪ್ರದಾಯವನ್ನು ತಿರಸ್ಕರಿಸಿ ಸಾಹಿತ್ಯವನ್ನು ಹೊಸ ರೀತಿಯಲ್ಲಿ ನೀಡಿ ಪುರೋಹಿತಶಾಹಿಗಳಿಗೆ ಪೆಟ್ಟು ನೀಡಿರುವ ಪರಿಯನ್ನು ವಿಮರ್ಶಿಸಲಾಗಿದೆ. ಇವರ ಕೃತಿಗಳು ಮನುಜ ಮತದ

ಸಂದೇಶವನ್ನು ನೀಡಿ, ವಿವಿಧ ಜಾತಿಯ ಜನರು ಒಂದಾಗಿರುವುದನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಕುವೆಂಪು ಅವರು ಯುಗಧರ್ಮದ ಬಗ್ಗೆ, ಯುವಜನತೆಗೆ ನೀಡಿರುವ ಕರೆಯ ಬಗ್ಗೆ ವಿಮರ್ಶಿಸಲಾಗಿದೆ.

'ಕಲ್ಕಿ' ಒಂದು ವಿಮರ್ಶಾ ಲೇಖನವು ಭಾರತೀಯ ಜನತೆಯಲ್ಲಿನ ಅಸಮಾನತೆಯನ್ನು, ಅದರಿಂದ ಉಂಟಾಗುವ ಸಾಮಾಜಿಕ ವೈಷಮ್ಯವನ್ನು ಕವಿತೆಯ ಮೂಲಕ ವಿಮರ್ಶಿಸಲಾಗಿದೆ. ಕವಿ ಕಲ್ಕಿ ಕವಿತೆಯಲ್ಲಿ ಒಳಗೊಂಡಿರುವ ವಿವಿಧ ತಂತ್ರಗಳು, ಕಲ್ಕಿ ಕವಿತೆಯ ಆಶಯಗಳನ್ನು ವಿವೇಚಿಸಿದ್ದಾರೆ.

'ಪ್ರೇತಕ್ಯೂ : ಅನ್ವಯಿಕ ವಿಮರ್ಶೆ' ಲೇಖನವು ಕುವೆಂಪು ಅವರಲ್ಲಿನ ವಸ್ತು ಪ್ರಜ್ಞೆ, ಸನಾತನ ಮೌಲ್ಯವೊಂದರ ಶೋಧ ಹಾಗೂ ಸಹೃದಯ, ತನ್ನ ಮತ್ತು ತನ್ನ ಜನಾಂಗದ ಕರ್ತವ್ಯ, ಜವಾಬ್ದಾರಿಗಳ ಬಗ್ಗೆ ಚಿಂತಿಸುವಂತೆ ಮಾಡುವ ರೀತಿಯನ್ನು ವಿಮರ್ಶಿಸಿದ್ದಾರೆ. ಕವಿತೆಯಲ್ಲಿನ ಆಶಯವನ್ನು ಚರ್ಚಿಸಿ ವಿಶ್ಲೇಷಣೆ ಮಾಡಿದ್ದಾರೆ. ವಸ್ತು, ಭಾವ, ಭಾಷೆ ಇವೆಲ್ಲವುಗಳ ಬೆಸುಗೆಯಿಂದ ಈ ಕಾವ್ಯವು ವಿಶಿಷ್ಟತೆ ಪಡೆದಿದೆ ಎಂಬುದನ್ನು ತಿಳಿಸಿದ್ದಾರೆ.

'ಮಕ್ಕಳ ಸಾಹಿತ್ಯ – ಕುವೆಂಪು ದೃಷ್ಟಿಯಲ್ಲಿ' ಲೇಖನವು ಕುವೆಂಪು ಅವರ ಪ್ರಕಾರ ಶಿಶು ಸಾಹಿತ್ಯ ಹೇಗಿರಬೇಕು ? ಅದರ ಅಗತ್ಯ ವಸ್ತುಗಳೇನು ? ಉದ್ದೇಶಗಳೇನು ? ಗುರಿ ಏನು ? ಎಂಬುದರ ಧೋರಣೆಗಳನ್ನು ಹುಡುಕಿ, ಇವು ಆಧುನಿಕ ಮಕ್ಕಳ ಜಗತ್ತಿಗೆ ಎಷ್ಟರ ಮಟ್ಟಿಗೆ ಅಗತ್ಯ ಎಂಬುದನ್ನು ವಿಮರ್ಶಿಸಲಾಗಿದೆ.

ಕುವೆಂಪು ಅವರ ಮಾನಸಿಕ ವಿಕಾಸದ ಮೂರು ಹಂತಗಳಿಗೆ ತಕ್ಕಂತೆ ಮಗುವಿಗೆ ಸಾಹಿತ್ಯ ಕೊಡಬೇಕೆಂಬುದರ ಆಳ ಅರಿವನ್ನು ವಿವೇಚನೆಗೆ ಒಳಪಡಿಸಿ ಅದರಿಂದಾಗುವ ಪ್ರಯೋಜನವನ್ನು ತಿಳಿಸಿದ್ದಾರೆ.

'ಆಧುನಿಕ ಬರಹಗಾರರ ಮೇಲೆ ಕುವೆಂಪು ಸಾಹಿತ್ಯ ಮತ್ತು ವ್ಯಕ್ತಿತ್ವದ ಪ್ರಭಾವ' ಲೇಖನವು ಆಧುನಿಕ ಬರಹಗಾರರ ಮೇಲೆ ಕುವೆಂಪು ಅವರ ಸಾಹಿತ್ಯ ಮತ್ತು ವ್ಯಕ್ತಿತ್ವದ ಪ್ರಭಾವದ ಪರಿಣಾಮ ಎಷ್ಟು ? ಇದರಿಂದ ಅವರಲ್ಲಾದ ಬದಲಾವಣೆ ಏನು ? ಈ ಪ್ರಭಾವದಿಂದ ಸಾಹಿತ್ಯ ಕೃತಿಗಳು ಬೆಳೆದಿವೆಯೇ ? ಆಧುನಿಕರು ಕುವೆಂಪು ಅವರನ್ನು ಕಂಡ ಬಗೆ ಹೇಗೆ ? ಕುವೆಂಪು ಸಾಹಿತ್ಯ ಬಗೆ ಎಂತಹುದು ? ಮೇಲಿನ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ವಿಮರ್ಶಕರಾಗಿ ಗುರುತಿಸಿಕೊಂಡವರು, ಕವಿಗಳಾಗಿ ಬೆಳೆದು ಬಂದವರ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

'ಜಲಗಾರ ಮತ್ತು ಸಾಮಾಜಿಕ ಪ್ರಜ್ಞೆ' ಲೇಖನದಲ್ಲಿ ಶೋಷಿತ ವರ್ಗದ ದನಿಯಾಗಿ, ನಾಯಕನಾಗಿ ಜಲಗಾರ ನಡೆದ ಹಾದಿಯನ್ನು ಅವನ ಪರಿಶ್ರಮಕ್ಕೆ ತಕ್ಕ ಫಲ ಅಂತಿಮವಾಗಿ ಸಿಗುವುದನ್ನು ವಿಮರ್ಶೆಗೆ ಒಳಪಡಿಸಿದ್ದಾರೆ. ಕೆಲವು ಆಕ್ಷೇಪಗಳನ್ನು ಎತ್ತುವುದರ ಮೂಲಕ ಕೃತಿಯನ್ನು ವಿವೇಚಿಸಿದ್ದಾರೆ.

'ವಿಶ್ವ ಮಾನವ ಮತ್ತು ಜಾತಿ ಮಾನವರು' ಲೇಖನದಲ್ಲಿ ಕುವೆಂಪು ಅವರ ಸಾಹಿತ್ಯದ ವಿಮರ್ಶೆಯನ್ನು ಅವರ ಶಿಷ್ಯರೇ ಮಾಡುತ್ತಿದ್ದು, ಅದನ್ನು ಭಿನ್ನ ನೆಲೆಯಲ್ಲಿ ಮಾಡುವ ಸಲಹೆ ಹಾಗೂ ಕುವೆಂಪು ಅವರ ಗೌರವವನ್ನು ಕಾಪಾಡುವ ನಿಟ್ಟಿನಲ್ಲಿ ಯೋಚಿಸುವ ಸಂದೇಶವನ್ನು ನೀಡಿದ್ದಾರೆ.

'ಅನಿಕೇತನ – ಒಂದು ದಾರ್ಶನಿಕ ಕವಿತೆ' ಲೇಖನದಲ್ಲಿ ಶಿವರಾಮು ಕಾಡನಕುಪ್ಪೆ ಅವರು ಅನಿಕೇತನ ಕವಿತೆ ಆಳಕ್ಕೆ ಇಳಿದು ಕವಿಯ ದರ್ಶನ ಮಾಡಿ ಕವಿಯು ಚೇತನವೆಂಬ ಪಾತ್ರವನ್ನು, ಭಾವನಾತ್ಮಕ ಒತ್ತಡವನ್ನು ಓದುಗರಲ್ಲಿಗೆ ತರುವಲ್ಲಿ ಯಶಸ್ವಿಯಾದ ಬಗೆಯನ್ನು ವಿವೇಚನೆಗೆ ಒಳಪಡಿಸಿದ್ದಾರೆ.

'ಕುವೆಂಪು ಕವನಗಳಲ್ಲಿ ರೈತ' ಲೇಖನದಲ್ಲಿ ಕುವೆಂಪು ಕವನಗಳಾದ ಕಲ್ಕಿ, ಭೂಮಿ ತಾಯಿಯ ಚೊಚ್ಚಲ ಮಗ, ಕೊಳಲು, ಪ್ರೇತ ಕ್ಯೂ, ನೇಗಿಲ ಯೋಗಿ ಕವಿತೆಗಳಲ್ಲಿನ ರೈತಪರವಾದ ದನಿಯನ್ನು ವಿಮರ್ಶೆಗೆ ಒಳಪಡಿಸಿದ್ದಾರೆ. ರೈತನಿಗಾಗುತ್ತಿರುವ ಶೋಷಣೆ, ಸಾಮ್ರಾಜ್ಯ ಶಾಹಿ, ರಾಜ್ಯ ಶಾಹಿ ಸುಲಿಗೆಯನ್ನು ಕುವೆಂಪು ಅವರ ಕವಿತೆಗಳಲ್ಲಿ ಹೇಗೆ ಚಿತ್ರಿತವಾಗಿವೆ ಎಂಬುದನ್ನು ವಿವೇಚಿಸಿದ್ದಾರೆ.

'ಕುವೆಂಪು ಕಾದಂಬರಿಗಳಲ್ಲಿ ಪ್ರಾದೇಶಿಕತೆ' ಲೇಖನಗಳಲ್ಲಿ ಕುವೆಂಪು ಅವರ ಕಾದಂಬರಿಗಳಲ್ಲಿರುವ ಪ್ರಾದೇಶಿಕ ಅಂಶಗಳ ವಿಶಿಷ್ಟತೆಯನ್ನು, ಕಲಾತ್ಮಕತೆಯನ್ನು ವಿವಿಧ ಆಯಾಮಗಳಲ್ಲಿ ವಿಮರ್ಶಿಸಲಾಗಿದೆ. ಪ್ರಾದೇಶಿಕಾಂಶಗಳು ಕತೆಯೊಂದಿಗೆ ಕತೆಯಂತೆ, ಪಾತ್ರಗಳೊಂದಿಗೆ ಪಾತ್ರದಂತೆ ಕಾದಂಬರಿಯಲ್ಲಿ ಹೆಣೆದುಕೊಂಡ ಬದುಕನ್ನು ವಿವೇಚಿಸಿದ್ದಾರೆ.

'ಸಮನ್ವಯ' ಒಂದು ವಿಮರ್ಶಾತ್ಮಕ ಕೃತಿಯಾಗಿದೆ. ಶಿವರಾಮು ಕಾಡನಕುಪ್ಪೆ ಅವರು ತಮ್ಮ ವಿದ್ಯಾರ್ಥಿ ದಶೆಯನ್ನು ಮುಗಿಸುತ್ತಿದ್ದ ಹಾಗೇ ಸಾಹಿತ್ಯ ಲೋಕಕ್ಕೆ ತೊಡಗಿಸಿಕೊಂಡಂತಹ ಬಹುಮುಖ ಪ್ರತಿಭೆಯಾಗಿದ್ದಾರೆ. ವಿಮರ್ಶೆ ಮಾಡುವುದು ಎಲ್ಲರಲ್ಲೂ ಇರುವಂತಹ ಕಲೆಯಲ್ಲ. ಒಂದು ಕೃತಿಯನ್ನು ಕೂಲಂಕಷವಾಗಿ ಓದಿ, ಅರ್ಥೈಸಿಕೊಂಡು ನಂತರ ವಿಮರ್ಶಿಸುವ ಕಾರ್ಯ ಮಾಡಬೇಕು. ಇಂತಹ ಪ್ರಾಮಾಣಿಕ ಪ್ರಯತ್ನಕ್ಕೆ ತೊಡಗಿಸಿಕೊಂಡು ತಮ್ಮ ಪ್ರತಿಭೆಯನ್ನು

ಎಲ್ಲರ ಅವಲೋಕನಕ್ಕೆ ಬಿಟ್ಟವರು ಶಿವರಾಮು ಕಾಡನಕುಪ್ಪೆ ಅವರು. 'ಸಮನ್ವಯ' ಹೆಸರಿಗೆ ತಕ್ಕ ಅರ್ಥಪೂರ್ಣವಾದ ಕೃತಿ. ಇದು ವೈಯಕ್ತಿಕ ಬದುಕಿಗೆ, ಸಾಹಿತ್ಯಕ್ಕೆ ಅಗತ್ಯವಾಗಿ ಬೇಕಾದುದಾಗಿದೆ. ಈ ಕೃತಿಯಲ್ಲಿ ವಿವಿಧ ಕೃತಿಗಳ ವಿಮರ್ಶೆಯನ್ನು ಮಾಡಿದ್ದಾರೆ.

'ಪರಿಸರ ಬದ್ಧತೆ ಮತ್ತು ಜನಪದ ಸಾಹಿತ್ಯ' ಲೇಖನದ ಸಾರಾಂಶವೆಂದರೆ – ಪ್ರತಿಯೊಬ್ಬ ಕವಿಯು ಕೃತಿ ರಚನೆಯಲ್ಲಿ ಸಾಕಷ್ಟು ಪರಿಸರಕ್ಕೆ ಪ್ರಭಾವಿತನಾಗಿರುತ್ತಾನೆ. ಪ್ರಾಚೀನ ಕೃತಿಗಳ ವಿಮರ್ಶೆ ಮತ್ತು ಆಧುನಿಕ ಕೃತಿಗಳ ವಿಮರ್ಶೆ ಮಾಡುವಲ್ಲಿ ಆಯಾ ಕಾಲದ ಯುಗಧರ್ಮದ ನೆಲೆಯಲ್ಲಿ ವಿಮರ್ಶಕ ಚಿಂತಿಸಿ ವಿಮರ್ಶಿಸುವುದು ಉತ್ತಮ. ಪಂಪನಿಂದ ಕುಮಾರವ್ಯಾಸನವರೆಗಿನ ಕವಿಗಳ ಮೇಲೆ ಪರಿಸರದ ಮೌಲ್ಯ ಪ್ರಜ್ಞೆ ಇರುವುದನ್ನು ಗಮನಿಸಬಹುದು.

ಆಧುನಿಕ ಕವಿಗಳಾದ ಕುವೆಂಪು, ಬೇಂದ್ರೆ, ಪು.ತಿ.ನ. ಅವರ ಕಾವ್ಯಗಳ ಕಡೆಗೆ ದೃಷ್ಟಿ ಹಾಯಿಸಿದಾಗ ಅವರ ಮೇಲೆ ಪರಿಸರ ಪ್ರಭಾವದಿಂದಾದ ಮಹತ್ವದ ಬೆಳವಣಿಗೆಯನ್ನು ಕಾಣಬಹುದು. ಜಾನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯಗಳು ಪರಿಸರವನ್ನು ತಮ್ಮ ವಿವಿಧ ಪ್ರಕಾರಗಳಿಗೆ ಬಳಸಿಕೊಳ್ಳುವಲ್ಲಿ ಭಿನ್ನತೆಯನ್ನು ಹೊಂದಿವೆ. ಕೆಲವು ಜನಪದ ತ್ರಿಪದಿಗಳನ್ನು ಶಿವರಾಮು ಕಾಡನಕುಪ್ಪೆ ಅವರು ವಿಮರ್ಶೆಗೆ ಒಳಪಡಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವು ಉತ್ತುರ ದೇವಿ ಕಾವ್ಯ, ಗರತಿ ಹಾಡು, ಗಂಗೆ ಗೌರಿ ಜಗಳ ಜಾನಪದ ಕಥನ ಗೀತೆ, ಗಿರಿಜಾ ಮಲ್ಲಯ್ಯ, ನುಚ್ಚಾಯ್ತು ನೀರ ಹೊಳೆಯಾಗೆ ಮುಂತಾದವು.

ಉತ್ತುರ ದೇವಿ ಕಾವ್ಯದಲ್ಲಿ ಈಕೆಯ ಕಥೆ ಬೇಲೂರು, ಕುಣಿಗಲ್ಲು ಪ್ರದೇಶಗಳಲ್ಲಿ ಪ್ರಚಲಿತವಾಗಿತ್ತೆಂಬ ಸೂಚ್ಯವನ್ನು ಕಾಣಬಹುದು. ಮಂಟೆಸ್ವಾಮಿ ಕಾವ್ಯ ಮಳವಳ್ಳಿ, ಮಂಡ್ಯ, ಚನ್ನಪಟ್ಟಣದಲ್ಲಿ ಪ್ರಸಿದ್ಧವಾಗಿತ್ತು. ಈ ರೀತಿಯ ಕಾವ್ಯಗಳು ಅಲ್ಲಿನ ಪರಿಸರಕ್ಕೆ ಒಳಗಾಗಿದ್ದವು ಎಂಬುದನ್ನು ವಿಮರ್ಶಿಸಿದ್ದಾರೆ.

ಐತಿಹಾಸಿಕ ಗೀತೆಗಳಲ್ಲಿಯೂ ಕೂಡ ಜನತೆ ನಂಬಿಕೆ, ಆಚರಣೆಗಳನ್ನು ತಮ್ಮ ಕಾವ್ಯದಲ್ಲಿ ಸೇರಿಸಿರುತ್ತಾರೆ. ಸೂಕ್ಷ್ಮವಾಗಿ ಐತಿಹಾಸಿಕ ಕಾವ್ಯಗಳನ್ನು ಗಮನಿಸಿದಾಗ ಪರಿಸರದ ಅಂಶಗಳು ಕಂಡು ಬರುತ್ತವೆ.

ಪೌರಾಣಿಕ ಗೀತೆಗಳಲ್ಲಿಯೂ ಕಾಲ್ಪನಿಕ ಪಾತ್ರಗಳು ಬಂದರೂ ಅವು ಸಾಮಾಜಿಕ ಆಚಾರ ವಿಚಾರಗಳನ್ನು, ನಡೆ–ನುಡಿಯನ್ನು ಅವಲಂಬಿಸಿರುತ್ತವೆ. ಗಿರಿಜಾ ಮಲ್ಲಯ್ಯ ಕಥನ ಗೀತೆಯಲ್ಲಿ ಶಿವ, ಪಾರ್ವತಿಯರು ವಾಸ್ತವ ಬದುಕಿನ ಕೆಲಸ ಮಾಡುವುದನ್ನು ಕಾಣಬಹುದು.

ಒಟ್ಟಾರೆ ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಇವರೆಡನ್ನು ಅಧ್ಯಯನ ಮಾಡಲು ಬೇರೆ–ಬೇರೆ ವಿಧಾನಗಳಿವೆ. ಅವುಗಳನ್ನು ಅನುಸರಿಸಿ ವಿಮರ್ಶೆಯನ್ನು ಮಾಡುವುದರ ಮೂಲಕ ಕೆಲವು ಕಥನ ಗೀತೆಗಳನ್ನು ವಿವೇಚನೆಗೆ ಒಳಪಡಿಸಿದ್ದಾರೆ.

'ಕೆ.ಎಸ್.ನಿಸಾರ್ ಅಹಮದ್ ಅವರ 'ಸುಮುಹೂರ್ತ" ಲೇಖನ ನಿಸಾರ್ ಅಹಮದ್ ಅವರು ಈ ಕೃತಿಯ ಮೂಲಕ ಹಳೆಯ ಅಭಿವ್ಯಕ್ತಿ ಮಾರ್ಗವನ್ನು ಬಿಟ್ಟು ಪ್ರಸ್ತುತ ಸಮಾಜದಲ್ಲಿನ ವಿಷಮತೆ, ಹೆಣ್ಣಿನ ಸಹಜ ಅನಿಸಿಕೆ, ತಮ್ಮ ಬದುಕಿನ ಹಾದಿಯಲ್ಲಿ ಬಂದು ಹೋಗಿರುವ ವಿಶಿಷ್ಟ ವ್ಯಕ್ತಿಗಳ ಚಿತ್ರಣ, ಪ್ರಕೃತಿ ವರ್ಣನೆ ಮುಂತಾದ ವೈಶಿಷ್ಟ್ಯವನ್ನು ವ್ಯಕ್ತಪಡಿಸಿದ ಬಗೆಯನ್ನು ವಿವರಿಸಿದೆ. 'ವಾಸ್ತವಿಕ' ಕವಿತೆಯಲ್ಲಿ ನಿಸಾರರು ವಾಸ್ತವಿಕತೆಯನ್ನು ಆತ್ಮಪೂರ್ವಕವಾಗಿ ಒಪ್ಪಿಕೊಂಡಾಗ ಆದರ್ಶದ ದಾರಿಯಲ್ಲಿ ನಡೆಯಲು ಸಾಧ್ಯವಾಗುತ್ತದೆ ಎಂಬುದನ್ನು ಉತ್ತಮ ಉದಾಹರಣೆಯ ಮೂಲಕ ವಿವರಿಸುತ್ತಾರೆ. 'ಮಡಿವಂತ' ಕವಿತೆಯಲ್ಲಿ ಪ್ರತಿಯೊಬ್ಬರು ಸಂಪ್ರದಾಯ ಬಿಟ್ಟು, ಭಿನ್ನವಾದ ಹೊಸ ಬದುಕನ್ನು ತಮ್ಮದಾಗಿಸಿಕೊಂಡು ಬದುಕುವ ಸಂದೇಶ ನೀಡಿದ್ದಾರೆ. ಕೆಲಸದಲ್ಲಿ ಎಲ್ಲರೂ ಪ್ರಾಮಾಣಿಕವಾಗಿದ್ದು, ಸಾರ್ಥಕತೆಯನ್ನು ಪಡೆಯುವುದರಲ್ಲಿ ಯಶಸ್ಸು ಸಾಧಿಸುವ ನೀತಿ 'ಕರ್ಮ' ಕವನದಲ್ಲಿದೆ.

ನಿಸಾರರು ಹೆಣ್ಣನ್ನು ಕುರಿತು ಕವನಗಳನ್ನು ರಚಿಸಿ ಹೆಣ್ಣಿನ ಮನಸ್ಸು, ಹಾವಭಾವ, ಕಾಮುಗಳನ್ನು, ಪ್ರಕೃತಿಯ ಸೃಷ್ಟಿಯನ್ನು ವಾಸ್ತವವಾಗಿ ನಿರೂಪಿಸಿದ್ದಾರೆ. 'ನಕ್ಷತ್ರಿಕ' ಕವನದಲ್ಲಿ ಪ್ರೀತಿಸಿ ಮೋಸ ಮಾಡಿದ ಹೆಣ್ಣನ್ನು ಪ್ರಿಯಕರ ಕಾಡುವ ಚಿತ್ರಣವನ್ನು ನೀಡಿದ್ದಾರೆ.

ನಿಸಾರರು ವಿಡಂಬನಾತ್ಮಕ ಕವಿತೆಗಳಲ್ಲಿ ಹರಿತವಾದ, ಬೆಂಕಿಯಂತಹ ಮಾತುಗಳಿಂದ ರಾಜಕೀಯ, ಸಮಾಜದ ಆಚಾರ ವಿಚಾರಗಳು, ನಂಬಿಕೆ ಸಂಪ್ರದಾಯಗಳು ಹೊಸ ರೂಪವನ್ನು ಪಡೆದಿವೆ. 'ಶ್ರೀ ಸಾಮಾನ್ಯನ ಪ್ರತಿನಿಧಿ' ಕವಿತೆಯಲ್ಲಿ ಬಡವರನ್ನು ನಿರಂತರವಾಗಿ ಶೋಷಣೆ ಮಾಡುವ ಜನಪ್ರತಿನಿಧಿಯಲ್ಲಿ ಸರಿಯಾದ ಮಾರ್ಗದಲ್ಲಿ ವಿವೇಚಿಸುವ ಬುದ್ಧಿಯನ್ನು ಕಳೆದುಕೊಂಡಿರುವುದನ್ನು ವಿವರಿಸಲಾಗಿದೆ. ಉದ್ದದ ಭಾಷಣ ಮಾಡಿ ಹಿರಿಯ ಆದರ್ಶ ಪಾಲಿಸುವ ಶಪಥ ಮಾಡಿ ಗಾಳಿಗೆ ತೂರಿ ಮೋಸದ ಬದುಕಿನಲ್ಲಿ ಸಾರ್ಥಕತೆಯನ್ನು ಕಾಣುವ ದುಷ್ಟ ರಾಜಕಾರಣಿಗಳನ್ನು ಬಯಲಿಗೆಳೆದ ರೀತಿಯನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ನಿಸಾರರು ಪ್ರಕೃತಿಯ ವರ್ಣನೆಯಲ್ಲಿ ಸಹಜತೆಯನ್ನು ಅಳವಡಿಸಿಕೊಂಡು, ಹೊಸ ರೀತಿಯ ಪ್ರಕೃತಿಯನ್ನು ನೋಡುವ ನಿಲುವನ್ನು 'ಜೋಗದಲ್ಲಿ ಅನಿಸಿದ್ದು' ಕವಿತೆಯ ಮೂಲಕ ವಿಮರ್ಶಿಸಿದ್ದಾರೆ. ಜೋಗ ಜಲಪಾತವು ಕವಿಗೆ ಹೊಸ ಪ್ರತಿಮೆಯಾಗಿ, ಜೀವನದ ಸುಪ್ರತಿಮವಾಗಿ ಕಂಡಿದೆ ಎಂಬುದನ್ನು ವಿವೇಚನೆಗೆ ಒಳಪಡಿಸಿದ್ದಾರೆ. ಶಿವರಾಮು ಕಾಡನಕುಪ್ಪೆ ಅವರು

'ಸುಮುಹೂರ್ತ' ಕವನ ಸಂಕಲನದಲ್ಲಿನ ಹೆಣ್ಣಿಗೆ ಸಂಬಂಧಿಸಿದ, ಪ್ರಕೃತಿಯ ಚಿತ್ರಣವನ್ನೊಳಗೊಂಡ, ವಿಡಂಬನಾತ್ಮಕ ಕವನಗಳಲ್ಲಿನ ಸಾರವನ್ನು ವಿಮರ್ಶಿಸಿ ನಿಸಾರರು ತಮ್ಮ ಸಮಕಾಲಿನ ಕವಿಗಳಲ್ಲಿ ಹೇಗೆ ಭಿನ್ನರಾಗಿದ್ದಾರೆ ಎಂಬುದನ್ನು ತಿಳಿಸಿದ್ದಾರೆ.

'ಗೋವಿನ ಹಾಡು – ಒಂದು ಜನಪದ ಕಾವ್ಯವೇ ?' ಲೇಖನವು ಗೋವಿನ ಹಾಡು ಯಾವ ಸಾಹಿತ್ಯಕ್ಕೆ ಸೇರುತ್ತದೆ ಎಂಬುದನ್ನು ವಿವೇಚನೆಗೆ ಒಳಪಡಿಸಿದ್ದಾರೆ. ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯದ ನೆಲೆಗಟ್ಟಿನಲ್ಲಿ ನೋಡಿದಾಗ ಇದು ಅವುಗಳ ಸಾಲಿಗೆ ಬರದೇ 'ಜನಪ್ರಿಯ ಸಾಹಿತ್ಯ'ದಲ್ಲಿ ಹೆಚ್ಚು ಗುರುತಿಸಿಕೊಳ್ಳುವುದನ್ನು ಸಂಶೋಧನೆಯ ಮೂಲಕ ವಿವರಿಸಿದ್ದಾರೆ. ಇಲ್ಲಿನ ಭಾಷೆ, ವರ್ಣನೆ, ತತ್ವ ಪ್ರತಿಪಾದನೆಯು ಶಿಷ್ಟ ಸಾಹಿತ್ಯದಿಂದ ಪ್ರಭಾವಿತವಾಗಿ 'ಜನಪ್ರಿಯ ಸಾಹಿತ್ಯ'ವಾಗಿದೆ. ಕಥನ ಕವನದಲ್ಲಿನ ವಿವಿಧ ಛಂಧೋನಿಯಮ, ಆದಿಪ್ರಾಸ, ಸಂಸ್ಕೃತ ಪದಗಳ ಬಳಕೆಯನ್ನು ನೋಡಿದಾಗ ಸಂಸ್ಕೃತ ತಿಳಿದಿರುವ ಅಜ್ಞಾತ ಕವಿಯೊಬ್ಬ ಸರಳವಾಗಿ ರಚಿಸಿ ಉತ್ತಮ ತತ್ವವನ್ನು ಜನಪ್ರಿಯವಾಗುವಂತೆ ಮಾಡಿದ್ದಾನೆ. ಈ ಅಂಶಗಳನ್ನೆಲ್ಲಾ ವಿವೇಚನೆಗೆ ಒಳಪಡಿಸಿ 'ಗೋವಿನ ಹಾಡು' ಜಾನಪದವಲ್ಲ, ಜನಪ್ರಿಯ ಸಾಹಿತ್ಯ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ.

'ಆಕಳ ಹಾಡು' ಮತ್ತು 'ಗೋವಿನ ಹಾಡು' ಕಥನ ಗೀತಗಳನ್ನು ಹೋಲಿಕೆ ಮಾಡಿ ಅವೆರಡರಲ್ಲಿನ ಭಿನ್ನತೆಗಳನ್ನು ಗುರುತಿಸಿದ್ದಾರೆ. ಗೋವಿನ ಹಾಡಿನಲ್ಲಿ ಸತ್ಯ ಮತ್ತು ಪ್ರಾಮಾಣಿಕತೆಯ ಮುಂದೆ ಕ್ರೌರ್ಯ ನಿಲ್ಲಲಾರದು ಎಂಬ ನೀತಿಯನ್ನು ತೋರಿಸಲಾಗಿದೆ. ಆಕಳ ಹಾಡಿನಲ್ಲಿ ಹಿಂಸೆಯು ಅಹಿಂಸೆಯ ರೂಪ ತಾಳುವುದನ್ನು ವಿಮರ್ಶಿಸಿದ್ದಾರೆ.

'ಭಾರತೀಪುರ' ಲೇಖನವು ಕಾದಂಬರಿಯ ಸೋಲಿಗೆ ಕಾರಣವಾದ ಅಂಶಗಳನ್ನು ವಿವೇಚಿಸಿ ವಿಮರ್ಶಿಸುವ ಕಾರ್ಯವನ್ನು ಮಾಡಿದೆ. ಭಾರತೀಪುರ ಯು.ಆರ್.ಅನಂತ ಮೂರ್ತಿಯವರ ಕಾದಂಬರಿಗಳಲ್ಲಿ ಒಂದಾಗಿದ್ದು, ದಲಿತರ ಉದ್ಧಾರ ಮಾಡುವ ನಿಟ್ಟಿನಲ್ಲಿ ದಲಿತರಿಗೆ ಪ್ರಜ್ಞೆ ಮೂಡಿಸುವಲ್ಲಿ ಸೋತಿರುವಂತಹುದಾಗಿದೆ. ದಲಿತರನ್ನು ಮೌಢ್ಯದಿಂದ ಮೇಲೆತ್ತುವ ಬ್ರಾಹ್ಮಣನ ನಿಲುವು ಸೋಲನ್ನು ಕಂಡಿರುವುದನ್ನು ವಿವರಿಸಲಾಗಿದೆ. ದಲಿತರಿಗೆ ನಿಜವಾದ ವ್ಯಕ್ತಿತ್ವದ ರೂಪ ಕೊಡುವ ಕಾರ್ಯದಲ್ಲಿ ಕೃತಿ ಹಿಂದುಳಿದಿರುವುದನ್ನು ಸಾಬೀತುಪಡಿಸುತ್ತದೆ.

'ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಬಂಡಾಯ ಪ್ರವೃತ್ತಿ' ಲೇಖನವು ಬೆಸಗರಹಳ್ಳಿ ರಾಮಣ್ಣ ಅವರು ವಿವಿಧ ಕಥೆಗಳಲ್ಲಿ ಬರುವ ಪಾತ್ರಗಳ ಮೂಲಕ ಬಂಡಾಯದ ಧ್ವನಿ ಎತ್ತುವ

ಮೂಲಕ ಸಮಾಜದ ಬದಲಾವಣೆಯನ್ನು ನಿರೀಕ್ಷಿಸಿರುವುದನ್ನು ವಿವರಿಸಲಾಗಿದೆ. ರಾಮಣ್ಣ ಅವರು ತಮ್ಮ ಕಥೆಗಳಲ್ಲಿ ಹಳ್ಳಿಯ ಜನರ ಜೀವನದಲ್ಲಿನ ದ್ವೇಷ, ಮತ್ಸರ, ಪ್ರೀತಿ, ವಾತ್ಸಲ್ಯ, ನಂಬಿಕೆ, ಅಲ್ಲಿನ ರಾಜಕೀಯ ಇತ್ಯಾದಿ ಸಮಸ್ಯೆಗಳ ಜೊತೆಗೆ ಮಣ್ಣಿನ ಮಕ್ಕಳ ಸುಖ ದುಃಖ, ಔಧಾರ್ಯ, ಪ್ರಕೃತಿಯಲ್ಲಿ ಬೇರೆಯವರಾಗಿ ಉಳಿಯದೆ ಮಣ್ಣಿನಲ್ಲಿ ಒಂದಾಗಿ ಬಾಳುವುದನ್ನು ಕಾಣಬಹುದು. ಇವರು ತಮ್ಮ ಕಥೆಯಲ್ಲಿ ಹೆಣ್ಣನ್ನು ಹಸಿಯಾಗಿ ವರ್ಣಿಸಿ ಛಪಲ ತೀರಿಸಿಕೊಳ್ಳುವ ಇತರೆ ಕಥೆಗಾರರಿಗಿಂತ ಭಿನ್ನವಾಗಿ ಹೆಣ್ಣನ್ನು ಮೇಲೆತ್ತುವ, ಹೆಣ್ಣಿನಿಂದ ಶೋಷಣೆಯ ವಿರುದ್ಧ ಘರ್ಜನೆಯನ್ನು ಮಾಡುವ ಹೊಸ ದಾರಿಯಲ್ಲಿ ನಡೆದಿದ್ದಾರೆ ಎಂಬುದನ್ನು ವಿವರಿಸಿದ್ದಾರೆ.

'ಅವ್ವ' ಕಥೆಯಲ್ಲಿ ಹೆಣ್ಣೊಬ್ಬಳು ತನ್ನ ಮಗನನ್ನು ಜೀತಕ್ಕೆ ದೂಡುವುದನ್ನು ತಡೆಯುವ ಸಲುವಾಗಿ ಬಂಡಾಯದ ಪ್ರವೃತ್ತಿಯನ್ನು ತನ್ನದಾಗಿಸಿಕೊಂಡು ಸಾಹುಕಾರನ ವಿರುದ್ಧ ತಿರುಗಿಬೀಳುವ ಚಿತ್ರಣವಿದೆ. ತನ್ನ ಸ್ವಾಭಿಮಾನದ ಉಳುವಿಗಾಗಿ ಒಡವೆಗಳನ್ನು ಅಡವಿಟ್ಟು ಸಾಹುಕಾರನ ಹಣವನ್ನು ಹಿಂದಿರುಗಿಸುವ ಬಗೆಯನ್ನು ವಿವರಿಸಿದ್ದಾರೆ. ರಾಮಣ್ಣ ಅವರು ಸಮಾಜದಲ್ಲಿನ ಮೂಢನಂಬಿಕೆ, ಅಂಧ ಸಂಪ್ರದಾಯದ ವಿರುದ್ಧ ಸಿಡಿದೇಳುವ, ದೀನ ದಲಿತರನ್ನು ಕರುಣೆಯಿಂದ ಪ್ರೀತಿಸಿ ಛಲವನ್ನು ತುಂಬಿ ಧೈರ್ಯದಿಂದ ಮುನ್ನಡೆಯುವ ಸಂದೇಶವನ್ನು ತಮ್ಮ ಕಥೆಗಳಲ್ಲಿ ನೀಡಿದ್ದಾರೆ.

'ಬೈರಪ್ಪನವರ ಜಲಪಾತ' ಲೇಖನದಲ್ಲಿ ಶಿವರಾಮು ಕಾಡನಕುಪ್ಪೆ ಅವರು, ಕಾದಂಬರಿಯ ಕಥೆಯನ್ನು ವಿವರಿಸಿ ಸೃಷ್ಟಿಯ ಕ್ರಿಯೆಯಲ್ಲಿ ಜೀವನ ಶಕ್ತಿ ಮತ್ತು ಆ ಶಕ್ತಿಯನ್ನು ಹತ್ತಿಕ್ಕುವ ಜೀವನದ ತಾಕಲಾಟದ ಕಥೆಯನ್ನು ವಿವರಿಸಿದ್ದಾರೆ. ಆದರ್ಶ ಮತ್ತು ವಾಸ್ತವಗಳ ಗುದ್ದಾಟ ಯಾವ ಹಂತ ತಲುಪುತ್ತದೆ ಎಂಬುದನ್ನು ತಿಳಿಸಿದ್ದಾರೆ. ವಾಸ್ತವ ಪ್ರಪಂಚವನ್ನು ಚೆನ್ನಾಗಿ ಅರಿಯದೆ ಬರಿ ಆದರ್ಶಗಳನಿಟ್ಟುಕೊಂಡು ಬದುಕಲು ಸಾಧ್ಯವಿಲ್ಲ. ಎಂದಿಗೂ ವಾಸ್ತವಿಕತೆಗೆ ಗೆಲುವು ಸಿಗುತ್ತದೆಂಬುದನ್ನು ವಿವಿಧ ಪಾತ್ರಗಳ ಮೂಲಕ ತೋರಿಸುವ ಪ್ರಯತ್ನ ಮಾಡಿದ್ದಾರೆ. 'ಮತದಾನ' ಕಾದಂಬರಿಯು ಅತಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಂಡು ಮನೆಯವರ ಮೇಲೆ ಒತ್ತಡ ಹೇರಿದಾಗ ಮಾನವೀಯತೆಯು ನಾಶವಾಗುತ್ತದೆಂಬ ಸೂಚ್ಯವನ್ನು ಹೊಂದಿದೆ.

'ನಾಯಿ ನೆರಳು ಒಂದು ವಿವೇಚನೆ' ಲೇಖನದಲ್ಲಿ ಶಿವರಾಮು ಕಾಡನಕುಪ್ಪೆ ಅವರು ಕಾದಂಬರಿಯನ್ನು ವಿಸ್ತೃತವಾಗಿ ವಿಮರ್ಶಿಸಿ ಕಾದಂಬರಿಯ ಸೋಲಿಗೆ ಕಾರಣವಾದ ಪ್ರಮುಖ ಅಂಶಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಚಿಂತನಶೀಲ ಬರಹಗಾರರಾಗಿರುವ ಭೈರಪ್ಪ ಅವರು

ಸಂಪ್ರದಾಯವನ್ನು ಜನರ ಮನಸ್ಸಿನಲ್ಲಿ ಬಲವಂತವಾಗಿ ತುರುಕುವ ಪ್ರಯತ್ನವನ್ನು ಮಾಡಿದ್ದಾರೆ. ಕಾಲ ಬದಲಾದಂತೆ ಕಾಲಕ್ಕೆ ತಕ್ಕ ಕಥಾ ವಸ್ತುಗಳ ಬಳಕೆಯಿಂದ ಜನರಲ್ಲಿ ವೈಜ್ಞಾನಿಕ ಪ್ರಜ್ಞೆಯನ್ನು ಮೂಡಿಸಿ ಉತ್ತಮ ಹಾದಿಯಲ್ಲಿ ನಡೆಯಲು ಸಹಕರಿಸುವ ಬದಲು, ಅವರನ್ನು ಮೂಢನಂಬಿಕೆ, ಸಂಪ್ರದಾಯದ ಜಾಲಕ್ಕೆ ಸಿಲುಕಿಸುವ ಪ್ರಯತ್ನ ನಾಯಿ ನೆರಳು ಕಾದಂಬರಿಯಲ್ಲಿದೆ. ಆಧುನಿಕ ಪ್ರಜ್ಞೆಯನ್ನು ಹೊಂದಿ ವಿಜ್ಞಾನದ ವಿದ್ಯಾರ್ಥಿಯಾದ ಅಚ್ಯುತ ದ್ವಂದ್ವತೆಯಲ್ಲಿ ಮುಳುಗುವಂತೆ ಮಾಡುವುದು ಎಷ್ಟರಮಟ್ಟಿಗೆ ಸರಿ ? ಇವೆ ಮುಂತಾದ ಪ್ರಶ್ನೆಗಳಿಂದ ಕಾದಂಬರಿ ಉತ್ತಮವಾಗಿಲ್ಲ ಎಂಬುದನ್ನು ವಿಮರ್ಶಿಸಿದ್ದಾರೆ.

'ಚಿಕ್ಕೋಳು ಹಿರಿದಿಮ್ಮವ್ವ' ಒಂದು ಮನಶಾಸ್ತ್ರೀಯ ವಿಶ್ಲೇಷಣೆ ಲೇಖನದಲ್ಲಿ ಶಿವರಾಮು ಕಾಡನಕುಪ್ಪೆ ಅವರು, ಮನಶಾಸ್ತ್ರೀಯ ನೆಲೆಗಟ್ಟಿನಲ್ಲಿ ಕಥನ ಗೀತೆಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿ ಹಿರಿದಿಮ್ಮಿಯಲ್ಲಿನ ಎರಡು ಮನಸ್ಥಿತಿಯನ್ನು ತಿಳಿಸಿದ್ದಾರೆ. ಒಂದು ಕಡೆ ಆಕರ್ಷಕ ವ್ಯಕ್ತಿಯ ರೂಪಕ್ಕೆ ಮರುಳಾಗಿ ಅವನು ಮಾಡುವ ಅಚಾತುರ್ಯವನ್ನೆಲ್ಲಾ ಮುಚ್ಚಿಡುವ ಪ್ರಯತ್ನ, ಮತ್ತೊಂದೆಡೆ ಗರತಿಯ ರೀತಿಯಲ್ಲಿ ಗಂಡನ ಜೊತೆಯಲ್ಲಿ ಮನೆ ಪ್ರವೇಶಿಸುವುದು. ಇಬ್ಬರ ಮರಣದ ನಂತರ ಅವರಿಬ್ಬರ ತಲೆಯನ್ನು ತನ್ನ ಚಿತೆಯೊಡನೆ ಇಟ್ಟುಕೊಳ್ಳುವುದು ಯಾವ ಧರ್ಮ ಎಂಬ ಪ್ರಶ್ನೆಗಳು ಮೇಲೇಳುತ್ತವೆ. ಇಂತಹ ಪ್ರಶ್ನೆಗಳನ್ನು ಆಳವಾಗಿ ವಿಮರ್ಶಿಸಿ ಅದರಲ್ಲಿನ ಸಾರವನ್ನು ತಿಳಿಸಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರ ಮತ್ತೊಂದು ವಿಮರ್ಶಾ ಕೃತಿ 'ಸಂವಹನ' ಇದು ಶಿವರಾಮು ಅವರ ನಿಲುವುಗಳು ಗಟ್ಟಿಯಾಗಿ ಹೊರಬರುವಲ್ಲಿ ಕಾರಣವಾದ ಕೃತಿಯಾಗಿದೆ. ಈ ಕೃತಿಯು ವಿಭಿನ್ನ ಲೇಖನಗಳನ್ನು ಒಳಗೊಂಡಿದೆ.

'ಕನ್ನಡದಲ್ಲಿ ವಸ್ತುನಿಷ್ಠ ವಿಮರ್ಶೆ ಕೆಲವು ತೊಡಕುಗಳು' ಲೇಖನದಲ್ಲಿ ಕೃತಿಗಳ ವಿಮರ್ಶೆಯಲ್ಲಿ ವಿಮರ್ಶಕರು ತೆಗೆದುಕೊಳ್ಳುವ ನಿಲುವುಗಳ ಬಗ್ಗೆ ಶಿವರಾಮು ಅವರು ವಿವರಿಸಿದ್ದಾರೆ. ವಿಮರ್ಶಕ ಒಂದು ಕೃತಿಯಲ್ಲಿನ ಮಹತ್ವಗಳನ್ನು, ಸೋಲುಗಳನ್ನು, ವಿಶ್ಲೇಷಣೆ ಮಾಡುತ್ತಾನೆ. ಈ ಕಾರ್ಯವನ್ನು ಮಾಡುವಾಗ ಅವನು ತನ್ನ ಮತ್ತು ಸಾಹಿತಿಯ ವೈಯುಕ್ತಿಕ ಸಂಬಂಧಗಳನ್ನು ದೂರ ಮಾಡಿ ಜೀವನಾನುಭವ, ಸಾಹಿತ್ಯದ ಅಧ್ಯಯನ, ಸಂಸ್ಕಾರಗಳ ನೆಲೆಗಟ್ಟಿನಲ್ಲಿ ಮಾಡಬೇಕು. ಕೃತಿಯಲ್ಲಿನ ಮೌಲ್ಯವನ್ನು, ಗುಣ ದೋಷಗಳನ್ನು ಧೈರ್ಯದಿಂದ ನಿಸ್ಸಂಕೋಚವಾಗಿ ಹೇಳುವ ಪ್ರಯತ್ನವೇ ನಿಜವಾದ ವಿಮರ್ಶೆಯಾಗಿದೆ. ಆದರೆ ಕೆಲವು ವಿಮರ್ಶಕರು ಕೃತಿಗಳನ್ನು ಪ್ರಶಂಶಾತ್ಮಕ ವಿಮರ್ಶೆ ಮಾಡಿದ್ದಾರೆ. ಇದರಿಂದ ಕೃತಿಯ ಪ್ರಸಿದ್ಧಿ

ಹೆಚ್ಚಾಗಿ ಸಹೃದಯರ ಗಮನ ಕೃತಿಯತ್ತ ಹರಿಯುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ನವ್ಯ ಸಾಹಿತಿಗಳು ತಮ್ಮ ಕೃತಿಯನ್ನು ತಾವೇ ವಿಮರ್ಶೆ ಮಾಡಿಕೊಂಡಿದ್ದಾರೆ. ಇದರಿಂದ ವೈಯಕ್ತಿಕತೆ ಹೆಚ್ಚಾಗಿ ಬೆಳೆಯಲು ಸಾಧ್ಯವಾಯಿತೆಂಬುದನ್ನು ವಿವರಿಸಿದ್ದಾರೆ.

ಕೃತಿ ವಿಮರ್ಶೆಯಲ್ಲಿ ಪ್ರಮುಖವಾಗಿ ಗಮನಿಸಬಹುದಾದ ಕೆಲವು ತೊಡಕುಗಳನ್ನು ವಿವರಿಸಿದ್ದಾರೆ. ಪ್ರಾದೇಶಿಕತೆ, ಹಂಗು, ಜಾತಿ, ಧರ್ಮ ಮುಂತಾದವುಗಳ ಪ್ರಭಾವಕ್ಕೆ ವಿಮರ್ಶಕ ಒಳಗಾಗಿರುತ್ತಾನೆ. ಲೇಖಕ ಆಯ್ಕೆ ಮಾಡಿಕೊಳ್ಳುವ ಸಾಹಿತಿ ತನ್ನ ಜಿಲ್ಲೆ ಮತ್ತು ಜಾತಿಗೆ ಸೇರಿದವನಾಗಿದ್ದರೆ ಬರವಣಿಗೆ ಸಡಿಲವಾಗಿರುತ್ತದೆ. ಇತರರ ಹಂಗಿಗೆ ಒಳಗಾಗಿ ತನ್ನ ಸ್ಥಾನ ಭದ್ರಪಡಿಸಿಕೊಳ್ಳುವಲ್ಲಿ ವಿಮರ್ಶಕ ಹೊಗಳು ಭಟ್ಟನಂತೆ ಕಾರ್ಯನಿರ್ವಹಿಸುತ್ತಾನೆ. ಕೆಲವು ವಿಮರ್ಶಕರು ಪಾಶ್ಚಾತ್ಯ ವಿಮರ್ಶಾ ಪದ್ಧತಿಗಳಿಗೆ, ವಿಚಾರ ಧಾರೆಗಳಿಗೆ ಒಳಗಾಗಿ ವಿಮರ್ಶೆ ಮಾಡಿದಾಗ ಕೃತಿಗಳಲ್ಲಿ ವಸ್ತು ನಿಷ್ಠತೆಯನ್ನು ಕಾಣಲು ಸಾಧ್ಯವಾಗುವುದಿಲ್ಲ. ಜಾತಿ ಪ್ರಜ್ಞೆಯನ್ನು ಒಳಗೊಂಡ ವಿಮರ್ಶೆಗಳು ಹೆಚ್ಚಾಗಿವೆ. ಇಂತಹ ವಿಮರ್ಶೆಯನ್ನು ಕೊನೆಗಾಣಿಸಿ ವಸ್ತುನಿಷ್ಠ ವಿಮರ್ಶೆ ಮಾಡುವ ವಿಮರ್ಶಕರ ಅಗತ್ಯವಿದೆ ಎಂದಿದ್ದಾರೆ.

'ಕೆರೆಗೆ ಹಾರ ಒಂದು ಸಾಂಸ್ಕೃತಿಕ ವಿಶ್ಲೇಷಣೆ' ಲೇಖನದಲ್ಲಿ ಜನಪದ ಕಥನ ಗೀತೆಯಲ್ಲಿ ನಮ್ಮ ಸಂಸ್ಕೃತಿಯ ಸಾಮಾನ್ಯ ಜನಜೀವನದ ಚಿತ್ರ ಶಿಷ್ಟ ಸಾಹಿತ್ಯಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಹುಡುಕುವ ಪ್ರಯತ್ನ ಮಾಡಿ ಹಲವು ಪ್ರಮುಖ ವಿಚಾರಗಳನ್ನು ವಿವರಿಸಿದ್ದಾರೆ. ಸಮಾಜದ ಹಿತಕ್ಕಾಗಿ ಆತ್ಮತ್ಯಾಗ ಮಾಡುವಲ್ಲಿ ಪೂರ್ವ ನಂಬಿಕೆಗಳು ಮತ್ತು ಆಚರಣೆಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ವಿಮರ್ಶಿಸಿದ್ದಾರೆ.

ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಗಳು ನಂಬಿಕೆಗಳಿಗೆ ಸಿಲುಕಿ ನರಳಿ ಹೊರಬರಲಾಗದೆ ವಿರೋಧಿಸುವ ಧೈರ್ಯವು ಇಲ್ಲದೆ ತನ್ನನ್ನು ತಾನು ಅರ್ಪಿಸಿಕೊಂಡ ಬಗೆಯನ್ನು ತಿಳಿಸಿದ್ದಾರೆ. ಜನಪದರು ಪುರೋಹಿತ ವರ್ಗದ ಸಲಹೆ ಸೂಚನೆಗಳನ್ನು ನಂಬುತ್ತಿದ್ದರು ಎಂಬುದಕ್ಕೆ ಕಥನ ಗೀತೆ ಉತ್ತಮ ಉದಾಹರಣೆಯಾಗಿದೆ. ಹೆಣ್ಣು ತಾನು ಕೆರೆಗೆ ಹಾರವಾಗುತ್ತೇನೆ ಎನ್ನುವ ವಿಷಯ ತಿಳಿದಿದ್ದರೂ, ತಿಳಿಯದವಳಂತೆ ಮನದಲ್ಲಿಯೇ ಸಂಕಟ ನೋವು ಅನುಭವಿಸುತ್ತ ಎಲ್ಲರ ಜೊತೆ ಸಂತೋಷದಿಂದ ನಡೆದುಕೊಳ್ಳುವ ಪರಿ ಚೆನ್ನಾಗಿ ಮೂಡಿಬಂದಿದೆ. ವೈಯಕ್ತಿಕ ನೋವು ಸಮಷ್ಟಿಯಲ್ಲಿ ಅಸಹಾಯಕತೆಯ ರೂಪ ತಾಳುತ್ತದೆ ಎಂಬ ಸತ್ಯವನ್ನು ತಿಳಿಸಿದ್ದಾರೆ. ದಂಡಿನಿಂದ ಬಂದ ಭಾಗೀರಥಿಯ ಗಂಡ ಹೆಂಡತಿ ಕೆರೆಗೆ ಹಾರವಾದ ವಿಷಯ ತಿಳಿದು, ಹೆಂಡತಿಯ ಮೇಲಿದ್ದ ಅಪಾರ ಪ್ರೀತಿಯನ್ನು ತನ್ನ

ಪ್ರಾಣ ಅರ್ಪಿಸಿಕೊಳ್ಳುವುದರ ಮೂಲಕ ವ್ಯಕ್ತಪಡಿಸುತ್ತಾನೆ. ಅವನೂ ಕೂಡ ಮೂಢನಂಬಿಕೆಗಳು, ಸಾಮಾಜಿಕ ಮೌಲ್ಯಗಳ ಮೇಲೆ ನಂಬಿಕೆ ಇಟ್ಟವನಾಗಿದ್ದು, ತನ್ನನ್ನು ತ್ಯಾಗ ಮಾಡಿಕೊಳ್ಳುವ ಮನಸ್ಸು ಮಾಡಿರುವುದು ಅಂದಿನ ಪುರೋಹಿತಶಾಹಿಯ ಹಿಡಿತ ಸಮಾಜದ ಮೇಲೆ ಎಷ್ಟಿತ್ತು ಎಂಬುದನ್ನು ಲೇಖಕರು ವಿವರಿಸಿದ್ದಾರೆ.

'ಜಲಗಾರ ಮತ್ತು ಸಾಮಾಜಿಕ ಪ್ರಜ್ಞೆ' ಲೇಖನವು ಸಾಮಾಜಿಕ ಪ್ರಜ್ಞೆಯನ್ನು ಗರ್ಭೀಕರಿಸಿಕೊಂಡಿರುವ ಜಲಗಾರ ನಾಟಕದ ಒಳಿತು ಕೆಡಕುಗಳನ್ನು ವಿವರಿಸುತ್ತದೆ. ಜೀವನವನ್ನು ಪೂರ್ಣ ದೃಷ್ಟಿಯಲ್ಲಿ ನೋಡಿದಾಗ ಸಾರ್ಥಕ್ಯ ಸಾಧ್ಯ ಎಂಬ ತತ್ವ ಪ್ರತಿಪಾದನೆ ಕಾಣಬಹುದು. ಸಮಾಜದ ವಿವಿಧ ಸ್ಥರಗಳಲ್ಲಿರುವ ಡಾಂಬೀಕತೆಯನ್ನು ವಸ್ತುನಿಷ್ಠವಾಗಿ ವಿವರಿಸಿದ್ದಾರೆ. ಹುಟ್ಟಿನಿಂದ ವ್ಯಕ್ತಿ ಯಾರೆ ಆಗಿದ್ದರೂ ಪೂರ್ಣವಾಗಿ ದಾರ್ಶನಿಕತೆಯನ್ನು ಹೊಂದಿ ದೈವೀಸಾಕ್ಷಾತ್ಕಾರವನ್ನು ತನ್ನ ಕಾಯಕದಿಂದ ಕಂಡುಕೊಳ್ಳಬಲ್ಲ ಎಂಬುದನ್ನು ವಿಮರ್ಶಾತ್ಮಕವಾಗಿ ವಿವರಿಸಿದ್ದಾರೆ. ಜಲಗಾರ ಶೋಷಿತ ವರ್ಗದ ಪ್ರತಿನಿಧಿಯಾಗಿ ನಿಂತು ಸಮಾಜವನ್ನು ಕಬಳಿಸುತ್ತಿರುವ ದುಷ್ಟ ಶಕ್ತಿಗಳ ಬಣ್ಣವನ್ನು ಶಿವನಿಂದಲೇ ಬಯಲು ಮಾಡಿಸಿ ವೈದಿಕರ ಎಲ್ಲಾ ಸವಲತ್ತುಗಳನ್ನು ಪಡೆಯುವ ಪ್ರಾಮಾಣಿಕ ಜಯದ ವಿವರಣೆಯಿದೆ.

'ಜನಪದ ಸಾಹಿತ್ಯದ ಅಧ್ಯಯನ ಕೆಲವು ಅನಿಸಿಕೆಗಳು' ಲೇಖನವು ಜನಪದ ಸಾಹಿತ್ಯವನ್ನು ವಿಮರ್ಶೆ ಮತ್ತು ಹೋಲಿಕೆ ಮಾಡುವಾಗ ಕೆಲವು ಮಾನದಂಡಗಳನ್ನು ತಿಳಿಸುತ್ತದೆ. ಜನಪದ ಸಾಹಿತ್ಯವು ವ್ಯಷ್ಟಿ ರಚನೆಯಾಗಿದ್ದು, ಅದರ ವ್ಯವಸ್ಥೆ ಇರುವವರೆಗೂ ಪುನರ್‌ಸೃಷ್ಟಿಗೊಂಡು ಸಮಷ್ಟಿಗೆ ಹರಿದು ಬಂದರೂ ಸಾಂಸ್ಕೃತಿಕ ಲಕ್ಷಣಗಳು ಬದಲಾಗುವುದಿಲ್ಲ. ಜನಪದ ಸಾಹಿತ್ಯವನ್ನು ಅಧ್ಯಯನ ಮಾಡಿದರೆ ಒಟ್ಟು ವ್ಯವಸ್ಥೆಯನ್ನು ಅಧ್ಯಯನ ಮಾಡಿದಂತಿರಬೇಕು. ಜನಪದದ ಅಧ್ಯಯನ ಸಾಂಸ್ಕೃತಿಕ, ಮಾನವ ಶಾಸ್ತ್ರೀಯ ಅಧ್ಯಯನವಾಗಿದ್ದು, ಶಿಷ್ಟ ವಿಮರ್ಶೆಗಿಂತ ಭಿನ್ನವಾಗಿರುತ್ತದೆ. ಜನಪದ ಸಾಹಿತ್ಯವನ್ನು ವಿಮರ್ಶೆ ಮಾಡುವುದಕ್ಕಿಂತ ಅಧ್ಯಯನ ಮಾಡಿದರೆ ಉತ್ತಮ. ಇದರಿಂದ ನಮ್ಮ ಮನಸ್ಸಿನಲ್ಲಿ ಉಂಟಾಗುವ ಸಾಹಿತ್ಯಿಕ ಅನುಮಾನ ಮತ್ತು ಒರೆ ಕೋರೆಗಳು ಭಿನ್ನ ಅರ್ಥವನ್ನು ಪಡೆದುಕೊಳ್ಳುತ್ತವೆ. ಜನಪದ ಸಾಹಿತ್ಯವನ್ನು ಅಧ್ಯಯನ ಮಾಡುವ ವಿಮರ್ಶಕ ಮನಶಾಸ್ತ್ರಜ್ಞ, ಮಾನವ ಶಾಸ್ತ್ರಜ್ಞನಾಗಿ ವಿಮರ್ಶೆ ಮಾಡಿದಾಗ ಸಮಾಜದ ಸಂಸ್ಕೃತಿಯ ವಿವಿಧ ಮಜಲುಗಳನ್ನು ತಿಳಿದು ಸಾಂಸ್ಕೃತಿಕ ಪುನರ್‌ರಚನೆಯ ಕಾರ್ಯವನ್ನು ಸುಲಭಗೊಳಿಸಿಕೊಳ್ಳಬಹುದು. ಜಾನಪದ ಸಾಹಿತ್ಯವನ್ನು ವೈಜ್ಞಾನಿಕವಾಗಿ ನೋಡಿ ವಿಮರ್ಶೆ ಮಾಡಬೇಕೆಂದು ತಿಳಿಸಿದ್ದಾರೆ.

'ವಿಮರ್ಶೆಯ ಭಾಷೆ' ಲೇಖನವು ಒಂದು ಕೃತಿಯನ್ನು ವಿಮರ್ಶಿಸುವಾಗ ಅಲ್ಲಿನ ಭಾಷೆ ಹೇಗಿರಬೇಕೆಂಬುದನ್ನು ವಿವರಿಸುತ್ತದೆ. ಭಾಷೆ ಕಠಿಣವಾದಾಗ ಅದರಿಂದಾಗುವ ಪರಿಣಾಮಗಳನ್ನು ತಿಳಿಸುತ್ತದೆ. ವಿಮರ್ಶೆಯ ಭಾಷೆ ಸರಳವಾಗಿದ್ದು ಎಲ್ಲರಿಗೂ ಅರ್ಥವಾಗುವಂತೆ ಇರಬೇಕು. ಓದುಗನನ್ನು ಯಾವುದೆ ಗೊಂದಲಕ್ಕೆ ತಳ್ಳದಂತಿರಬೇಕು. ವಿಮರ್ಶೆಯ ಭಾಷೆಯು ಕೃತಿಯಲ್ಲಿನ ಹೊಸ ನಿಲುವುಗಳನ್ನು ಸಹೃದಯನಿಗೆ ತೋರಿಸಿ ಅವನ ಮಾನಸಿಕ ವಿಕಾಸಕ್ಕೆ ಅವಕಾಶ ಮಾಡಿಕೊಡಬೇಕು. ವಿಮರ್ಶಕನಿಗೆ ವಿಮರ್ಶೆಯ ಎಲ್ಲಾ ತತ್ವಗಳ ಅರಿವಿದ್ದು, ಕೃತಿಯನ್ನು ವಿಮರ್ಶಿಸುವಾಗ ನಿರ್ದಿಷ್ಟವಾಗಿ, ಅರ್ಥಪಲ್ಲಟಗೊಳ್ಳದ ಪದ ಮತ್ತು ಪಾರಿಭಾಷಿಕ ಪದಗಳನ್ನು ಬಳಸಬೇಕು. ಕೃತಿ ವಿಮರ್ಶೆ ಮಾಡುವ ಮೊದಲು ಕೃತಿಯ ಬಗ್ಗೆ ಪೂರ್ಣ ಅಧ್ಯಯನ ಮಾಡಿ, ತೌಲನಿಕವಾಗಿ ತೂಗಿ ನೋಡಿ ಒಂದು ತೀರ್ಮಾನಕ್ಕೆ ಬಂದು ಕೃತಿ ವಿಮರ್ಶೆ ಮಾಡಬೇಕು ಎಂದಿದ್ದಾರೆ. ನವೋದಯ ಮತ್ತು ನವ್ಯ ಕಾಲದ ಪ್ರಮುಖ ವಿಮರ್ಶಕರ ಪರಿಚಯವನ್ನು ಈ ಲೇಖನ ಒಳಗೊಂಡಿದೆ.

'ಸಾಹಿತ್ಯ ಮತ್ತು ಸಂವಹನ' ಲೇಖನದಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಸಂವಹನದ ಅಗತ್ಯತೆ ಎಷ್ಟಿದೆ ಎಂಬುದನ್ನು ಅದರಿಂದಾಗುವ ಬದಲಾವಣೆಗಳನ್ನು ತಿಳಿಸುತ್ತದೆ. ನವ್ಯ ಸಾಹಿತಿಗಳ ಸೋಲಿಗೆ ಸಂವಹನದ ಅಭಾವವೇ ಕಾರಣ ಎಂಬುದನ್ನು ವಿವರಿಸಿದ್ದಾರೆ. ಸಂವಹನವು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಿಷಯ ಮುಟ್ಟಿಸುವ ಕ್ರಿಯೆಯಾಗಿದ್ದು, ಸಮಾಜದ ನಡೆ ನುಡಿ, ರೀತಿ ನೀತಿ, ಸಂಪ್ರದಾಯ – ಪ್ರಗತಿಯನ್ನು ಕೃತಿಯ ಮೂಲಕ ಸಹೃದಯನಿಗೆ ತಲುಪಿಸುವ ಕಾರ್ಯನಿರ್ವಹಿಸುತ್ತದೆ. ಒಂದು ಕೃತಿಯ ಮೌಲ್ಯ ನಿರ್ಣಯವಾಗಲು ಅದು ಸಮಾಜದ ತಕ್ಕಡಿಯಲ್ಲಿ ತೂಗಿ, ಎಲ್ಲಾ ಪರೀಕ್ಷೆಗೆ ಒಳಗಾಗಿ ಸಂವಹನಗೊಂಡಾಗ ಮಾತ್ರ ಒಂದು ಕೃತಿ ಶ್ರೇಷ್ಠತೆಯನ್ನು ಕಾಪಾಡಿಕೊಂಡು ಬರುವುದು, ಅದು ಅಭಿವ್ಯಕ್ತಿಗೊಳಿಸುವುದು ಸಾರ್ವತ್ರಿಕ ಸತ್ಯದಲ್ಲಿ ಹಾಗೂ ಬದುಕಿನತ್ತ ಎಲ್ಲರನ್ನು ತಿರುಗಿಸುವ ಶಕ್ತಿಯುಳ್ಳ ಸಂವಹನದಿಂದ ಎಂಬುದನ್ನು ವಿವರಿಸಿದ್ದಾರೆ.

ನವ್ಯ ಸಾಹಿತ್ಯದ ಅಧ್ಯಯನ ಕುಂಠಿತಗೊಳ್ಳಲು ಅದರಲ್ಲಿನ ಅಭಿವ್ಯಕ್ತಿಯ ಜಟಿಲತೆಯೇ ಕಾರಣ. ಸಾಹಿತಿಯು ಸಾಮಾಜಿಕ ಕಳಕಳಿಯನ್ನು ಹೊಂದಿದವನಾಗಿದ್ದು, ಸಮಾಜವನ್ನು ಕಟ್ಟುವ, ಬೆಳೆಸುವ ನಿಟ್ಟಿನಲ್ಲಿ ಅವನು ಹೇಳುವ ಪ್ರತಿಯೊಂದು ಮಾತನ್ನು ಸಮಾಜ ಸೂಕ್ಷ್ಮವಾಗಿ ಗಮನಿಸುತ್ತದೆ. ಈ ಕೊರತೆಯನ್ನು ನವ್ಯ ಸಾಹಿತ್ಯದಲ್ಲಿ ಕಾಣಬಹುದೆಂದು ತಿಳಿಸಿದ್ದಾರೆ.

ಒಟ್ಟಾರೆ ಒಂದು ಸಾಹಿತ್ಯ ಕೃತಿಯನ್ನು ರಚಿಸುವಲ್ಲಿ ಲೇಖಕನ ಜವಾಬ್ದಾರಿ ಮುಖ್ಯವಾದುದಾಗಿದೆ. ಅವನು ತನ್ನ ಬರಹದಲ್ಲಿ ಸಮಾಜದ ಬದುಕು, ಸಾಮಾಜಿಕ, ಧಾರ್ಮಿಕ,

ರಾಜಕೀಯ ಆಂದೋಲನಗಳ ಕಡೆಗೆ ಗಮನಹರಿಸಬೇಕು. ಸಮಕಾಲೀನ ಪ್ರಜ್ಞೆಯಿಂದ ಸಾಹಿತ್ಯ ರಚನೆ ಮಾಡಿದರೆ ಅದು ಜನತೆಯ ಮೇಲೆ ಪ್ರಭಾವ ಬೀರಿ ಓದುವ ಆಸಕ್ತಿಯನ್ನು ಹೆಚ್ಚಿಸುತ್ತದೆ ಎಂಬುದನ್ನು ವಿವರಿಸಿದ್ದಾರೆ.

'ಮೂರು ಟಿಪ್ಪಣಿಗಳು' ಲೇಖನವು ಗಜಮೋಹಿನಿ, ಕಪ್ಪು ಜನರ ಕೆಂಪು ಕಾವ್ಯ, ಜಾನಪದ ಸಂಕೀರ್ಣ ಎಂಬ ಮೂರು ವಿಚಾರಧಾರೆಗಳನ್ನು ಹೊಂದಿದೆ.

'ಗಜಮೋಹಿನಿ' ಲೇಖನದಲ್ಲಿ ಮೊಟ್ಟಮೊದಲ ಜನಪದ ಕಾವ್ಯವಾದ ಗಜಮೋಹಿನಿ ಕಾವ್ಯವು ಅಭಿವ್ಯಕ್ತಿಸುವ ಸೌಂದರ್ಯ ಪ್ರಜ್ಞೆ ಹಾಗೂ ಸಾಂಸ್ಕೃತಿಕ ಲಕ್ಷಣಗಳಿಂದ ಗುರುತಿಸಿಕೊಂಡಿರುವ ಬಗೆಯನ್ನು ವಿವರಿಸಿದ್ದಾರೆ. ಕಾವ್ಯದಲ್ಲಿನ ಕಥೆಯನ್ನು ವಿಭಿನ್ನ ಮಾನದಂಡಗಳಿಂದ ವಿಮರ್ಶಿಸಿದ್ದಾರೆ.

'ಕಪ್ಪು ಜನರ ಕೆಂಪು ಕಾವ್ಯ' ಲೇಖನದಲ್ಲಿ ಹೊಸ ತಲೆಮಾರಿನ ಕವಿಗಳು ಬರೆದಿರುವ ಕವನಗಳಲ್ಲಿನ ಕೆಚ್ಚನ್ನು ವಿಶ್ಲೇಷಿಸಿದ್ದಾರೆ. ಹೆಸರೇ ಸೂಚಿಸುವಂತೆ ಶೋಷಿತ ಜನರ ತಾಳ್ಮೆಯು ಗುಂಡಿನಂತೆ ಸಿಡಿದು ಕ್ರಾಂತಿಯ ಸೂಚಕವಾಗಿದೆ. ಕವನಗಳು ಓದುಗನನ್ನು ಆತ್ಮಶೋಧನೆ ಮಾಡಿಕೊಳ್ಳುವಲ್ಲಿ ಸಹಕಾರಿಯಾಗಿವೆ ಎಂದಿದ್ದಾರೆ.

'ಜಾನಪದ ಸಂಕೀರ್ಣ' ಲೇಖನವು ರಾಗೌ ಅವರು ಬರೆದಿರುವ ವಿವಿಧ ಲೇಖನಗಳ ಸಾರವನ್ನು ಒಳಗೊಂಡಿದೆ. ಜಾನಪದ ಸಾಂಸ್ಕೃತಿಕವಾಗಿ ಮಹತ್ವವನ್ನು ಹೊಂದುವಲ್ಲಿ ಯಾವ ಅಂಶಗಳು ಸಹಕಾರಿಯಾಗಿವೆ ಎಂಬುದನ್ನು ತಿಳಿಸಿದ್ದಾರೆ. ಜನಪದ ರಾಮಾಯಣ ಮತ್ತು ವಾಲ್ಮೀಕಿ ರಾಮಾಯಣವನ್ನು ಹೋಲಿಕೆ ಮಾಡಿ ಹೊಸ ವಿಷಯಗಳನ್ನು ತೋರಿಸುವ ಪ್ರಯತ್ನ ಮಾಡಿದೆ.

'ಶಿಶುಪ್ರಾಸ' ಲೇಖನದಲ್ಲಿ ಶಿಶುಪ್ರಾಸದ ಹುಟ್ಟು, ಬೆಳವಣಿಗೆ, ವೈಚಿತ್ರ್ಯ, ಸಾಹಿತ್ಯ ಚರ್ಚೆಯನ್ನು ವಿಸ್ತಾರವಾಗಿ ಮಾಡಿದ್ದಾರೆ. 'ಕಿಟಲ್ ನಿಘಂಟುವಿನ ಗಾದೆಗಳು ಮತ್ತು ಗಾದೆಗಳು' ಲೇಖನಗಳು ಕಿಟಲ್ ಅವರ ಜಾನಪದೀಯ ಸಾಧನೆಗಳು, ಗಾದೆಗಳ ಬಳಕೆಯನ್ನು ಆಧಾರ ಸಹಿತ ವಿವರಿಸಲಾಗಿದೆ.

'ಎರಡು ಜಾನಪದ ಕಾವ್ಯಗಳು' ಲೇಖನದಲ್ಲಿ ಜಾನಪದ ವಸ್ತು, ವಿಸ್ತಾರ, ಮಾನವೀಯ ಮನೋಭಾವನೆಗಳನ್ನು ಕುರಿತ ಚರ್ಚೆಯಿದೆ. 'ವೀರಮುದ್ದಣ್ಣ' ಮತ್ತು 'ಮಾದೇಶ್ವರ' ಕಾವ್ಯಗಳ ವಿಮರ್ಶೆಯಿದೆ. 'ಜನಪದ ನಂಬಿಕೆಗಳು' ಲೇಖನದಲ್ಲಿ ನಂಬಿಕೆಗಳ ಹುಟ್ಟು, ಬೆಳವಣಿಗೆ,

ಸ್ವರೂಪವನ್ನು ವಿಶ್ಲೇಷಿಸಿದ್ದಾರೆ. 'ಬೆಟ್ಟದ ಚಾಮುಂಡಿ' ಲೇಖನದಲ್ಲಿ ಜನಪದ ಗೀತ ಸಾಹಿತ್ಯದಲ್ಲಿ ಲಾವಣಿಯ ಸ್ಥಾನದ ಬಗ್ಗೆ ಚರ್ಚೆಯಿದೆ. 'ಜನಪದ ಒಗಟು' ಲೇಖನವು ಒಗಟುಗಳ ಸಾಂಸ್ಕೃತಿಕ ವಿವೇಚನೆಯನ್ನು ಮಾಡಿದೆ. 'ಎರಡು ಜನಪದ ತ್ರಿಪದಿಗಳು' ಲೇಖನವು ತ್ರಿಪದಿಗಳನ್ನು ವಿಮರ್ಶೆಗೆ ಒಳಪಡಿಸಿದೆ.

'ಭೈರಪ್ಪನವರ ಅನ್ವೇಷಣ' ಲೇಖನದಲ್ಲಿ ಶಿವರಾಮು ಕಾಡನಕುಪ್ಪೆ ಅವರು ಕಾದಂಬರಿಯ ವಿವಿಧ ಪಾತ್ರಗಳ ಮತ್ತು ಪಾತ್ರಗಳು ಕಂಡುಕೊಳ್ಳಲು ಯತ್ನಿಸುವ ಮೌಲ್ಯಗಳ ಹುಡುಕಾಟ ಮಾಡಿದ್ದಾರೆ.

ಈ ಅಧ್ಯಾಯವು ಶಿವರಾಮು ಕಾಡನಕುಪ್ಪೆ ಅವರು ರಚಿಸಿರುವ ವಿಮಾರ್ಶಾ ಲೇಖನಗಳಲ್ಲಿನ ಪ್ರಮುಖ ಅಂಶಗಳನ್ನು ತಿಳಿಸುವ ಪ್ರಯತ್ನ ಮಾಡಿದೆ. 'ಸಮನ್ವಯ' ಅವರ ಮೊದಲ ವಿಮರ್ಶಾ ಕೃತಿಯಾಗಿದೆ. ಇಲ್ಲಿ ಶಿಷ್ಟ ಸಾಹಿತ್ಯದ ಕೆಲವು ಕೃತಿಗಳನ್ನು ಮತ್ತು ಜನಪದ ಸಾಹಿತ್ಯದ ಕೆಲವು ರಚನೆಗಳನ್ನು ವಿಮರ್ಶೆಗೆ ಒಳಪಡಿಸಿದ್ದಾರೆ. ಶಿವರಾಮು ಕಾಡನಕುಪ್ಪೆ ಅವರ ಮೇಲೆ ಪಂಪನಿಂದ ಕುವೆಂಪು ವರೆಗಿನ ಆಧುನಿಕ ಕವಿಗಳ ಸಾಕಷ್ಟು ಪ್ರಭಾವವಿದ್ದು, ಆಧುನಿಕ ಕೃತಿಗಳನ್ನು ಹೆಚ್ಚಾಗಿ ವಿಮರ್ಶೆಗೆ ಒಳಪಡಿಸಿದ್ದಾರೆ.

'ಸಂವಹನ' ಶಿವರಾಮು ಕಾಡನಕುಪ್ಪೆ ಅವರ ಎರಡನೇ ವಿಮರ್ಶಾ ಕೃತಿಯಾಗಿದೆ. ಕೃತಿಯಲ್ಲಿ ವಿಮರ್ಶಕನ ಭಾಷೆ ಹೇಗಿರಬೇಕು ಎಂಬುದರಿಂದ ಹಿಡಿದು ವಿವಿಧ ಜಾನಪದ ಪ್ರಕಾರಗಳ ವಿಮರ್ಶೆಯನ್ನು ಮಾಡಿದ್ದಾರೆ.

'ಕುವೆಂಪು ಸಾಹಿತ್ಯ ಮತ್ತು ವಿಚಾರ' ವಿಮರ್ಶಾ ಕೃತಿಯಲ್ಲಿ ಕುವೆಂಪು ಅವರ ಕಾವ್ಯ, ಕಾದಂಬರಿ, ನಾಟಕಗಳನ್ನು ವಿಮರ್ಶೆಗೆ ಒಳಪಡಿಸಿ ಕೃತಿಯಲ್ಲಿನ ಮೌಲಿಕ ಅಂಶಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

'ಸಾಮಾಜಿ ನೆಲೆ' ಕೃತಿಯಲ್ಲಿ ಆಧುನಿಕ ಕವಿಗಳ ವಿವಿಧ ಕೃತಿಗಳಲ್ಲಿನ ಪ್ರಮುಖ ಅಂಶಗಳನ್ನು ವಿಮರ್ಶೆಗೆ ಒಳಪಡಿಸಿದ್ದಾರೆ.

ಒಟ್ಟಾರೆ ಶಿವರಾಮು ಕಾಡನಕುಪ್ಪೆ ಅವರು ಬರೆದಿರುವ ವಿಮರ್ಶಾ ಲೇಖನಗಳು ಸಾಕಷ್ಟು ವಿಚಾರಗಳನ್ನು ತಿಳಿಸಿಕೊಡುತ್ತವೆಯಾದ್ದರಿಂದಾಗಿ ಓದುಗರಿಗೆ ಹೆಚ್ಚಿನ ಅಂಶಗಳು ತಿಳಿದುಕೊಳ್ಳಲು ಸಹಕಾರಿಯಾಗಿವೆ.

೪. ಚಿಂತನ ಬರಹಗಳು

ಬಯಲ ಬೆಳೆ :

ಶಿವರಾಮು ಕಾಡನಕುಪ್ಪೆ ಅವರು ಕವಿಯಾಗಿ, ಕಾದಂಬರಿಕಾರರಾಗಿ, ವಿಮರ್ಶಕರಾಗಿ ಸಾಹಿತ್ಯ ಲೋಕದಲ್ಲಿ ತಮ್ಮ ಇರುವಿಕೆಯನ್ನು ಗಟ್ಟಿಗೊಳಿಸಿಕೊಳ್ಳುತ್ತಾ, ವೈಚಾರಿಕ ನೆಲೆಯಲ್ಲೂ ಕೂಡ ಹಲವು ಚಿಂತನ ಬರಹಗಳನ್ನು ಬರೆಯುವುದರ ಮೂಲಕ ಸಾಹಿತ್ಯ ಪ್ರೇಮಿಗಳಿಗೆ ಕೊಡುಗೆಯನ್ನು ನೀಡಿದ್ದಾರೆ. ಇವರ 'ಬಯಲ ಬೆಳೆ' ಒಂದು ವೈಚಾರಿಕ ಕೃತಿಯಾಗಿದೆ. ಕೃತಿಯಲ್ಲಿನ ಲೇಖನಗಳು 'ಸುಧಾ' ವಾರಪತ್ರಿಕೆಯ 'ವಿಚಾರ ಲಹರಿ' ಅಂಕಣಗಳಲ್ಲಿ ಮೂಡಿ ಬಂದಿರುವ ವಿಚಾರಧಾರೆಗಳಾಗಿವೆ. ಕೃತಿಯಲ್ಲಿ ಶಿವರಾಮು ಕಾಡನಕುಪ್ಪೆ ಅವರು ತಮ್ಮ ಆಲೋಚನೆ ಮತ್ತು ನಿಲುವುಗಳನ್ನು ಓದುಗರೊಡನೆ ಹಂಚಿಕೊಂಡಿದ್ದಾರೆ. ಲೇಖನಗಳಲ್ಲಿ ಜೀವನದ ರಹಸ್ಯಗಳನ್ನು, ಸತ್ಯಗಳನ್ನು, ಶೋಧನೆ ಮಾಡಿ ಸಂಗ್ರಹಿಸುವ ಕೆಲಸವನ್ನು ಮಾಡಿದ್ದಾರೆ.

ಅಜ್ಞಾನದ ಅಂಧ ಕೂಪದಲ್ಲಿ ನರಳುತ್ತಿರುವವರಿಗೆ ದಾರಿದೀಪ ತೋರಿಸಿ ಸರಿಯಾದ ಜ್ಞಾನದ ಮಾರ್ಗದಲ್ಲಿ ನಡೆಯುವಂತೆ ಮಾಡುವಲ್ಲಿ ಕೃತಿಯು ಸಹಕಾರಿಯಾಗಿದೆ. ಪ್ರತಿಯೊಬ್ಬರು ಅರ್ಥಪೂರ್ಣ ಬದುಕಿನೆಡೆಗೆ ತೊಡಗಿಸಿಕೊಂಡು ಉತ್ತಮ ಜೀವನ ಸಾಗಿಸಲು ಲೇಖನಗಳು ಪ್ರೇರಕ ಶಕ್ತಿಗಳಾಗಿವೆ. ಈ ಅಧ್ಯಾಯದಲ್ಲಿ ಕೆಲವು ವೈಚಾರಿಕ ನಿಲುವುಗಳ ಬಗ್ಗೆ ತಿಳಿಸುವ ಪ್ರಯತ್ನ ನಡೆದಿದೆ.

'ನಿಸರ್ಗ ಪೂಜೆ' ಲೇಖನದಲ್ಲಿ ಮಾನವ ಹಿಂದಿನಿಂದಲೂ ಪ್ರಕೃತಿಯಲ್ಲಿನ ಗಿಡ ಮರಗಳನ್ನು ಆರಾಧನೆ ಮಾಡುವುದರ ಮೂಲಕ ಅವುಗಳ ಉಳಿವಿಗಾಗಿ ಶ್ರಮಿಸುತ್ತಾ ಬಂದಿದ್ದಾನೆ. ಆದರೆ ಇಂದು ಪ್ರಕೃತಿ ಪೂಜೆ ಅನಿವಾರ್ಯತೆಯನ್ನು ಪಡೆದುಕೊಂಡಿದೆ. ದೇವರಿಗೆ ಪ್ರತಿ ಶಕ್ತಿಯಾಗಿ ಪರಿಸರವನ್ನು ಕಾಪಾಡಬೇಕಾದುದು ಮಾನವನ ಕರ್ತವ್ಯವಾಗಿದೆ. ಅವನ ಅಳಿವು, ಉಳಿವು ನಿಸರ್ಗದ ರಕ್ಷಣೆಯ ಮೇಲೆ ನಿಂತಿದೆ. ಇಂದು ನಿಸರ್ಗ ಪೂಜೆ ಅನಿವಾರ್ಯ ಮತ್ತು ಅವಶ್ಯಕವಾದುದೆಂದು ತಿಳಿಸಿದ್ದಾರೆ.

'ಗರಿಕೆಯ ನಿಲುವು' ಲೇಖನದಲ್ಲಿ ಗರಿಕೆಯ ಬೇರು ಧೈರ್ಯಕ್ಕೆ, ಎದೆಗಾರಿಕೆಗೆ, ಸ್ಥಿರತೆಗೆ ಉದಾಹರಣೆಯಾಗಿ ನಿಂತಿದೆ. ಇದು ಜೀವರಕ್ಷಕ ಔಷಧಿಯಾಗಿಯೂ ಕೂಡ ಕೆಲಸ ನಿರ್ವಹಿಸುವುದರಿಂದ ಪ್ರಕೃತಿಯ ಶಕ್ತಿಯಾಗಿ ಪೂಜಿಸಲ್ಪಡುತ್ತಿದೆ. ಇದರಲ್ಲಿ ಒಳ್ಳೆಯ ಗುಣಗಳು ಇರುವುದರ ಜೊತೆಗೆ ಸ್ವಾಭಿಮಾನವಿಲ್ಲದ ಗುಣಗಳನ್ನು ಕಾಣಬಹುದು. ಉದಾಹರಣೆಗೆ ಶತೃಗಳಿಗೆ ತಲೆ ತಗ್ಗಿಸಿ, ನೀರು ಬಂದಾಗ ಶರೀರವನ್ನು ಬಗ್ಗಿಸಿ ಶತೃಗಳು ತುಳಿದು ಹೋಗಲು ದಾರಿ

ಮಾಡಿಕೊಟ್ಟು ದಾಳಿಗೆ ಎದೆಯೊಡ್ಡಿ ಹೋರಾಟ ಮಾಡುವುದಿಲ್ಲ. ಈ ಗುಣಗಳನ್ನು ಪ್ರತಿಯೊಬ್ಬರು ತ್ಯಜಿಸಿ ಧೈರ್ಯದಿಂದ ಮುನ್ನುಗ್ಗುವ ಎದೆಗಾರಿಕೆ ಬೆಳೆಸಿಕೊಳ್ಳಬೇಕೆಂಬ ಸಂದೇಶ ನೀಡಿದ್ದಾರೆ.

'ನಮ್ಮ ದೇವರು ನಮ್ಮ ಹಾಗೆಯೇ' ಲೇಖನವು ವೈಜ್ಞಾನಿಕ ಸಮಾಜ ನಿರ್ಮಾಣದ ಚಿಂತನೆಯನ್ನು ಮೂಡಿಸುತ್ತದೆ. ಇಲ್ಲಿ ಪ್ರತಿಯೊಬ್ಬರಲ್ಲಿಯೂ ಇರುವ ಮೌಢ್ಯ, ಮತ ನಿರಾಕರಿಸಿ ವೈಜ್ಞಾನಿಕ ಮನೋಭಾವ ಬೆಳೆಸಿಕೊಂಡು ಸತ್ಯ ಶೋಧನೆಯ ಕಡೆಗೆ ಸಾಗಿ ಸತ್ಯವನ್ನು ಬೆಳಕಿಗೆ ತರುವುದು ಎಲ್ಲರ ಕರ್ತವ್ಯವಾಗಿದೆ. ವೈಚಾರಿಕ ನೆಲೆಯಲ್ಲಿ ಪ್ರತಿಯೊಂದನ್ನು ನೋಡಿದಾಗ ಅಲ್ಲಿ ಕುರುಡು ನಂಬಿಕೆ ಇರುವುದಿಲ್ಲ, ವರ್ಣ ಬೇಧ, ದೇವರ ಮೇಲಿನ ನಂಬಿಕೆಗಳಾಗಲಿ ಇರದೆ ಮಾನವೀಯ ನೆಲೆಯಲ್ಲಿ ಚಿಂತಿಸುವ ಮನೋಭಾವ ಹುಟ್ಟಿಕೊಳ್ಳುವುದು ಸತ್ಯ ಎಂದಿದ್ದಾರೆ.

'ನಿಂತ ನೆಲ ತಿನ್ನುವ ಅನ್ನ' ಲೇಖನದಲ್ಲಿ ಮನುಷ್ಯ ವಾಸ ಮಾಡುವ ಪರಿಸರಕ್ಕೂ ಮತ್ತು ಅವನ ಆಹಾರ ಪದ್ದತಿಗೂ ನಿಕಟವಾದ ಸಂಬಂಧವನ್ನು ಕಾಣಬಹುದು. ಭಿನ್ನ ಸಾಮಾಜಿಕ ನೆಲೆಗಳೊಂದಿಗೆ ಆಹಾರ ಪದ್ದತಿಗಳು ಸಾಂಸ್ಕೃತಿಕ ಅಂಶಗಳಾಗಿ ಬಂದಿವೆ. ಆಹಾರವೂ ಮಾನವನ ಹಸಿವನ್ನು ನೀಗಿಸುವುದರ ಜೊತೆಗೆ ಮಾನಸಿಕ ತೃಪ್ತಿಯನ್ನು ತಂದುಕೊಡುವ ನಿಟ್ಟಿನಲ್ಲಿ ದೇಶೀಯ ಆಹಾರಗಳು ತಾಯಿ ಇದ್ದ ಹಾಗೆ ಎಂದು ತಿಳಿಸಿದ್ದಾರೆ.

'ಕತ್ತಲು ಭಯಬೇಡ' ಲೇಖನದಲ್ಲಿ ಕತ್ತಲು ಮಾನವನನ್ನು ಕಾಡುತ್ತಾ ಬಂದಿರುವ ಭಯದ ಪ್ರತಿರೂಪದಂತಿದೆ. ಇದು ಅನಿಷ್ಟಗಳ ಸಂಕೇತವಾಗಿ ಉಳಿದುಕೊಂಡಿದೆ. ಇಂತಹ ಕತ್ತಲೆ ಎಂಬ ಭಯವನ್ನು ಕಿತ್ತೊಗೆದಾಗ ಸೃಷ್ಟಿಯ ವೈವಿಧ್ಯತೆಯನ್ನು ತಿಳಿಯುವ ಅರಿವು ವಿಸ್ತಾರಗೊಳ್ಳುತ್ತದೆ. ಕತ್ತಲೆಗೆ ಬೆಳಕಿನ ಕುತೂಹಲವಿರುತ್ತದೆ. ಪ್ರಗತಿ ಸಾಧಿಸುವ ಬಯಕೆಯಿರುತ್ತದೆ. ಆದ್ದರಿಂದ ಕತ್ತಲನ್ನು ದ್ವೇಷಿಸುವ ಬದಲು ಪ್ರೀತಿಯಿಂದ ಕಾಣುವ ಸಂದರ್ಭಗಳನ್ನು ಹುಡುಕಬೇಕಾಗಿದೆ. ಕತ್ತಲೆಯ ನಂತರ ಬೆಳಕು ಬರುತ್ತದೆ ಎಂಬ ಅರಿವು ನಮಗೆಲ್ಲರಿಗೂ ಇರಬೇಕು ಎಂದಿದ್ದಾರೆ.

'ಶ್ರಮ ಸಂಸ್ಕೃತಿ' ಲೇಖನವು ಶ್ರಮದ ಪ್ರಾಮುಖ್ಯತೆಯನ್ನು ಅದರಿಂದ ಉಂಟಾಗುವ ಲಾಭವನ್ನು ತಿಳಿಸುತ್ತದೆ. ಹಿಂದೆ ಶ್ರಮ ಸಂಸ್ಕೃತಿ ಈ ಕೆಳಕಂಡಂತಿತ್ತು.

'ನಾಡಿನ ಹಿತದಲ್ಲಿ ಊರಿನ ಹಿತವಿತ್ತು ; ಊರಿನ ಹಿತದಲ್ಲಿ ಮನೆಯ
ಹಿತ ಅಡಗಿತ್ತು ; ಮನೆಯ ಹಿತದಲ್ಲಿ ವ್ಯಕ್ತಿಯ ಹಿತ ನೆಲೆಸಿತ್ತು.' (ಪುಟ – ೧೩)

ಹಳ್ಳಿ ಸಂಸ್ಕೃತಿಯಲ್ಲಿ ಇಂತಹ ಆದರ್ಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಊರೊಟ್ಟಿನ

ಕೆಲಸಗಳು ನಡೆಯುತ್ತಿದ್ದವು. ಇಂದಿನ ಜಗತ್ತು ಸಂಕುಚಿತ ಮನೋಭಾವನೆ ಬೆಳೆಸಿಕೊಂಡು ಸ್ವಾರ್ಥಪರತೆಯನ್ನು ಹೆಚ್ಚಿಸಿಕೊಂಡಿದ್ದರಿಂದ ಮಾನವೀಯ ಮೌಲ್ಯಗಳು ಕಡಿಮೆಯಾಗುತ್ತಾ ಬಂದಿರುವುದನ್ನು ಗಮನಿಸಬಹುದಾಗಿದೆ. ನಾವೆಲ್ಲರೂ ಸ್ವಾರ್ಥ ತೊರೆದು ಸಮಾಜದ ಉದ್ಧಾರಕ್ಕಾಗಿ ದುಡಿದು, ಶ್ರಮ ಸಂಸ್ಕೃತಿಯ ಬೆಲೆಯನ್ನು ಅರಿತು ನಡೆಯಬೇಕಾಗಿದೆ ಎಂದಿದ್ದಾರೆ.

'ಮದುವೆಗಳು' ಲೇಖನವು ಇಂದು ಮದುವೆಗಳು ಮಾರಾಟದ ಸಂತೆಗಳಾಗಿವೆ ಎಂಬುದನ್ನು ತಿಳಿಸುತ್ತದೆ. ಹೆಣ್ಣು ಮಕ್ಕಳಿರುವ ತಂದೆ ತಾಯಿಗಳು ನರಕ ಯಾತನೆಯನ್ನು ಅನುಭವಿಸುತ್ತಿದ್ದಾರೆ. ವರದಕ್ಷಿಣೆ ವರೋಪಚಾರ ಎಂಬ ಭೂತದಿಂದ ನಲುಗುತ್ತಿದ್ದಾರೆ. ಇಂತಹ ಪಿಡುಗುಗಳು ತೊಲಗಿ ಎರಡು ಮನಗಳ ಒಪ್ಪಿಗೆಯಿಂದ ಮದುವೆಗಳಾದರೆ ಉತ್ತಮ. ಇಂದಿನ ಹೊಸ ಪೀಳಿಗೆಗೆ ಅವರ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿ, ಅವರು ಸಾಮಾಜಿಕ ನೈತಿಕ ಬಂಧನಕ್ಕೆ ಒಳಗಾಗಲು ಬಿಡಬೇಕು. ಇದರಿಂದ ಮಾನವತೆಯ ನೆಲೆಯಲ್ಲಿ ಸಾಮಾಜಿಕತೆ ರೂಪುಗೊಳ್ಳಲು ಸಹಕಾರಿಯಾಗುತ್ತದೆ. ಗಂಡು, ಹೆಣ್ಣಿಗೆ ಸ್ವಾತಂತ್ರ್ಯ ನೀಡಿದರೆ ಮದುವೆಗೆ ಉತ್ತಮ ಅರ್ಥ ಬರುತ್ತದೆ ಎಂದು ತಿಳಿಸಿದ್ದಾರೆ.

'ಕನ್ನಡಿ' ಲೇಖನವು ಬದುಕಿನಲ್ಲಿ ಅಡಗಿರುವ ಸೊಗಸುಗಾರಿಕೆಯನ್ನು ತಿಳಿಯಲು ಸಹಕಾರಿಯಾಗಿದೆ. ಇದು ಇರುವ ಸತ್ಯವನ್ನು ನಿಷ್ಠೂರವಿಲ್ಲದೆ ಹೇಳುತ್ತದೆ. ಅಂತರಂಗ ಮತ್ತು ಬಹಿರಂಗಗಳ ಸತ್ಯದ ಅರಿವು ಉಂಟುಮಾಡುತ್ತದೆ. ನಮ್ಮಲ್ಲಿನ ರಾಗ-ದ್ವೇಷಗಳ ಪ್ರತಿಬಿಂಬ ಕನ್ನಡಿಯಲ್ಲಿ ಮೂಡುತ್ತದೆ. ಅದನ್ನು ಪರೀಕ್ಷಿಸಿಕೊಂಡು ಬದಲಾಯಿಸಿಕೊಳ್ಳುವುದರ ಜೊತೆಗೆ ನಮ್ಮ ಆತ್ಮದಲ್ಲಿ ಸಾತ್ವಿಕತೆ ಬೆಳೆಯುವಂತೆ ಮಾಡಬೇಕು.

'ಮತವೆಂಬ ಅಫೀಮು' ಲೇಖನವು ಮತವೆಂಬ ಮೋಹ ಜಾಲಕ್ಕೆ ಸಿಲುಕದಿರಲು ತಿಳಿಸುತ್ತದೆ. 'ಮತ' ವ್ಯಕ್ತಿಯ ಚಿಂತನೆಯನ್ನು, ಕಲ್ಪನಾಶೀಲತೆಯನ್ನು, ವೈಜ್ಞಾನಿಕ ನೋಟಗಳನ್ನು ಸಮಾಜ ವಿಮುಖ ಕೆಲಸಗಳೆಂದು ಕರೆದು ತನ್ನ ಪ್ರಾಬಲ್ಯವನ್ನು ಮೆರೆಯುತ್ತಲೇ ಬಂದಿದೆ. ವಿಜ್ಞಾನದ ಅರಿವು ಜನರಲ್ಲಿ ಬಂದಿದ್ದರೂ ಕೂಡ ದೇವಸ್ಥಾನ, ಮಸೀದಿ, ಚರ್ಚುಗಳ ಆರ್ಭಟ ಕಡಿಮೆಯಾಗಿಲ್ಲ. ನಾವೆಲ್ಲರೂ ಕುವೆಂಪು ಅವರ 'ಮನುಜಮತ ವಿಶ್ವಪಥ' ಸಂದೇಶವನ್ನು ಪಾಲಿಸಿದರೆ ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಇದರಿಂದ ನಮ್ಮ ಮುಂದಿನ ಪೀಳಿಗೆಯನ್ನು 'ಮತ' ರಹಿತ ಮಾನವತೆಯ ತತ್ವಗಳ ಬೆಳಕಿನಲ್ಲಿ ಬೆಳೆಸಲು ಸಹಕಾರಿಯಾಗುತ್ತದೆ.

'ತಾಯಿ ವಸುಂಧರೆ' ಲೇಖನದಲ್ಲಿ ವಸುಂಧರೆಯ ಮಡಿಲಲ್ಲಿ ಬೆಳೆದು ದೊಡ್ಡವನಾದ

ಮಾನವ ಅವಳ(ಪ್ರಕೃತಿ) ಮೇಲೆ ಅತ್ಯಾಚಾರ ಮಾಡಿ ಶೋಷಣೆಯ ಹಾದಿಯನ್ನು ತುಳಿದಿರುವ ಚಿತ್ರಣವನ್ನು ಒಳಗೊಂಡಿದೆ. ವಸುಂಧರೆ ಸತ್ತು ನಾರುತ್ತಿರುವ ಜೀವ ಜಂತುಗಳನ್ನು ತನ್ನ ಒಡಲಾಳಕ್ಕೆ ಸೇರಿಸಿಕೊಂಡು ಮುಕ್ತಿಯನ್ನು ನೀಡುತ್ತದೆ. ಇಂತಹ ತಾಯಿಯನ್ನು ಜಡವೆಂದು ಕರೆಯುವುದು ಸರಿಯೇ ? ಅವಳನ್ನು ಸಂರಕ್ಷಿಸಿ ಪೋಷಿಸಿ ಮುಂದಿನ ಜನಾಂಗಕ್ಕೆ ಉತ್ತಮ ಕೊಡುಗೆಯನ್ನು ನೀಡಬೇಕು.

'ಮಜ ಮಾಡು ಸಂಸ್ಕೃತಿ' ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಹೆಚ್ಚಾಗಿ ಕಂಡು ಬರುತ್ತಿದೆ. ಒಂದು ಕಾಲದಲ್ಲಿ ವಿದ್ಯಾವಂತ ಸಮುದಾಯ ವಿದ್ಯೆ ಮತ್ತು ಆಹಾರವನ್ನು ನೀಡಿದ ಸಮಾಜದ ಋಣವನ್ನು ತೀರಿಸುವುದು ತಮ್ಮ ಹೊಣೆಗಾರಿಕೆ ಎಂದು ತಿಳಿದಿದ್ದರು. ಆದರೆ ಇಂದು ಈ ಕೆಟ್ಟ ಸಂಸ್ಕೃತಿಯ ಕಾರಣದಿಂದ ವ್ಯಕ್ತಿಯು ಸ್ವಾರ್ಥಿಯಾಗುತ್ತಿದ್ದಾನೆ. ವಿದ್ಯೆಯನ್ನು ದುರುಪಯೋಗ ಪಡಿಸಿಕೊಂಡು ಭ್ರಮಾತ್ಮಕ ಲೋಕದಲ್ಲಿ ತನ್ನನ್ನು ಸಿಲುಕಿಸಿಕೊಂಡಿದ್ದಾನೆ. ಈ ಭಾವನೆಯನ್ನು ತೊಡೆದು ಹಾಕಿ ಪ್ರತಿಯೊಬ್ಬ ಮನುಷ್ಯನು ಸಮಾಜ ಜೀವಿಯಾಗಿ, ಕುಟುಂಬ ಜೀವಿಯಾಗಿ ಜೀವಿಸಬೇಕು.

'ಪ್ರಶ್ನೆಗಳು ಮತ್ತು ಬರೀ ಪ್ರಶ್ನೆಗಳು' ಲೇಖನದಲ್ಲಿ ಪ್ರಶ್ನೆಗಳು ಮಾನವನನ್ನು ಚಲನಶೀಲರನ್ನಾಗಿಡುತ್ತವೆ. ಯಾವುದೆ ಒತ್ತಡ, ಸವಾಲುಗಳು ಬಂದರೂ ಅವುಗಳನ್ನು ಧೈರ್ಯದಿಂದ ಶೋಧಿಸುತ್ತಾ ಮುನ್ನುಗ್ಗುವ ಛಲ ಬರುತ್ತದೆ. ಕೆಲವು ಪ್ರಶ್ನೆಗಳು ಅಸಂಬದ್ಧವಾಗಿದ್ದು, ಮೌಢ್ಯವನ್ನು ಅಜ್ಞಾನವನ್ನು ಹೆಚ್ಚಿಸುವಂತವುಗಳಾಗಿರುತ್ತವೆ. ಅಂತಹ ಪ್ರಶ್ನೆಗಳನ್ನು ನಿವಾರಿಸಿ ಉತ್ತಮ ಪ್ರಶ್ನೆಗಳನ್ನು ಹಾಕುವುದರ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು.

'ಜಾತಿಯೆಂಬ ಅಹಂಕಾರವು' ನಮ್ಮ ಸಮಾಜದಲ್ಲಿ ಬಹಳ ಹಿಂದೆ ಬೇರುಬಿಟ್ಟು ಸಮಾಜದ ಸುಸ್ಥಿತಿಯನ್ನು ಹದಗೆಡಿಸುತ್ತಾ, ಮನುಷ್ಯರಲ್ಲಿನ ಬಾಂಧವ್ಯವನ್ನು ಕಿತ್ತುಕೊಂಡಿರುವುದು ಕೀಳರಿಮೆಯ ಸಂಕೇತವಾಗಿತ್ತು. ಆದರೆ ಕಾಲ ಬದಲಾದಂತೆ ವರ್ತಮಾನ ಕಾಲದಲ್ಲಿ ಜಾತಿ ಕೇವಲ ಶೋಷಣೆಯ ಸಂಗತಿಯಾಗಿದೆ. ಶಕ್ತಿ ಕೇಂದ್ರವಾಗಿ ರೂಪುಗೊಂಡಿದೆ. ಸ್ವಾತಂತ್ರ್ಯದ ನಂತರ ಸಂವಿಧಾನ ಸಾಮಾಜಿಕ ನಿಯಮಾವಳಿಗಳನ್ನು ರೂಪಿಸಿ ನಿಯಂತ್ರಿಸಿತು. ಉತ್ತಮ ಸಮಾಜದ ನಿರ್ಮಾಣದಲ್ಲಿ ಜಾತಿಯೆಂಬ ಅಹಂಕಾರ ಅಳಿದು ಪ್ರೀತಿ ಮೂಡಬೇಕು. ಮಾನವತೆಯಲ್ಲಿ, ನಂಬಿಕೆಯಲ್ಲಿರುವ ಜಾತಿಯೆಂಬ ಅನಿಷ್ಟವನ್ನು ಪ್ರತಿಯೊಬ್ಬರು ಬೇರು ಸಮೇತ ಕಿತ್ತುಹಾಕಬೇಕು ಎಂದಿದ್ದಾರೆ.

‘ನೀರು ನೀರು ನೀರು’ ಪ್ರತಿಯೊಂದು ಜೀವಿಯ ಜೀವ ದ್ರವ್ಯ ಇದಾಗಿದೆ. ಭೂಮಿಯು ಮುಕ್ಕಾಲುಭಾಗ ನೀರಿನಿಂದ ಆವೃತ್ತವಾಗಿದೆ. ನೀರು ಜೀವ ರಕ್ಷಕ ಹಾಗೂ ಶಕ್ತಿಯ ಮೂಲವಾಗಿದೆ. ಇದರ ಜೊತೆಗೆ ಅದರ ಎದೆಯಲ್ಲಿ ಪ್ರಳಯ ಸೃಷ್ಟಿಸುವ ಬೆಂಕಿಯನ್ನು ಇಟ್ಟುಕೊಂಡಿದೆ. ಬಿರುಗಾಳಿ, ಸುನಾಮಿ, ಚಂಡ ಮಾರುತಗಳ ರೂಪದಲ್ಲಿ ದಾಳಿ ಮಾಡುವ ಪರಾಕ್ರಮ ಹೊಂದಿದೆ. ಇತಿಹಾಸವನ್ನು ಗಮನಿಸಿದಾಗ ನೀರಿಲ್ಲದೆ ಸತ್ತವರ ಕಥೆಗಳನ್ನು ಕಾಣಬಹುದು. ಆದ್ದರಿಂದ ಪವಿತ್ರವಾದ ನೀರನ್ನು ದುರುಪಯೋಗ ಪಡಿಸಿಕೊಳ್ಳದೆ ಮುಂದಿನ ಸಂಕುಲದ ಒಳಿತಿಗಾಗಿ ಸಂರಕ್ಷಿಸಿ ಇಡಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದಿದ್ದಾರೆ.

‘ಕಾಣುವುದಷ್ಟೇ ಸತ್ಯವಲ್ಲ’ ಕಣ್ಣಿನಿಂದ ಕಂಡರೂ ಯೋಚಿಸಿ ಪ್ರಮಾಣಿಸಿ ನೋಡಬೇಕು. ಕಣ್ಣಿಗೆ ಕಾಣುವ ರೂಪವೆಲ್ಲಾ ಸತ್ಯವಲ್ಲ. ನಾವು ಪ್ರತಿಯೊಂದನ್ನು ವಾಸ್ತವಿಕ ನೆಲೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಸತ್ಯವನ್ನು ನೋಡುವಂತಾಗಬೇಕು. ಪರಿಪೂರ್ಣವಾಗಿ ಸತ್ಯದ ಶೋಧದಲ್ಲಿ ನಮ್ಮನ್ನು ತೊಡಗಿಸಿಕೊಂಡಾಗ ಬದುಕಿಗೆ ಒಂದು ಅರ್ಥ ಬರುತ್ತದೆ ಎಂದಿದ್ದಾರೆ.

‘ನೋವು’ ದೈಹಿಕ ಮತ್ತು ಮಾನಸಿಕ ನೋವುಗಳೆಂದು ಎರಡು ರೀತಿಯಲ್ಲಿ ಇರುತ್ತವೆ. ದೈಹಿಕ ನೋವಿಗಿಂತ ಮಾನಸಿಕ ನೋವು ಹೆಚ್ಚು ಅಪಾಯುಕರವಾದುದಾಗಿದೆ. ಪ್ರತಿಯೊಬ್ಬರಲ್ಲಿಯೂ ಒಂದಲ್ಲ ಒಂದು ನೋವು ಇದ್ದೆ ಇರುತ್ತದೆ. ಅದು ಪರಿಸರದಿಂದಾಗಿರಬಹುದು, ಸಂಭವಿಸುವ ಘಟನೆಗಳಿಂದ ಬಂದಂತಹುಗಳಾಗಿರಬಹುದು, ಒತ್ತಡಗಳಿಂದ ಉಂಟಾಗಿರಬಹುದು. ಇಂತಹ ನೋವಿಗೆ ಪ್ರತಿಯಾಗಿ ಮಿಡಿಯುವ, ಸಾಂತ್ವನ ಹೇಳುವ ನಡೆಯನ್ನು ಉದಾತ್ತ, ಮಾನವೀಯ ಮಿಡಿತವೆಂದು ಪರಿಭಾವಿಸುವುದು ಉತ್ತಮ. ಹಿಂದಿನಿಂದಲೂ ಇಂದಿನವರೆಗೂ ನೋವಿಗೆ ಕಾರಣ, ಪರಿಹಾರವನ್ನು ಹುಡುಕುವುದರಲ್ಲಿ ಚರಿತ್ರೆ ನಿಂತಿದೆ ! ಎಂದಿದ್ದಾರೆ.

‘ಬೆಳಗು’ ಮನುಷ್ಯನ ಜೀವನದಲ್ಲಿ ಅಗತ್ಯವಾಗಿ ಬೇಕಾದುದಾಗಿದೆ. ಪ್ರಕೃತಿಯಲ್ಲಿನ ಜೀವ ಜಂತುಗಳು ಬದುಕಿನ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಪ್ರೇರಣೆಯಾಗಿದೆ. ಬೆಳಗು ಪ್ರಕೃತಿಗೆ ವಿವಿಧ ಋತುಗಳಲ್ಲಿ ಚಿತ್ತಾರದಿಂದ ಕಾಣುವಂತಹ ರೂಪವನ್ನು ಕೊಡುವಲ್ಲಿ ಯಶಸ್ವಿಯಾಗಿದೆ. ಅಂತೆಯೇ ಒಂದು ಹೆಣ್ಣು ಮನೆ ಮನಗಳನ್ನು ಬೆಳಗುವ ಸಂಕೇತವಾಗುತ್ತಾಳೆ. ಬುದ್ಧ, ಗಾಂಧಿ, ಅಂಬೇಡ್ಕರ್ ಅವರಂತಹವರು ಜಗತ್ತನ್ನು ಬೆಳಗುವ ಕಾರ್ಯದಲ್ಲಿ ನಿರಂತರ ಹೋರಾಟ ಮಾಡಿ ದಿವ್ಯ ಜ್ಞಾನದಿಂದ ವಿಶ್ವವನ್ನು, ಸಮಾಜವನ್ನು ಬೆಳಗುವಂತಹ ಕಾರ್ಯ ಮಾಡಿದ್ದಾರೆ. ಲೇಖನದ ಮೂಲಕ ಬೆಳಗಿನ ಮಹತ್ವವನ್ನು ತಿಳಿಸಿದ್ದಾರೆ.

'ಅಂಬಲಿ ಪರಮಾನ್ನ' ಮೈ ಮನಸ್ಸುಗಳನ್ನು ಆರೋಗ್ಯದಿಂದ ಕಾಪಾಡುವ ನಿಟ್ಟಿನಲ್ಲಿ ಮುಖ್ಯವಾದುದು. ಇದು ಬಡಜನರ ತುತ್ತಿನ ಚೀಲವಾಗಿದೆ. ಭೋಗದ ವಿಮುಖತೆಯಿಂದ ಸರಳತೆಗೆ ಸಾಗುವ ಸಂಕೇತವಾಗಿದೆ. ಇಂದಿನ ಫಿಜ್ಜಾ, ಬರ್ಗರ್ ಮುಂತಾದ ತಿನಿಸುಗಳು ಅದರಕ್ಕೆ ಸಿಹಿ, ಉದರಕ್ಕೆ ಕಹಿ ಎಂಬಂತಿವೆ. ಸರಳ ಶೈಲಿ ವ್ಯಕ್ತಿಯನ್ನು ಉತ್ತಮ ಹಾದಿಯಲ್ಲಿ ಕರೆದುಕೊಂಡು ಹೋಗುತ್ತವೆ. ಆರೋಗ್ಯವನ್ನು ಸುಸ್ಥಿರವಾಗಿ ಇಡುವಲ್ಲಿ ಯಶಸ್ವಿಯಾಗುತ್ತದೆ ಎಂದಿದ್ದಾರೆ.

'ಬುದ್ದಿ – ಆತ್ಮ – ದೇಹ' ಎಲ್ಲಾ ವ್ಯಕ್ತಿಗಳಲ್ಲಿಯೂ ಇರುವಂತಹವುಗಳಾಗಿವೆ. ಕೇವಲ ಬುದ್ದಿ ದೇಹ ಬಲಗಳಿದ್ದರೆ ಮಾತ್ರ ವ್ಯಕ್ತಿಯು ಉತ್ತಮ ಮಾನವನಾಗಲು ಸಾಧ್ಯವಿಲ್ಲ. ಅವನಲ್ಲಿ ಒಳ್ಳೆಯ ಆತ್ಮ ಇದ್ದಾಗ ಮಾತ್ರ ಜಾತಿ, ಧರ್ಮ, ಜನಾಂಗ, ನಾನು, ನನ್ನದು ಎಂಬ ವ್ಯಾಧಿಗಳಿಂದ ಮುಕ್ತನಾಗಿ ಎತ್ತರದ ಸ್ಥಾನದಲ್ಲಿ ನಿಲ್ಲಲ್ಲು ಸಹಕಾರಿಯಾಗುತ್ತದೆ. ಬುದ್ದಿ ಭಾವಗಳ ಆಲಿಂಗನದಿಂದ ದೇಹಕ್ಕೆ ಕಾಂತಿ ಬಂದು ಆತ್ಮದ ಗೌರವ ಮತ್ತು ಸೌಂದರ್ಯ ಹೆಚ್ಚಾಗಲು ಸಾಧ್ಯವಾಗುತ್ತದೆ ಎಂದಿದ್ದಾರೆ.

'ವೃತ್ತದೊಳಗಿನ ಬದುಕು' ಕೆಲವು ಜನರನ್ನು ಆವರಿಸಿರುವ ಮಾಯೆ. ಇದು ಮನುಷ್ಯನನ್ನು ಸ್ವಾರ್ಥಪರನನ್ನಾಗಿ ಮಾಡಿ ಕೇವಲ ತನ್ನ ಕುಟುಂಬ ವರ್ಗದವರ ಬಗೆಗಿನ ಚಿಂತನೆಗೆ ಮೀಸಲಾಗಿದ್ದು, ಸಂಕುಚಿತ ಭಾವನೆಯಾಗಿರುತ್ತದೆ. ಇಂತಹ ಬದುಕನ್ನು ಕೊನೆಗಾಣಿಸಿ ವಿಶಾಲ ಹೃದಯದಿಂದ, ವೃತ್ತದ ಒಳಗಿನಿಂದ ಹೊರಬಂದು ನೋಡಿದಾಗ ಒಂದು ಉತ್ತಮ ನಡತೆಯ ಸುಂದರ ಸಮಾಜ ಕಟ್ಟಲು ಸಾಧ್ಯವಾಗುತ್ತದೆ. ಜನರಲ್ಲಿ ಏಕತೆಯ ಮನೋಭಾವ ಉಂಟಾಗಿ ವಿವಿಧ ಗುಂಪುಗಳ ನಡುವೆ ಏಕನಾದ ಮಿಡಿಯಲು ಸಹಾಯಕವಾಗುತ್ತದೆ.

'ನಾಲಗೆ' ಉತ್ತಮ ಸಂಸ್ಕಾರವನ್ನು ಪಡೆದಿರುವ ನಾಲಿಗೆಯಿಂದ ಹೊರಬರುವ ಮಾತು ಹಿತವನ್ನುಂಟುಮಾಡುತ್ತದೆ. ಬುದ್ದಿಯನ್ನು ಬೆಳೆಸುತ್ತದೆ. ಮಾತು ಎಂಬುದು ಒಂದು ರೀತಿಯ ಕಲೆಯಾಗಿದ್ದು, ಅದು ಮುತ್ತಿನ ಹಾರದಂತಿದ್ದರೆ ಉತ್ತಮ. ಇತರರಿಗೆ ನೋವುಂಟು ಮಾಡುವ ಮಾತು ಯಾರಿಗೂ ಬೇಕಿಲ್ಲ. ಹಿತಕರವಾದ, ಒಳ್ಳೆಯ ಮಾತುಗಳು ಸಮಾಜದಲ್ಲಿ ಬಾಂಧವ್ಯವನ್ನುಂಟು ಮಾಡಲು ಸಹಕಾರಿಯಾಗುತ್ತದೆ ಎಂದಿದ್ದಾರೆ.

ಹೀಗೆ ವೈಚಾರಿಕತೆ ಎಂಬುದು ಬದ್ಧತೆಯನ್ನೊಳಗೊಂಡು ಸದಾ ಬೆಳಕಿನೆಡೆಗೆ ಸಾಗಿ ಬದುಕುವ ಕ್ರಿಯೆ 'ಬಯಲ ಬೆಳೆ' ಕೃತಿಯಲ್ಲಿ ಅನಾವರಣಗೊಂಡು ಯಶಸ್ವಿಯ ಹಾದಿಯ ಕಡೆಗೆ ನಮ್ಮನ್ನು ಕೊಂಡೊಯ್ಯುತ್ತದೆ.

ಕುಕ್ಕರಹಳ್ಳಿ :

ಇದೊಂದು ವೈಚಾರಿಕ ಕೃತಿಯಾಗಿದ್ದು, ಲೇಖಕರ ಜೀವನದ ಮಹತ್ವದ ಘಟ್ಟವಾಗಿದೆ. ಕುಕ್ಕರಹಳ್ಳಿ ಪ್ರದೇಶದಲ್ಲಿನ ಜನರ ಬದುಕಿನ ಘೋರ ಕಟು ವಾಸ್ತವಗಳ ಚಿತ್ರಣವನ್ನು ಕೃತಿಯಲ್ಲಿ ಕಾಣಬಹುದು. ೧೯೮೮ ರಿಂದ ೧೯೯೩ ರವರೆಗೆ ದಲಿತ ಗ್ರಾಮದಲ್ಲಿ ವಾಸಿಸುವ ಮೂಲಕ ಲೇಖಕರು ಕೆಳ ಸ್ತರದ ಜನರ ನಿತ್ಯ ಬದುಕಿನ ಬವಣೆಯನ್ನು ಬಿಚ್ಚಿಡುವಲ್ಲಿ ಉತ್ತಮ ಪ್ರಯತ್ನ ಮಾಡಿದ್ದಾರೆ. ಈ ಕೃತಿಯು ಜೀವಂತ ಗ್ರಾಮವೊಂದರ ಜೀವನ ಚಿತ್ರವಾಗಿದೆ. ಕೃತಿಯಲ್ಲಿ ಭಾವಪೂರ್ಣ ತಲ್ಲಣಗಳಿವೆ, ಗಂಭೀರವಾದ ವಿಚಾರಧಾರೆಗಳಿವೆ, ಬದಲಾಗುತ್ತಿರುವ ದಲಿತ ಗ್ರಾಮದ ಜೀವನ ಚಿತ್ರಣವಿದೆ. ಅಲ್ಲಿನ ಜನರ ನೋವು, ನಲಿವು, ಆಸೆ ಆಕಾಂಕ್ಷೆ, ಸ್ವಾಭಿಮಾನ, ಅಸಹಾಯಕತೆ, ಸಮಸ್ಯೆ ಮೊದಲಾದವುಗಳು ಕೃತಿಯನ್ನು ಆವರಿಸಿವೆ. ಕುಕ್ಕರಹಳ್ಳಿ ಕೃತಿಯು ಜೀವನದೊಳಗಿನಿಂದಲೆ ವಿಕಾಸವನ್ನು ಕಾಣುತ್ತಾ, ಹೊರಗಿನ ಜನರ ಪ್ರಭಾವದಿಂದ ಬದಲಾವಣೆಯನ್ನು ಹೊಂದಿದೆ.

ಕುಕ್ಕರಹಳ್ಳಿಯಲ್ಲಿ ಸಂಜೆಯ ಸೊಬಗಿನ ವಾತಾವರಣವು ಒಂದು ಹಳ್ಳಿಯ ವಾತಾವರಣದಂತಿತ್ತು. ಇದು ಮೈಸೂರು ನಗರದ ಹೃದಯ ಭಾಗದಲ್ಲಿದ್ದರು, ಇಲ್ಲಿನ ಜನರಲ್ಲಿ ಹಳ್ಳಿಯ ಸಂಸ್ಕೃತಿ ಬದಲಾಗಿರಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರೂ, ಇಲ್ಲಿನ ಮನೆಗಳಿಗೆ ದೀಪ, ರಸ್ತೆ ಸೇರಿದಂತೆ ಮೂಲ ಸೌಕರ್ಯಗಳು ಇರಲಿಲ್ಲ. ಇಲ್ಲಿ ಗಮನಿಸಬಹುದಾದ ಪ್ರಮುಖ ಅಂಶವೆಂದರೆ 'ಉಳ್ಳವರಿಗೆ ಸ್ವಾತಂತ್ರ್ಯ ಬಂದಿದೆಯೇ ಹೊರತು ಬಡವರಿಗಲ್ಲ ! ' ಎಂಬುದನ್ನು ಲೇಖಕರು ಕೃತಿಯಲ್ಲಿ ನಿರ್ವಿವಾದದಿಂದ ಮಂಡಿಸಿದ್ದಾರೆ.

ಕುಕ್ಕರಹಳ್ಳಿಯ ಹಲವರು ತಮ್ಮ ಬದುಕನ್ನು ಸಾಗಿಸಲು ಇಡ್ಲಿ, ವಡೆಯನ್ನು ಮಾರಿ ಹಣ ಸಂಪಾದನೆ ಮಾಡುತ್ತಿದ್ದರು. ಕೆಲವರು ಹೂವು ಮಾರುವುದರ ಮೂಲಕ ಜೀವನ ನಡೆಸುತ್ತಿದ್ದರು. ಈ ಊರಿನಲ್ಲಿ ಇನ್ನೂರರಿಂದ ಮುನ್ನೂರು ಕುಟುಂಬಗಳಿದ್ದು, ಅಲ್ಲಿ ಕೆಲವರು ಸ್ಥಿತಿವಂತರಾಗಿದ್ದು, ಶಿಕ್ಷಣವನ್ನು ಹೊಂದಿದ್ದ ಕೆಲವು ಕುಟುಂಬಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿದ್ದು, ಉಳಿದವರು ಬಯಲು ಪ್ರದೇಶವನ್ನು ಮಲವಿಸರ್ಜನೆಗಾಗಿ ಬಳಸುತ್ತಿದ್ದರು. ಇವರಲ್ಲಿ ಸಾಮಾಜಿಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಅರಿವು ಇಲ್ಲದಿರುವುದನ್ನು ಗಮನಿಸಬಹುದು. ಇಲ್ಲಿನ ಜನ ಜಾತಿಯಲ್ಲಿ ಕೀಳಾಗಿದ್ದರು ಕೂಡ ಉನ್ನತ ಜಾತಿಯವರಿಗೆ ಗೌರವ ಕೊಡುತ್ತಿದ್ದರು ಎಂಬುದಕ್ಕೆ ಲೇಖಕರ ಪತ್ನಿಯ ಈ ಕೆಳಗಿನ ಮಾತುಗಳು ಉದಾಹರಣೆಯಾಗಿವೆ.

'ಜಾತಿ ಜನ್ಮಕ್ಕೆ ಬೆಂಕಿ ಹಾಕ, ಜಾತಿಗೂ ನಡತೆಗೂ ಸಂಬಂಧ ತಳಕು ಹಾಕುವುದು

ಎಂಥದು ? ' ಇಲ್ಲಿಯ ಜನ ಜಾತಿಯಲ್ಲಿ ಕೆಳಗಿನವರು ಆದರೆ ನಡತೆಯಲ್ಲಿ ? ನಾನು ನನ್ನ ಮಕ್ಕಳು ಬೀದೀಲಿ ಬರ್ತಾ ಇದ್ರೆ ಪಕ್ಕಕ್ಕೆ ಸರಿದು ದಾರಿ ಬಿಡ್ತಾರೆ. ಹೆಂಗಸ್ರು ಅಮ್ಮಾವ್ರೆ ಅಂತ ಬಾಯ್ತುಂಬ ಕರೀತಾರೆ, ಜಾತಿ ಮುಖ್ಯವಲ್ಲ, ನಡತೆ ಮುಖ್ಯ, ಮನುಷ್ಯತ್ವ ಮುಖ್ಯ ಅಲ್ಲಿನ ಜನರ ಔದಾರ್ಯವನ್ನು ಕೊಂಡಾಡಿದ್ದಾರೆ. (ಪುಟ – ೨೭)

ಕುಕ್ಕರಹಳ್ಳಿ ನೀರೆಯರು ತುಂಬ ಧೈರ್ಯವಂತರು, ಕಷ್ಟಪಟ್ಟು ದುಡಿಯುವವರಾಗಿದ್ದರು. ಅವರಲ್ಲಿನ ಧೈರ್ಯತನಕ್ಕೆ ಮೇಲ್ಜಾತಿಯವರು ಗಂಡನ ಜೊತೆ ಹೇಳಲು ಹೆದರಿಕೊಳ್ಳುವ ಮಾತನ್ನು ಕೆಳ ಜಾತಿಯ ಹೆಣ್ಣು ಗಂಡನ ಬೈಗುಳಕ್ಕೆ ಪ್ರತಿಯಾಗಿ ಈ ರೀತಿಯ ಮಾತನಾಡುತ್ತಾಳೆ.

'ಯಾಕಯ್ಯ ಕೇಳ್ಬಾರ್ದು ? ನೀನೇಳ್ದಂಗೆ ಕೇಳ್ಕೊಂಡು ಬಿದ್ದಿರೋಕೆ ನಾನೇನು ನಿನ್ನ ಜೀತದಾಳಲ್ಲ. ನಾನು ಈ ಮನೆಗೆ ಬಿಟ್ಟಿ ಬರ್ಲಿಲ್ಲ. ನಿನಗೂ ಸಾಕಷ್ಟು ಕೊಟ್ಟು ಬಂದಿದ್ದೀನಿ. ನಿನ್ನ ಜೊತೇಲಿ ಇಷ್ಟೊರ್ಷ ಸಂಸಾರ ಮಾಡಿದ್ದೀನಿ ; ದುಡಿದಿದ್ದೀನಿ. ಈ ಮನೇಲಿ ನಿನಗಿರೋ ಅಷ್ಟೇ ಹಕ್ಕು ನನಗೂ ಅದೆ. ದುಸರ ಮಾತಾಡಬೇಡ. ಹೆಚ್ಚು ಮಾತಾಡಿದ್ರೆ ಎಲ್ಲ ಕಕ್ಕಿಸ್ಬುಡ್ತೀನಿ.

ಧೈರ್ಯದ ಜೊತೆಗೆ ಮೈಮುರಿದು ಮೂರ್ನಾಲ್ಕು ಮನೆಗಳಲ್ಲಿ ಕೆಲಸ ಮಾಡಿ ತಮ್ಮ ಮಕ್ಕಳ ಹೊಟ್ಟೆಗೆ ಆಹಾರ ಸಂಗ್ರಹಿಸುತ್ತಿದ್ದರು. ಕೆಲವು ಮಹಿಳೆಯರು ಮತ್ಸರಿಗಳಾಗಿದ್ದು ಇತರರ ಅಂತಸ್ತನ್ನು ನೋಡಿ, ಗಂಡ ಹೆಂಡತಿಯರಲ್ಲಿನ ಹೊಂದಾಣಿಕೆಯನ್ನು ತಮ್ಮ ಬದುಕಿನ ಜೊತೆ ಹೋಲಿಕೆ ಮಾಡಿಕೊಂಡು ಕರುಬುತ್ತಿದ್ದರು. ಇದಕ್ಕೆ ಉತ್ತಮ ಉದಾಹರಣೆ ಹೆಚ್ಚು ಮಕ್ಕಳನ್ನು ಹೊಂದಿದ್ದ 'ಸಣಕಲಿ'. ಇಲ್ಲಿನ ಜನರಲ್ಲಿ ಸ್ವಾಭಿಮಾನ ಎಷ್ಟು ಮನೆ ಮಾಡಿತ್ತೆಂದರೆ ಉಪವಾಸವಿದ್ದರೂ ಯಾರಲ್ಲಿಯೂ ಕೈಚಾಚಿ ಬೇಡುತ್ತಿರಲಿಲ್ಲ. ಗಂಡಸರು ಎರಡೆರಡು ಮದುವೆಯಾಗಿ ಹೆಂಗಸರನ್ನು ಶೋಷಣೆ ಮಾಡುತ್ತಿದ್ದರು, ಅವನನ್ನು ಬಿಟ್ಟು ಹೋಗಲು ಪ್ರಯತ್ನಿಸದೆ ಕಷ್ಟಪಟ್ಟು ದುಡಿದು ತಮ್ಮ ಸಂಸಾರ ನೀಗಿಸುವ ಜಯಾಮಾನ ಹೊಂದಿದ ಹೆಂಗಸರಾಗಿದ್ದರು. ಕೆಲವು ಮಹಿಳೆಯರು ಗಂಡಸಿನ ಆಸೆಗಣ್ಣಿಗೆ ಬಲಿಯಾಗಿ ಅವನ ಫಲವನ್ನು ಹೊಟ್ಟೆಯಲ್ಲಿ ಹೊತ್ತು ವಾಸ್ತವಿಕ ಕಹಿಯನ್ನು ಉಣ್ಣುವ ಸ್ಥಿತಿಗೆ ಬಂದಿದ್ದರು. ಅಂತಹವರಲ್ಲಿ ಪ್ರಮುಖರಾದವರು ಗೀತ ಮತ್ತು ಸರೋಜ. ಇವರು ಭಾರತೀಯ ಮೇಲ್ಜಾತಿಯ ಜನರು ತೆಗೆದುಕೊಳ್ಳಲಾಗದ ಗಟ್ಟಿ ನಿರ್ಧಾರವನ್ನು ತೆಗೆದುಕೊಂಡು ಹೋರಾಡುವ ಛಲವನ್ನು ಹೊಂದಿದವರಾಗಿದ್ದರು. ಇಂತಹ ಧೈರ್ಯ ಎಲ್ಲ ಹೆಂಗಸರಲ್ಲಿಯೂ ಬರುವುದಿಲ್ಲ.

ಕುಕ್ಕರಹಳ್ಳಿಯ ಗಂಡಸರಲ್ಲಿ ಹೆಚ್ಚಾಗಿ ಕಂಡು ಬರುವ ವೃತ್ತಿಯೆಂದರೆ ಗಾರೆ ಕೆಲಸ. ಕೆಲವು ಮಂದಿ ಕುರಿ ಸಾಕಾಣಿಕೆ ಮಾಡುತ್ತಿದ್ದರು, ಕೆಲವರು ಬೆರಣಿ ತಟ್ಟಿ ಮಾರುತ್ತಿದ್ದರೆ, ಮತ್ತೆ

ಕೆಲವರು ಹಾಲು ಬೆಣ್ಣೆ ಮಾರಿ ಬದುಕು ಕಟ್ಟಿಕೊಂಡಿದ್ದರು. ಅವಿರತ ಶ್ರಮದಿಂದ ಬಂದ ದುಡಿಮೆ ಹಣವನ್ನು ಗಂಡಸರು ಹೆಂಡ ಕುಡಿಯಲು ಬಳಕೆ ಮಾಡಿಕೊಳ್ಳುತ್ತಿದ್ದುದ್ದು ಅವರಲ್ಲಿನ ಅಜ್ಞಾನ, ತಿಳುವಳಿಕೆ ಹಾಗೂ ಜ್ಞಾನದ ಕೊರತೆಯೆ ಇದಕ್ಕೆ ಮುಖ್ಯ ಕಾರಣವಾಗಿತ್ತು.

ಕುಕ್ಕರಹಳ್ಳಿಯ ನೀರೆಯರಿಗೆ ನೀರಿನ ಬಳಕೆಯ ಬಗ್ಗೆ ತಿಳುವಳಿಕೆ ಇಲ್ಲದ ಕಾರಣ ಸಾಕಷ್ಟು ನೀರನ್ನು ಬಟ್ಟೆ ಒಗೆಯಲು, ಪಾತ್ರೆ ತೊಳೆಯಲು ವ್ಯಯಿಸುತ್ತಿದ್ದರು. ಅವರಿಗೆ ನೀರಿನ ಶೇಖರಣೆಗೆ ಉತ್ತಮ ವ್ಯವಸ್ಥೆಯಿಲ್ಲದ ಕಾರಣ ಕಡಿಮೆ ನೀರು ಸಂಗ್ರಹಿಸುತ್ತಿದ್ದರು. ಅದು ಖಾಲಿಯಾದಾಗ ಕೇರಿಯಲ್ಲಿಯೇ ಇದ್ದ ಕೊಳವೆ ಬಾವಿಯಿಂದ ನೀರು ಹೊತ್ತು ತರುತ್ತಿದ್ದರು.

ಸ್ವಾತಂತ್ರ್ಯ ಬಂದಿದ್ದರೂ ಸ್ವತಂತ್ರ ಭಾರತದಲ್ಲಿನ ಜಾತೀಯತೆ ಮತ್ತು ಅಸ್ಪೃಶ್ಯತೆ ಇನ್ನು ಜೀವಂತವಾಗಿದೆ ಎಂಬುದಕ್ಕೆ 'ಅಯ್ಯಂಗಾರ್ ಮಹಿಳೆಯೊಬ್ಬರು ನಲ್ಲಿಗೆ ಹುಣಸೆಹಣ್ಣು ಹಚ್ಚಿ ಮಡಿಮಾಡಿ ನೀರು ಹಿಡಿಯುತ್ತಿದ್ದುದು' ಉತ್ತಮ ಉದಾಹರಣೆಯಾಗಿದೆ. ಇದು ಮೇಲ್ಜಾತಿ ಭಾರತೀಯರ ಮನಸ್ಸಿನಲ್ಲಿದ್ದ ಸಾಂಪ್ರದಾಯಿಕತೆ ಮತ್ತು ಜಾತಿಯನ್ನು ಸಮರ್ಥನೆ ಮಾಡಿಕೊಳ್ಳುವ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ.

ಕುಕ್ಕರಹಳ್ಳಿಯ ಹುಡುಗರಲ್ಲಿ ಕೆಲವು ಮೆಚ್ಚುವ ಗುಣಗಳು ಮನೆ ಮಾಡಿದ್ದವು. ಇವರು ವಿವಿಧ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸಮಾಜದಲ್ಲಿ ನಡೆಯುವ ವರದಕ್ಷಿಣೆ ಕಿರುಕುಳ, ಸಾವು, ದಲಿತರ ಮೇಲಿನ ಶೋಷಣೆ ಇತ್ಯಾದಿ ಚಳುವಳಿಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಸಾಮಾಜಿಕ ಕಾಳಜಿ ತೋರ್ಪಡಿಸಿದ್ದರು. ಇಲ್ಲಿನ ಹುಡುಗರಲ್ಲಿ ನಾಳೆಯ ಬದುಕಿಗಿಂತ ಇಂದಿನ ಬದುಕಿಗೆ ಹೆಚ್ಚು ಆದ್ಯತೆ ಕೊಟ್ಟು ಸುಂದರ ಜೀವನ ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿದ್ದುದನ್ನು ಕಾಣಬಹುದಾಗಿದೆ. ಕೆಲವರಲ್ಲಿ ತಮ್ಮ ಜಾತಿ, ಸಮಾಜದ ಶೋಷಣೆಯಿಂದ ಕೆಟ್ಟ ದಾರಿಯನ್ನು ಹಿಡಿದು ಹಣ ಸಂಪಾದಿಸುವ ಭಾವನೆ ಮನೆ ಮಾಡಿತ್ತು. ಇದನ್ನು ಇಲ್ಲಿನ ಒಬ್ಬ ಹುಡುಗ ಈ ರೀತಿಯಾಗಿ ವ್ಯಕ್ತಪಡಿಸುತ್ತಾನೆ 'ನಾನು ರೌಡಿಯಾಗ್ತೀನಿ, ಕೊತ್ವಾಲನಂತೆ ! ದಾವುದ್ ಇಬ್ರಾಹಿಂನಂತೆ ! ' (ಪುಟ – ೬೫)

ಇದಕ್ಕೆಲ್ಲಾ ಕಾರಣ ನಮ್ಮ ಸಮಾಜ. ಇಲ್ಲಿ ಒಳ್ಳೆಯತನ, ಸನ್ನಡತೆ, ಗೌರವಕ್ಕೆ ಬೆಲೆಸಿಗದ ಕಾರಣ ಹುಡುಗನಿಗೆ ಗೂಂಡಾಗಿರಿ ರೌಡಿತನಗಳು ಸುಲಭವಾಗಿ ಮೆರೆದು ಅನ್ನ ಸಂಪಾದಿಸಿ, ಜನರನ್ನು ಹೆದರಿಸಿ ಹಣ, ಗೌರವ ಸಿಗುವಂತೆ ಮಾಡುತ್ತವೆ. ಬದುಕಲು ಸುಲಭ ಮಾರ್ಗ ಎಂಬುದು ಅವನ ಭಾವನೆಯಾಗಿದ್ದರಿಂದ ಮೇಲಿನ ಮಾತನ್ನು ವ್ಯಕ್ತಪಡಿಸುತ್ತಾನೆ.

ಕುಕ್ಕರಹಳ್ಳಿಗೆ ಬಂದಂತಹ ವಲಸಿಗರ ಮಾಹಿತಿಯನ್ನು ಕೃತಿಯು ಕಟ್ಟಿಕೊಟ್ಟಿದೆ. ಲೇಖಕರು ತುಂಬ ಸೂಕ್ಷ್ಮವಾಗಿ ವಲಸಿಗರ ಪಟ್ಟಿಯನ್ನು ನೀಡಿದ್ದಾರೆ. ನೇಪಾಳದಿಂದ ಬಂದ ಗೂರ್ಖರು, ಇದ್ದಿಲ ಈರಯ್ಯ, ಡಾ.ಸ್ವಾಮಿ, ನಾಗಮ್ಮ, ಪಾರ್ವತಿ, ಸೇಠಾಣಿ ಚೌತಾಲಿ ಮುಂತಾದವರು ತಮ್ಮ ಹೊಟ್ಟೆಪಾಡಿಗಾಗಿ ಹಾಗೂ ವೈಯಕ್ತಿಕ ವಿಚಾರಗಳ ಕಾರಣದಿಂದ ಇಲ್ಲಿಗೆ ಬಂದು ನೆಲೆಸಿ ತಮ್ಮ ಬದುಕು ಕಟ್ಟಿಕೊಂಡಿದ್ದರು.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ವಿವಿಧ ಋತುಗಳ ಆಗಮನವಾಗುತ್ತದೆ. ಋತುಗಳಿಗೆ ತಕ್ಕಂತೆ ವಸ್ತುಗಳ ಸಂಗ್ರಹಣೆ ಮಾಡುವುದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ. ಅದರಂತೆ ಕುಕ್ಕರಹಳ್ಳಿಯಲ್ಲಿಯೂ ಇಲ್ಲಿನ ದಲಿತ ಜನರು ತಮ್ಮದೆ ಆದ ಪಾರಂಪರಿಕ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದರು. ಅವುಗಳಲ್ಲಿ ಮುಖ್ಯವಾಗಿ ಮಳೆಗಾಲಕ್ಕೆ ಕೆಲವೇ ದಿನಗಳ ಮುನ್ನ ಹೊಲೆಗೆ ಸೌದೆಗಳ ಸಂಗ್ರಹ ಮಾಡಿ, ಅಡುಗೆ ಮನೆಯಲ್ಲಿನ ಹಟ್ಟದ ಮೇಲೆ ಇಟ್ಟುಕೊಳ್ಳುತ್ತಿದ್ದರು. ಇದರಿಂದಾಗಿ ಅಡುಗೆ ಮಾಡುವ ಸಂದರ್ಭದಲ್ಲಿ ಬರುವ ಬಿಸಿಯಿಂದ ಮಳೆಗಾಲದಲ್ಲಿ ಸೌದೆಯನ್ನು ಸುಲಲಿತವಾಗಿ ಉರುವಲಾಗಿ ಬಳಸುತ್ತಿದ್ದ ಪದ್ಧತಿಯು ಅವರ ಪೂರ್ವಾಲೋಚನೆಗೆ ಒಂದು ನಿದರ್ಶನವಾಗಿದೆ. ಇಂತಹ ಇನ್ನು ಅನೇಕ ಉದಾಹರಣೆಗಳನ್ನು ಲೇಖನದಲ್ಲಿ ನಾವು ಗಮನಿಸಬಹುದಾಗಿದೆ.

ಮೈಸೂರಿನ ಹೃದಯ ಭಾಗದಲ್ಲಿದ್ದ ಕುಕ್ಕರಹಳ್ಳಿಯು ಮೈಸೂರಿನ ಸಾಂಸ್ಕೃತಿಕ ದೀಪವಾಗಿತ್ತು. ರಾಷ್ಟ್ರಕವಿ ಕುವೆಂಪು ಅವರ ಬದುಕಿನ ಒಂದು ಅವಿಭಾಜ್ಯ ಅಂಗವಾಗಿದ್ದ ಕುಕ್ಕರಹಳ್ಳಿಯ ಇಡಿ ರಾಜ್ಯದಲ್ಲಿ ಮನೆ ಮಾತಾಗಿತ್ತು. ಇಲ್ಲಿನ ಗ್ರಾಮಕ್ಕೆ ಮೊಬೈಲ್ ವ್ಯಾಪಾರಿಗಳ ಆಗಮನವಾಗುತ್ತಿತ್ತು. ಅವರು ತರಕಾರಿ, ಹಣ್ಣು, ಸ್ಟೀಲ್ ಹಾಗೂ ಸಿಲ್ವಾರದ ಪಾತ್ರಗಳು, ಪ್ಲಾಸ್ಟಿಕ್ ಸಾಮಾನುಗಳನ್ನು ಮಾರಾಟ ಮಾರಲು ಬರುತ್ತಿದ್ದರು. ಆರ್ಥಿಕವಾಗಿ ಸಬಲರಲ್ಲದ ಇಲ್ಲಿನ ಜನ ಇಂತಹ ವ್ಯಾಪಾರಿಗಳನ್ನು ಆಶ್ರಯಿಸುತ್ತಿದ್ದುದನ್ನು ಗಮನಿಸಬಹುದು..

ಚುನಾವಣೆ ಎಂಬ ಭೂತ ಯಾರನ್ನು ಬಿಡುತ್ತಿರಲಿಲ್ಲ ಎಂಬುದಕ್ಕೆ ಕುಕ್ಕರಹಳ್ಳಿ ಸಾಕ್ಷಿಯಾಗಿದೆ. ಸ್ವಯಂ ಘೋಷಿತರಾದ ರಾಜಕೀಯ ನಾಯಕರ ಸಂಖ್ಯೆ ಈ ಸಂದರ್ಭದಲ್ಲಿ ಹೆಚ್ಚಾಗಿದ್ದು, ವಿವಿಧ ಪಕ್ಷಗಳ ವಕ್ತಾರರಂತೆ ವರ್ತಿಸಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದ ಪರಿಯನ್ನು ಕಾಣಬಹುದಾಗಿತ್ತು.

ಕುಕ್ಕರಹಳ್ಳಿಯಲ್ಲಿ ಚುನಾವಣೆಯ ನಂತರದ ಕೆಲವು ವರ್ಷಗಳಲ್ಲಿ ಬದಲಾವಣೆಯ ವಾತಾವರಣ ಸೃಷ್ಟಿಯಾಯಿತು. ಇಲ್ಲಿನ ಬೀದಿಗಳಿಗೆ ಡಾಂಬರಿನ ವ್ಯವಸ್ಥೆ ಮಾಡಲಾಯಿತು.

ಶೌಚಾಲಯ ಕಟ್ಟುವ ಸೌಲಭ್ಯವನ್ನು ಒದಗಿಸಲಾಯಿತು. ಈ ಕಾರಣಗಳಿಂದ ಗ್ರಾಮೀಣ ಸಮಸ್ಯೆಯಿಂದ ನಲುಗುತ್ತಿದ್ದ ಕುಕ್ಕರಹಳ್ಳಿಗೆ ಸ್ವಲ್ಪಮಟ್ಟಿನ ಬದಲಾವಣೆಯ ಕಾಲ ಬಂದಿರುವುದನ್ನು ಗಮನಿಸಬಹುದಾಗಿದೆ.

ಸಾಮಾಜಿಕ ಹೊಣೆಗಾರಿಕೆಯನ್ನು ನಿಭಾಯಿಸಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ ದುಡಿದಂತಹ ಮೇಷ್ಟ್ರು ಚನ್ನಬಸವಯ್ಯ ಅವರನ್ನು ಯಾರೂ ಸಹ ಮರೆಯುವಂತಿಲ್ಲ. ಇವರಿಗೆ ಸಹಕಾರ ನೀಡುತ್ತಿದ್ದ ಮುಖ್ಯ ಶಿಕ್ಷಕ ಮಾದಪ್ಪ ಅವರು ಶ್ರಮದ ವ್ಯಕ್ತಿಯಾಗಿದ್ದು, ವಿದ್ಯಾರ್ಥಿಗಳ ಒಳಿತಿಗಾಗಿ ಪರಿಶ್ರಮದಿಂದ ದುಡಿಯುತ್ತಿದ್ದ ಆದರ್ಶ ವ್ಯಕ್ತಿಯಾಗಿದ್ದರು. ಚನ್ನಬಸವಯ್ಯ ಅವರಲ್ಲಿ ಕುಕ್ಕರಹಳ್ಳಿ ಮತ್ತು ಅಲ್ಲಿನ ವಿದ್ಯಾರ್ಥಿಗಳ ಬಗೆಗಿದ್ದ ಪ್ರೀತಿಯನ್ನು ಈ ರೀತಿಯಲ್ಲಿ ಕಾಣಬಹುದಾಗಿದೆ.

'ಯಾವುದು ಸಾರ್ ಹೊಸ ಮನೆ ? ಅದೊಂದು ಲೌಖಿಕ. ಸಂಸಾರಕ್ಕೊಂದಿಷ್ಟು ನಿವೃತ್ತನಾಗೋ ಮುನ್ನ ಮಾಡಬೇಕಲ್ಲ ? ನನ್ನ ನಿಜವಾದ ಮನೆ ಈ ಊರು, ಈ ಸ್ಕೂಲು. ಇಲ್ಲಿನ ಮಕ್ಕಳೆಲ್ಲರು ನನಗೆ ನನ್ನ ಮಕ್ಕಳಿಗಿಂತ ಹೆಚ್ಚು.' (ಪುಟ – ೧೩೪)

ಚನ್ನಬಸವಯ್ಯ ಅವರಲ್ಲಿನ ಆದರ್ಶಗಳನ್ನು ಅಸ್ಪೃಶ್ಯರ ಉದ್ಧಾರದ ಮನೋಭಾವನೆಯನ್ನು ಎಲ್ಲಾ ಶಿಕ್ಷಕರು ಅಳವಡಿಸಿಕೊಂಡಾಗ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕುವುದರಲ್ಲಿ ಸಂಶಯವಿಲ್ಲ.

ಕುಕ್ಕರಹಳ್ಳಿಯಲ್ಲಿ ಭಾರತೀಯ ಶ್ರೇಣಿಕೃತ ಜಾತಿ ವ್ಯವಸ್ಥೆಯಲ್ಲಿ ಅನಿವಾರ್ಯ ಬೆಳವಣಿಗೆಯಾಗಿತ್ತು. ಇಲ್ಲಿ ಅಂತರ್ಜಾತಿ ವಿವಾಹಗಳನ್ನು ಕಾಣಬಹುದಾಗಿತ್ತು. ಇದು ಜನರ ಸಾಮಾಜಿಕ ಬದಲಾವಣೆಗೆ ಒಂದು ಉತ್ತಮ ನಿದರ್ಶನವಾಗಿತ್ತು.

ಕುಕ್ಕರಹಳ್ಳಿ ಎಂಬ ಒಂದು ಸಣ್ಣ ದಲಿತ ಗ್ರಾಮ ಅನಕ್ಷರತೆ, ಮೌಢ್ಯ, ಕೀಳರಿಮೆಯಿಂದ ನಲುಗುತ್ತಿದ್ದು ಕ್ರಮೇಣ ಅಲ್ಲಿ ಅಕ್ಷರ ತಂದ ಬೆಳಕು, ಸ್ವಾತಂತ್ರ್ಯದ ಅರಿವು, ಸ್ವಾಭಿಮಾನದ ಬದುಕನ್ನು ಭಿನ್ನವಾದ ಹೊಸ ಹಾದಿಯಲ್ಲಿ ಕರೆದುಕೊಂಡು ಹೋಗುತ್ತಿರುವುದನ್ನು ಕಾಣಬಹುದು. ಇಂತಹ ಬದಲಾವಣೆಯ ವಾತಾವರಣ ಇತರೆ ಹಳ್ಳಿಗಳಿಗೂ ಬಂದರೆ ನಮ್ಮ ರಾಷ್ಟ್ರ ಮತ್ತು ಸಮಾಜದಲ್ಲಿ ಸುಧಾರಣೆಯನ್ನು ಕಾಣಬಹುದಾಗಿದೆ.

ಮಹಿಳಾ ಚಿಂತನೆಯ ಕೃತಿ 'ಭೂಮಿ ತೂಕದ ಕಣ್ಣೀರು'

'ಭೂಮಿ ತೂಕದ ಕಣ್ಣೀರು' ಮಹಿಳೆಯರ ಚಿಂತನೆಯನ್ನು ಒಳಗೊಂಡ ಕೃತಿಯಾಗಿದ್ದು, ಸಮಾಜದಲ್ಲಿನ ಮಹಿಳೆಯರ ಸಮಸ್ಯೆ, ನೋವುಗಳನ್ನು ಸಂವೇದನಾಶೀಲ ಮನಸ್ಸೊಂದು ತೀವ್ರವಾಗಿ ಗಮನಿಸಿ ಕಾರಣಗಳನ್ನು ಸಮರ್ಥವಾಗಿ ಅನಾವರಣಗೊಳಿಸಿದೆ. ಮಹಿಳೆಯರ ಒಳಿತಿಗಾಗಿ ಹೋರಾಟ ನಡೆಸಿದ ಶಿವರಾಮು ಕಾಡನಕುಪ್ಪೆ ಅವರು, ದುಡಿವ ಮಹಿಳೆಯ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ, ಆಧುನಿಕ ದೃಷ್ಟಿಯ ಹಲವು ಒಳನೋಟವನ್ನು ನೀಡಿದ್ದಾರೆ.

ಹಳ್ಳಿಯಲ್ಲಿ ಹಿಂದೆ ಗಂಡ ದುಡಿಯಲಿ, ದುಡಿಯದಿರಲಿ ಹೆಣ್ಣು ಮಕ್ಕಳು ಗಂಡಸಿನ ಜವಾಬ್ದಾರಿ ಹೊತ್ತು ಮನೆ ಕೆಲಸದ ಜೊತೆಗೆ, ಗದ್ದೆ ಹೊಲಗಳಲ್ಲಿ ಮೈ ಮುರಿದು ದುಡಿಯುವುದನ್ನು ಗಮನಿಸಬಹುದು. ತನ್ನ ಕುಟುಂಬ ನಿರ್ವಹಣೆ, ಮಕ್ಕಳ ಪ್ರಗತಿಗಾಗಿ ತನ್ನ ಜೀವವನ್ನು ಕಾಯಕಕ್ಕೆ ಒಗ್ಗಿಸಿಕೊಂಡಿರುತ್ತಾಳೆ. ಇಲ್ಲಿ ಸಮಾಜದ ನಿಜವಾದ ಅಂತಃಸತ್ವ ಸ್ತ್ರೀಯಾಗಿದ್ದು, ಸಮಾಜದ ನೈತಿಕತೆ ಆರೋಗ್ಯ ಕಾಪಾಡುತ್ತ ಬಂದಿರುವುದನ್ನು ಗಮನಿಸಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಈ ಅಂಶದಲ್ಲಿ ಅಲ್ಪ ಬದಲಾವಣೆ ಕಾಣಬಹುದಾಗಿದೆ. ಸಮಾಜದ ಆರೋಗ್ಯ ಕಾಪಾಡುತ್ತಿದ್ದ ಹೆಣ್ಣು ಮಕ್ಕಳು ಇಂದು 'ರಾತ್ರಿಗೆ ಮನೆಗೆ ಬರುವಾಗ ಒಂದು ಕ್ವಾಟರ್ ತನ್ನಿ' ಎನ್ನುವ ಮಟ್ಟಿಗೆ ಬೆಳೆದಿದ್ದಾಳೆ. ಈ ಭಾವನೆಯನ್ನು ತೊಡೆದುಹಾಕಿ ಪ್ರತಿಯೊಬ್ಬ ಹೆಣ್ಣು ಮಕ್ಕಳು ಗಂಡಸನ್ನು ಸಾಮಾಜಿಕವಾಗಿ ಏಕತ್ರಗೊಳಿಸಿ ಅವನಿಗೆ ಜೀವತುಂಬಿ ಚೈತನ್ಯಗೊಳಿಸುವ ಸಂಜೀವಿನಿಯಾಗಬೇಕಾಗಿದೆ.

ವಿದ್ಯಾವಂತ ಹೆಣ್ಣು ಮಕ್ಕಳು ಸಮಾಜದಲ್ಲಿ ದುಡಿಯುತ್ತಿರುವುದನ್ನು ಕಾಣಬಹುದು. ಅವರು ಹೆಚ್ಚಾಗಿ ಮಾನಸಿಕ ಮತ್ತು ದೈಹಿಕ ಹಿಂಸೆಗಳನ್ನು ಅನುಭವಿಸುತ್ತಾರೆ. ಕುಟುಂಬದ ನಿರ್ವಹಣೆಗಾಗಿ ಇವನ್ನೆಲ್ಲಾ ಸಹಿಸಿಕೊಂಡು ದುಡಿಯಬೇಕಾಗಿದೆ. ಆದರೂ ಅವಳಲ್ಲಿರುವ ಒಂದು ಕೊರತೆಯೆಂದರೆ, ಪುರುಷ ಹೇಳುವ ಎಲ್ಲವೂ ಅರಿವು, ಜ್ಞಾನ ಎಂದು ತಿಳಿದಿರುವುದು. ಇದಕ್ಕೆಲ್ಲಾ ಪ್ರಮುಖ ಕಾರಣ ವೈಚಾರಿಕ ಪ್ರಜ್ಞೆಯ ಕೊರತೆ. ಇದನ್ನು ನೀಗಿಸಿಕೊಂಡು ತನ್ನ ಸ್ಥಾನಮಾನ ಭದ್ರಪಡಿಸಿಕೊಂಡು ಜೀವನದಲ್ಲಿ ಮುಂದೆ ಸಾಗಬೇಕಾಗಿದೆ. ಗಂಡಸರು ಕೂಡ ಹೆಣ್ಣಿಗೆ ಉತ್ತಮ ಸ್ಥಾನಮಾನ ನೀಡಿ ಸಹಕರಿಸಿದರೆ ಉತ್ತಮ ಸಮಾಜ ನಿರ್ಮಾಣವಾಗುತ್ತದೆ.

'ಭಾರತೀಯ ಸಮಾಜದಲ್ಲಿ ಜಾತಿ ಎನ್ನುವುದು ಕೆಲವರಿಗೆ ಅಭಿಮಾನದ ಸಂಗತಿಯಾದರೆ ಮತ್ತೆ ಕೆಲವರಿಗೆ ಅವಮಾನದ, ನಾಚಿಕೆಯ ಅಂಶವಾಗಿರುವುದು ವ್ಯಂಗ್ಯವಾಗಿದೆ. ದುಡಿಯುವ ವರ್ಗವೆಲ್ಲಾ ಒಂದು ಎಂಬ ಸಿದ್ಧಾಂತ ಭಾರತದಲ್ಲಿ ಹುಸಿಯಾಗುತ್ತದೆ. ಶೋಷಿತ ಜನಾಂಗದೊಳಗೆ ಶೋಷಕ ಸಂಸ್ಕೃತಿಯ ವೃತ್ತವೊಂದು ಮೂಡುತ್ತಾ ಸಾಗುತ್ತದೆ.' (ಪುಟ –೨೬)

ಶಿವರಾಮು ಕಾಡನಕುಪ್ಪೆ ಅವರ ಮೇಲಿನ ಮಾತುಗಳು ಇಂದಿನ ಸಮಾಜದ ಸ್ಥಿತಿಗತಿಯನ್ನು ಬಿಂಬಿಸುವಲ್ಲಿ ವಾಸ್ತವ ಸನ್ನಿವೇಶವನ್ನು ಪ್ರತಿಬಿಂಬಿಸಿವೆ. ದುಡಿಯುವ ಮಹಿಳೆ ತನ್ನ ಕಚೇರಿಯ ಅಧಿಕಾರಿಗಳಿಂದ ಶೋಷಣೆಗೆ ಒಳಗಾಗುತ್ತಾಳೆ. ಆದರೆ ತನ್ನ ಮನೆಯಲ್ಲಿ ದುಡಿಯುವ ಮಹಿಳೆಯನ್ನು ಪ್ರೀತಿಯಿಂದ, ಗೌರವದಿಂದ ಕಾಣುವುದು ತೀರ ಕಡಿಮೆ. ಕೇವಲ ಅವರನ್ನು ಹಂಗಿಸುವ, ದೋಷ ಹುಡುಕುವ ಕಾಯಕದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ. ಇಂತಹ ಭಾವನೆಗಳು ಬದಲಾಗಿ ಎಲ್ಲರನ್ನು ಸಮಾನತೆಯಿಂದ ನೋಡುವ ಭಾವನೆ ಸ್ತ್ರೀಯರಲ್ಲಿ ಹುಟ್ಟಬೇಕು. ಇದರಿಂದ ಯಜಮಾನಿ ಮತ್ತು ಕೆಲಸದಾಳಿನ ನಡುವೆ ಉತ್ತಮ ಬಾಂಧವ್ಯ ಬೆಳೆಯಲು ಸಾಧ್ಯವಾಗುತ್ತದೆ.

ಶ್ರೀಮಂತರ ಮನೆಗಳಲ್ಲಿ ಕೆಲಸ ಮಾಡುವ ಹೆಂಗಸರು ತಮ್ಮ ಮಕ್ಕಳ ಭವಿಷ್ಯದ ಚಿಂತೆಯಲ್ಲಿ ತಮ್ಮ ದೈಹಿಕ ಶ್ರಮವನ್ನು ಮರೆಯುವ ಪ್ರಯತ್ನ ಮಾಡುತ್ತಾರೆ. ಹೆಣ್ಣಿಗೆ ಆರ್ಥಿಕ ಸ್ವಾವಲಂಬನೆ ಇಲ್ಲದಿದ್ದಾಗ ಅವಳು ವೇಶ್ಯೆಯಾಗಿ ಮಾರ್ಪಡುವ ಚಿತ್ರಣಗಳಿಗೆ ಹಲವು ಉದಾಹರಣೆಗಳಿವೆ. ಕಟ್ಟಿಕೊಂಡ ಗಂಡ ನೆಟ್ಟಗೆ ನೋಡಿಕೊಳ್ಳದೆ, ಕುಡಿದುಬಂದು ಹೆಂಡತಿಯನ್ನು ಶೋಷಣೆಗೆ ಒಳಪಡಿಸಿದಾಗ ಅವಳು ಅನಿವಾರ್ಯವಾಗಿ ತನ್ನ ಕುಟುಂಬದ ನಿರ್ವಹಣೆಯನ್ನು ಮಾಡಲು ಬಹುಬೇಗ ಹಣ ಸಂಪಾದಿಸಬೇಕಾಗುತ್ತದೆ. ಉನ್ನತ ಸ್ಥಿತಿಗೆ ಬರಬೇಕೆಂಬ ಆಸೆಯಿಂದ ಮೈ ಮಾರಿಕೊಳ್ಳುವ ಕಾಯಕಕ್ಕೆ ತನ್ನನ್ನು ತೊಡಗಿಸಿಕೊಂಡು ತನ್ನ ಜೀವನವನ್ನೆ ನರಕ ಮಾಡಿಕೊಳ್ಳುವ ಹಲವು ಸ್ತ್ರೀಯರನ್ನು ಕಾಣಬಹುದು. ಇಂತಹ ವೃತ್ತಿಯನ್ನು ಕೊನೆಗೊಳಿಸುವ ಕಾರ್ಯದಲ್ಲಿ ನಮ್ಮ ಸರ್ಕಾರ, ನಾವುಗಳು, ಎಲ್ಲರ ಪ್ರಯತ್ನ ಸಾಕಷ್ಟು ಬೇಕಾಗಿದೆ. ಇಂತಹವರಿಗೆ ಶಿಕ್ಷಣ ನೀಡಿ ಬದಲಿ ವೃತ್ತಿಯನ್ನು ತಿಳಿಸುವುದರ ಮೂಲಕ ಅವರ ಬದುಕು ಉತ್ತಮ ಹಾದಿಯಲ್ಲಿ ಸಾಗುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಅರ್ಥಪೂರ್ಣ ಸ್ವಾವಲಂಬನೆಯ ಬದುಕು ಎಲ್ಲರನ್ನು ಉತ್ತಮ ಹಾದಿಯೆಡೆಗೆ ಕರೆದುಕೊಂಡು ಹೋಗುತ್ತದೆ.

ಸ್ತ್ರೀಗೆ ದುಡಿಮೆಯು ಆರ್ಥಿಕ ಸ್ವಾವಲಂಬನೆ, ಸುಖ ಸವಲತ್ತುಗಳನ್ನು ತಂದು ಕೊಡುವುದರ ಜೊತೆಗೆ ಅವಳನ್ನು ಸಂದಿಗ್ಧ ಪರಿಸ್ಥಿತಿಗೆ ದೂಡುತ್ತದೆ. ಬಿಸಿ ತುಪ್ಪವನ್ನು ನುಂಗಲಾರದೆ, ಉಗಿಯಲೂ ಆಗದೆ ಬಾಯಲ್ಲಿಟ್ಟುಕೊಂಡು ಬದುಕಬೇಕಾದ ಸ್ಥಿತಿ ಅವಳಿಗೆ ಬಂದಿದೆ. ಮೇಲಾಧಿಕಾರಿಗಳು ನೀಡುವ ಲೈಂಗಿಕ ಶೋಷಣೆಗೆ ಒಳಗಾಗಿ ನಿತ್ಯ ನೋವನ್ನು ಅನುಭವಿಸುವ ಸ್ಥಿತಿಯನ್ನು ಇಂದಿಗೂ ಕಾಣಬಹುದು. ಇಂತಹ ಶೋಷಣೆಗಳನ್ನು ತಪ್ಪಿಸಲು ಸ್ತ್ರೀಯರಿಗೆ ಉತ್ತಮ ಶಿಕ್ಷಣ, ಸ್ವಾವಲಂಬಿ ಬದುಕು, ಧೈರ್ಯ ಮುಂತಾದವುಗಳನ್ನು ತುಂಬಿ ಯಾವುದೆ ಪರಿಸ್ಥಿತಿಯನ್ನು ಎದುರಿಸುವ ಎದೆಗಾರಿಕೆ ಬರುವಂತೆ ಮಾಡುವುದು ನಮ್ಮ ಸರ್ಕಾರದ, ನಮ್ಮ ಸಮಾಜದ ಆದ್ಯ ಕರ್ತವ್ಯವಾಗಿದೆ.

ಶಿವರಾಮು ಕಾಡನಕುಪ್ಪೆ ಅವರು ಮಂಡ್ಯ ಕರ್ನಾಟಕ ಸಂಘ ಹೊರ ತರುತ್ತಿರುವ 'ಅಭಿವ್ಯಕ್ತಿ' ಸಂಚಿಕೆಯಲ್ಲಿ ಹಲವಾರು ವೈಚಾರಿಕ ಬರಹಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವು ಬರಹಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

'ಪತ್ನಿಯರ ಅದಲು ಬದಲು' ಲೇಖನವು ಆಧುನಿಕ ಸಮಾಜದಲ್ಲಿ ವ್ಯಕ್ತಿಗಳು ಭೋಗ ವಿಲಾಸಗಳಿಗೆ ಒಳಗಾಗಿ ತಮ್ಮ ತನವನ್ನು ಕಳೆದುಕೊಂಡು ಯಾವುದೆ ದುಷ್ಕೃತ್ಯ ಮಾಡಲು ತೊಡಗಿಸಿಕೊಳ್ಳುತ್ತಾರೆ ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ. ಪತ್ನಿಯರ ಅದಲು ಬದಲು ಮಾಡಿಕೊಳ್ಳುವ ಪ್ರವೃತ್ತಿಯು ಸಂಸ್ಕೃತಿ – ನಾಗರಿಕತೆಗಳ ವಿಕಾಸ ಶೀಲತೆಯ ಪ್ರಕ್ರಿಯೆಯಾಗಿರದೆ, ನಾಗರಿಕ ಸರ್ವ ಸಮಾಜದ ಹಿಮ್ಮುಖ ನಡೆಯಾಗಿದೆ. ಈ ರೀತಿಯ ಬೆಳವಣಿಗೆಯಿಂದ ಸಮಾಜದ ಉದ್ಧಾರ ಖಂಡಿತ ಸಾಧ್ಯವಿಲ್ಲ. ಇಂತಹ ಕೆಟ್ಟ ಸಂಸ್ಕೃತಿಯನ್ನು ತೊಡೆದುಹಾಕಿ ಬದುಕಿನಲ್ಲಿ ಲೈಂಗಿಕತೆಯನ್ನು ಮೀರಿದ ಪ್ರೀತಿ, ವಾತ್ಸಲ್ಯ, ಸೋದರತ್ವದ ಭಾವನೆಗಳಿವೆ. ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮಾನವೀಯ ನೆಲೆಯಲ್ಲಿ, ಆದರ್ಶದ ನೆಲೆಯಲ್ಲಿ ಸಾಗಬೇಕೆಂಬುದೆ ಲೇಖನದ ಉದ್ದೇಶವಾಗಿ ಈ ಕಾರ್ಯ ಸಮೂಹ ಮಾಧ್ಯಮಗಳು ಉತ್ತಮ ಅಂಶಗಳನ್ನು ಭಿತ್ತರ ಮಾಡುವುದರ ಮೂಲಕ ಸಹಕರಿಸಬೇಕು ಎಂದಿದ್ದಾರೆ.

'ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ' ಲೇಖನದಲ್ಲಿ ಶಿವರಾಮು ಕಾಡನಕುಪ್ಪೆ ಅವರು, ವೈಚಾರಿಕ ನೆಲೆಯಲ್ಲಿ ನಮ್ಮ ಜನ ಸಾಗದೆ ಹಿಂದಿನ ಕಂದಾಚಾರ ಮೂಢ ನಂಬಿಕೆಗಳನ್ನು ಯಥಾವತ್ತಾಗಿ ಸಾಗಿಸಿಕೊಂಡು ಬರುತ್ತಿರುವ ಚಿತ್ರಣವನ್ನು ನೀಡಿದ್ದಾರೆ. ದೇವಾಲಯ, ಮಠಗಳನ್ನು ಕಟ್ಟಿಸುವುದರ ಮೂಲಕ ಹಳೆಯ ಮೌಲ್ಯಗಳನ್ನು ಗಟ್ಟಿಗೊಳಿಸುವ ಪ್ರಯತ್ನವಾಗಿದೆ. ಹುಲು ಮಾನವನ ತನು–ಮನ–ದನಗಳನ್ನು ಭವ್ಯ ದೇವಾಲಯ, ಗುಡಿ, ಚರ್ಚು, ಮಸೀದಿಗಳನ್ನು ಕಟ್ಟಿಸಲು ವ್ಯಯ ಮಾಡುವುದು ಸರಿಯೇ ? ಮಾನವ ಶ್ರಮವನ್ನು ಶೋಷಣೆ ಮಾಡುವುದು ಸರಿಯೇ ? ಲಕ್ಷ ಲಕ್ಷ ಜನ ಉಪಯೋಗವಿಲ್ಲದ ಕಾರ್ಯಕ್ಕಾಗಿ ತಮ್ಮ ಪ್ರಾಣ ಅರ್ಪಿಸಿರುವುದು ಎಷ್ಟರಮಟ್ಟಿಗೆ ಸರಿ ? ಎಂಬ ಪ್ರಶ್ನೆಗಳು ಈ ಲೇಖನದಲ್ಲಿ ಪ್ರತಿಧ್ವನಿತವಾಗಿವೆ.

ಹನ್ನೆರಡನೆಯ ಶತಮಾನದಲ್ಲೆ ಬಸವಣ್ಣ ದೇವಾಲಯದ ಕಲ್ಪನೆಯನ್ನು ಬದಲಿಸಲು ಯತ್ನಿಸಿದ್ದರು. ಆದರೆ ಮಾನವ ಬದಲಾಗಲಿಲ್ಲ ತನ್ನ ಮನೆಯ ಕಟ್ಟಡ ಕುಸಿಯುತ್ತಿದ್ದರೂ, ದೇವರ ಕಟ್ಟಡ ಶಾಶ್ವತವಾಗಿರಲೆಂದು ಕಲ್ಲಿನ ಕಟ್ಟಡ ಕಟ್ಟಿ ಅಮರವಾಗಿಸಿ, ವಿವೇಚಿಸುವ ಬುದ್ಧಿ ಕಳೆದುಕೊಂಡು ಮೌಢ್ಯದಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದಾನೆ. ಈಗಲಾದರೂ ಪ್ರತಿಯೊಬ್ಬರು

ಎಚ್ಚೆತ್ತುಕೊಂಡು ಪುರೋಹಿತಶಾಹಿಯನ್ನು ತೊಡೆದುಹಾಕಿ ಸಾಮಾಜಿಕ ಸಮಸ್ಯೆಗಳಾದ ರಸ್ತೆ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ಶಿಕ್ಷಣ ವ್ಯವಸ್ಥೆ, ಕೆರೆ ಕಟ್ಟೆಗಳ ಶುದ್ಧೀಕರಣ ಮುಂತಾದ ಕೆಲಸಗಳಿಗೆ ತಮ್ಮ ತನುಮನ ಧನಗಳನ್ನು ಅರ್ಪಿಸಿದರೆ ಸುಂದರ ಬಾಳು, ಸುಂದರ ಸಮಾಜದ ಸ್ಥಾಪನೆಯಾಗುತ್ತದೆ ಎಂದಿದ್ದಾರೆ.

'ಸತ್ಯ ಹರಿಶ್ಚಂದ್ರ – ಒಂದು ಮರು ವೀಕ್ಷಣೆ' ಲೇಖನದಲ್ಲಿ ಹರಿಶ್ಚಂದ್ರನಲ್ಲಿದ್ದ ಮೌಲ್ಯಗಳು, ಸತ್ಯತನ, ದಲಿತನ ದಾಸನಾಗಿ ಜಾತಿ ಮದವನ್ನು ನೀಗಿಸಿಕೊಂಡು ಬಾಳುವ ರೀತಿಯನ್ನು ವಿವರಿಸಿದ್ದಾರೆ. ಹರಿಶ್ಚಂದ್ರನು ತಾನು ಕೊಟ್ಟ ವಚನ ಪಾಲನೆಗಾಗಿ ತನ್ನ ರಾಜ್ಯವನ್ನು ಕಳೆದುಕೊಂಡು ಕಷ್ಟ ನಷ್ಟಗಳಿಗೆ ಒಳಗಾಗಿ ನೋವನ್ನು ಅನುಭವಿಸಿದರೂ ಕೂಡ ಸತ್ಯತನವನ್ನು, ಸತ್ಯದ ಹಾದಿಯನ್ನು ಎಂದಿಗೂ ಬಿಟ್ಟು ಬರುವ ಸಾಹಸ ಮಾಡಲಿಲ್ಲ. ಗಂಡನಿಗೆ ತಕ್ಕ ಹೆಂಡತಿಯಂತೆ ಚಂದ್ರಮತಿ ಅವನಿಗೆ ಅಪಾಯದ ಪರಿಸ್ಥಿತಿಯಲ್ಲಿಯೂ ನೆರವಿಗೆ ಬಂದು ಕಾಪಾಡುತ್ತಾಳೆ. ಚಂದ್ರಮತಿ ಮಾರ್ಗದರ್ಶಕಳಾಗಿ ತನ್ನ ಗಂಡನ ಸತ್ಯನಿಷ್ಠೆಯ ನಡೆಯಲ್ಲಿ ತನ್ನ ಪಾಲನ್ನು ಅರಿತು ನಡೆದಿರುವುದು ತುಂಬಾ ಅದ್ಭುತವಾಗಿದೆ. ಹರಿಶ್ಚಂದ್ರ ಅಧಿಕಾರ ಮದ, ಜಾತಿ ಮದ, ಸುತ ಸತಿಯರ ಮದಗಳನ್ನು ಗೆದ್ದು ಸಮುದಾಯ ಪ್ರಜ್ಞೆಯನ್ನು ಬಿಂಬಿಸುವ ವ್ಯಕ್ತಿಯಾಗಿ ನಿಲ್ಲುತ್ತಾನೆ. ಹೀಗೆ ಒಂದು ಸಿನಿಮಾದಿಂದಲೂ ನಾವೆಲ್ಲರೂ ಹಲವು ಮೌಲ್ಯಗಳನ್ನು ಕಲಿತು ನಮ್ಮ ಕುಟುಂಬದಲ್ಲಿ ಅಳವಡಿಸಿಕೊಂಡಾಗ ನಮ್ಮದು ಸುಖೀ ಕುಟುಂಬವಾಗುವುದರಲ್ಲಿ ಯಾವುದೆ ಎಂಬ ಸಂಶಯವಿಲ್ಲ ಎಂಬ ಸಾರವನ್ನು ಲೇಖನ ಒಳಗೊಂಡಿದೆ.

'ಮಮ್ಮಿ, ಕೆಂಡ ಮೀನ್ಸ್ ವಾಟ್ ? ' ಲೇಖನದಲ್ಲಿ ಶಿವರಾಮು ಕಾಡನಕುಪ್ಪೆ ಅವರು ಗ್ರಾಮ ಸಂಸ್ಕೃತಿಯ ವಿಶಿಷ್ಟ ಪದ ಪ್ರಯೋಗಗಳು ಮರೆಯಾಗುತ್ತಿರುವುದರ ಬಗ್ಗೆ ವಿವರಿಸಿದ್ದಾರೆ. ಇಂದಿನ ಮಕ್ಕಳಿಗೆ ಹಳ್ಳಿಯಲ್ಲಿ ಬಳಕೆ ಮಾಡುವ ಸಾಮಾನ್ಯ ಪದಗಳ ಅರ್ಥವೆ ತಿಳಿದಿಲ್ಲ. ಏಕೆಂದರೆ ಅವರೆಲ್ಲಾ ಆಧುನಿಕ ಇಂಗ್ಲೀಷ್ ಶಿಕ್ಷಣದ ಪ್ರಭಾವಕ್ಕೆ ಒಳಗಾಗಿ ಅನೇಕ ಪದಗಳು ಅರ್ಥಗ್ರಹಿಕೆಯಿಂದ ದೂರ ಮಾಡಿಕೊಳ್ಳುತ್ತಿದ್ದಾರೆ.

ಹಳೆಯ ಸಂಸ್ಕೃತಿಯು ಹೊಸ ಸಂಸ್ಕೃತಿಗೆ ದಾರಿ ಮಾಡಿಕೊಡಬೇಕಾಗುತ್ತದೆ. ಈ ಹೊರ ಸಂಸ್ಕೃತಿಯ ಪ್ರಭಾವಗಳನ್ನು ಗುಣಾತ್ಮಕವಾಗಿ ಸ್ವೀಕರಿಸಿ ಉಳಿಸಿಕೊಳ್ಳುವ ಪ್ರಯತ್ನವನ್ನು ನಮ್ಮ ಭಾಷಾ ಸಂಸ್ಕೃತಿ ಮಾಡುತ್ತಿದೆ. ಅದರ ಜೊತೆ ಜೊತೆಗೆ ಕನ್ನಡ ಬದುಕನ್ನು ನಮ್ಮದಾಗಿಸಿಕೊಂಡು ಬಾಳುತ್ತಿರುವ ನಾವೆಲ್ಲರು ಈ ಕಾರ್ಯದಲ್ಲಿ ಕೈ ಜೋಡಿಸಬೇಕು. ಗ್ರಾಮ ಸಂಸ್ಕೃತಿಯ ಪ್ರಮುಖ ಅಂಶಗಳು, ಪದಗಳು, ಜೀವನ ಪದ್ಧತಿಗಳನ್ನು ಅಧ್ಯಯನ ಮಾಡಿ, ನಮ್ಮ ಮುಂದಿನ ಪೀಳಿಗೆಗೆ

ತಲುಪಿಸುವ ಉದ್ದೇಶದಿಂದ ಸಂರಕ್ಷಿಸಬೇಕು ಎಂದಿದ್ದಾರೆ. ಅರ್ಥಪೂರ್ಣ ಇತಿಹಾಸದ ಅರಿವು ಯಾರಿಗೆ ಇರುತ್ತದೋ ಅವನು ಅರ್ಥಪೂರ್ಣ ಭವಿಷ್ಯವನ್ನು ರೂಪಿಸಿಕೊಳ್ಳುವ ಪ್ರಜ್ಞೆಯನ್ನು ಪಡೆಯುತ್ತಾನೆ ಎಂದಿದ್ದಾರೆ.

'ಮತಿಭ್ರಾಂತಿ ಮತ್ತು ಮತ ಮೌಢ್ಯಗಳ ನಡುವೆ' ಲೇಖನದಲ್ಲಿ ವ್ಯಕ್ತಿಯು ತನ್ನ ಸ್ವಾರ್ಥ ಸಾಧನೆಗಾಗಿ ಮತ-ಮೌಢ್ಯಗಳನ್ನು ಜನರಲ್ಲಿ ತುಂಬಿ ಪೋಷಿಸುತ್ತಿರುವ ಪರಿಯನ್ನು ವಿವರಿಸಿದ್ದಾರೆ. ನಮ್ಮದು ಇಪ್ಪತ್ತೊಂದನೆ ಶತಮಾನವಾಗಿದ್ದು, ಕಂಪ್ಯೂಟರ್ ಯುಗಕ್ಕೆ ಕಾಲಿಟ್ಟಿದ್ದರೂ ಕೂಡ ಅಜ್ಞಾನಗಳ ಜಾಲಕ್ಕೆ ಸಿಲುಕಿ ಮಾನವ ನಲುಗುತ್ತಿರುವ ಚಿತ್ರಣವನ್ನು ಕಾಣಬಹುದು. ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದಿದ್ದು, ದೇಶದ ಪ್ರಜೆಗಳು ಅಕ್ಷರಸ್ಥರಾಗಿದ್ದಾರೆ. ವಿಜ್ಞಾನ ತಂತ್ರಜ್ಞಾನಗಳು ವಿಸ್ತರಿಸಿ ನಿಂತಿವೆ. ಇವುಗಳ ಬಳಕೆಯಿಂದ ಮಾನವ ಹಲವು ಅನುಕೂಲಗಳನ್ನು ಪಡೆಯುತ್ತಿದ್ದಾನೆ. ಅವನಲ್ಲಿ ವಸ್ತ್ರ ವೈವಿಧ್ಯತೆಯನ್ನು ಕಾಣಬಹುದು. ಅವನ ಜಗತ್ತು, ಹೊರ ರೂಪುಗಳು ಆಧುನಿಕರಣಗೊಂಡಿವೆ. ಆದರೆ ಅವನ ಅಂತರಂಗ ಮತ-ಮೌಢ್ಯಗಳ ಬಲೆಗೆ ಸಿಲುಕಿರುವುದು ಸರಿಯೇ ? ಎಂಬ ಪ್ರಶ್ನೆ ಹುಟ್ಟುತ್ತದೆ. ಅವನಲ್ಲಿ ಹೆಚ್ಚಿನ ಅಜ್ಞಾನ ಬೆಳೆಯುವಲ್ಲಿ ಕಾರಣವಾದ ಅಂಶಗಳೆಂದರೆ ವಿದ್ಯುನ್ಮಾನ ತಂತ್ರಾಂಶಗಳು, ಜ್ಯೋತಿಷಿಗಳು, ವಾಸ್ತು ತಜ್ಞರು, ಧಾರ್ಮಿಕ ಪಂಡಿತರು. ಇವುಗಳನ್ನೆಲ್ಲಾ ಧಿಕ್ಕರಿಸಿ ಮಾನವ ಅಜ್ಞಾನದಿಂದ ಜ್ಞಾನದ ಕಡೆಗೆ ಸಾಗಿ, ಅರ್ಥಪೂರ್ಣ ವಿದ್ಯೆಯ ಸದುಪಯೋಗ ಮಾಡಿಕೊಂಡಲ್ಲಿ ಮತಭ್ರಾಂತಿ ಮತ್ತು ಮತ ಮೌಢ್ಯಗಳನ್ನು ಬೇರು ಸಮೇತ ಕಿತ್ತೊಗೆಯಬಹುದು ಎಂದು ವಿವರಿಸಿದ್ದಾರೆ.

'ವಿಷ್ಣುವರ್ಧನ್ : ನಗರ ಪ್ರಜ್ಞೆಯ ನಟ' ಲೇಖನವು ಸಮಾಜದಲ್ಲಿನ ಇಬ್ಬರು ವಿಭಿನ್ನ ನಟರ ತೌಲನಿಕ ವಿಮರ್ಶೆಯನ್ನು ಮಾಡಿದೆ. ವಿಷ್ಣುವರ್ಧನ್ ಸಮಾಜವನ್ನು ಪ್ರತಿಬಿಂಬಿಸುವ ನಾಯಕನಾಗಿ ನಗರ ಕೇಂದ್ರಿತ ಪಾತ್ರಗಳುಳ್ಳ ಚಲನ ಚಿತ್ರಗಳಲ್ಲಿ ಕಾಣಿಸಿಕೊಂಡು ಒಬ್ಬ ಮಾದರಿ ನಟರಾಗಿದ್ದರು. ಆದರೆ ಅವರ ನಿಜ ಜೀವನವನ್ನು ಗಮನಿಸಿದಾಗ ವ್ಯಕ್ತಿತ್ವದಲ್ಲಿ ವಿಕ್ಷಿಪ್ತತೆ ಇದ್ದು ಗಟ್ಟಿತನ ಕಡಿಮೆ ಇತ್ತೆಂಬುದು ತಿಳಿದು ಬರುತ್ತದೆ. ಅವರು ಹಲವಾರು ಗೊಂದಲಗಳಿಗೆ ಒಳಗಾಗಿ ಮೌಢ್ಯತೆಯಲ್ಲಿ ಮನೆ ಮಾಡಿಕೊಂಡಿದ್ದರು. ಆಧ್ಯಾತ್ಮಿಕತೆ ಅವರ ವೇಷ ಭೂಷಣ, ಮಾತುಗಳಲ್ಲಿ ತುಂಬಿ ತುಳುಕುತ್ತಿದ್ದವು.

ಮತ್ತೊಬ್ಬ ನಟ ರಾಜ್‌ಕುಮಾರ್ ಅವರು ಯಾವುದೆ ಪಾತ್ರಕ್ಕೂ ಸಿದ್ಧಹಸ್ತರಾಗಿ ನಿಂತು ಧೈರ್ಯದಿಂದ ಅಭಿನಯಿಸಿ ಗೆಲ್ಲುವ ಜಾತಿಯನ್ನು ಹೊಂದಿದವರಾಗಿದ್ದರು. ಸಮುದಾಯದ ಹಿತವನ್ನು, ಸಾಮಾಜಿಕ ಆರೋಗ್ಯವನ್ನು ಕಾಪಾಡುವ ಹೊಣೆಗಾರಿಕೆಯನ್ನು ಹೊತ್ತುಕೊಂಡಿದ್ದರು.

ಕನ್ನಡದ ಕಟ್ಟಾ ಅಭಿಮಾನಿಯಾಗಿ ಕನ್ನಡಪರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಆದರೆ ವಿಷ್ಣುವರ್ಧನ್ ಅವರಲ್ಲಿ ಕನ್ನಡಪರ ಕಾಳಜಿ ಇರಲಿಲ್ಲ. ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸುವ ಆಸಕ್ತಿ ಇರಲಿಲ್ಲ. ಸಮಾಜಕ್ಕೆ ಮಾದರಿಯಾಗಬೇಕಾದ ಒಬ್ಬ ನಟನಲ್ಲಿದ್ದ ದೌರ್ಬಲ್ಯಗಳನ್ನು ಬಿಚ್ಚಿ ತೋರಿಸುವ ಪ್ರಯತ್ನವನ್ನು ಲೇಖನದಲ್ಲಿ ಮಾಡಿದ್ದಾರೆ.

'ಗೋ ಹತ್ಯೆ ನಿಷೇಧ ಸಾದುವೆ ? ' ಲೇಖನದಲ್ಲಿ ಶಿವರಾಮು ಕಾಡನಕುಪ್ಪೆ ಅವರು, ವೈಚಾರಿಕ ನೆಲೆಯಲ್ಲಿ, ವೈಜ್ಞಾನಿಕ ದೃಷ್ಟಿಕೋನದಲ್ಲಿ ಗೋವಿನ ಚಿಂತಾಜನಕ ಸ್ಥಿತಿಯನ್ನು ವಿವರಿಸಿದ್ದಾರೆ. ನಮ್ಮೆಲ್ಲರ ಬದುಕಿನ ಭವಿಷ್ಯದ ಬೆಳಕಿನ ಕಿರಣಗಳು ಮತ ಮೌಢ್ಯಗಳು, ಕುರುಡು ನಂಬಿಕೆ, ವ್ರತಗಳನ್ನು ತ್ಯಜಿಸಿದಾಗ ಕಾಣುತ್ತದೆ ಎಂದಿದ್ದಾರೆ. ಆಧುನಿಕ ಭಾರತದಲ್ಲಿ ಎಲ್ಲೆಲ್ಲೂ ಗೋಹತ್ಯೆ ನಿಷೇಧ ಮಾಡಬೇಕೆಂಬ ಹೋರಾಟ ಹುಟ್ಟಿಕೊಂಡಿದೆ. ಈ ಹೋರಾಟಕ್ಕೆ ಪ್ರಮುಖ ಕಾರಣ ಮುಸಲ್ಮಾನರು ಗೋವನ್ನು ಆಹಾರವಾಗಿ ಸೇವಿಸುತ್ತಾರೆಂಬುದು. ಇದಕ್ಕೆ ಪ್ರಬಲ ವಿರೋಧವಾಗಿ ನಿಂತಿರುವವರು ಹಿಂದೂ ಮತೀಯವಾದಿಗಳು. ಹೋರಾಟದಲ್ಲಿ ಮತೀಯವಾದಿಗಳ ಸ್ವಾರ್ಥವನ್ನು ಕಾಣಬಹುದು.

ಆಯಾ ಪರಿಸರಕ್ಕೆ ಅನುಗುಣವಾಗಿ ಆಹಾರ ಬಳಕೆ ಮಾಡುವುದು ಮನುಷ್ಯನ ಪದ್ಧತಿ. ಹಾಗೆಯೇ ಮುಸಲ್ಮಾನರು ಕೂಡ ತಮ್ಮ ಪರಿಸರಕ್ಕೆ ತಕ್ಕಂತೆ ಗೋ ಮಾಂಸದ ಸೇವನೆ ಮಾಡುವುದರಲ್ಲಿ ತಪ್ಪೇನು ಎಂಬುದು ಲೇಖಕರ ವಾದವಾಗಿದೆ. ಪುರಾತನ ಕಾಲದಿಂದಲೂ ಗೋ ಮಾಂಸ ಸೇವನೆಯು ನಡೆಯುತ್ತಾ ಬಂದಿದ್ದು, ಅದನ್ನು ಈಗ ತಡೆಯುವುದು ಯಾವ ನ್ಯಾಯ ? ಜೀವನ ಚಕ್ರವನ್ನು ನೋಡಿದಾಗ ಒಂದು ಪ್ರಾಣಿ ಆಹಾರಕ್ಕಾಗಿ ಮತ್ತೊಂದನ್ನು ಅವಲಂಬಿಸಿರುವುದು ಕಂಡು ಬರುತ್ತದೆ. ಹಾಗೆಯೇ ಮುಸಲ್ಮಾನರು ಗೋವನ್ನು ಅವಲಂಬಿಸಿದ್ದಾರೆ. ಭಾರತದಲ್ಲಿನ ಗೋವುಗಳು ಆಹಾರವಿಲ್ಲದೆ ಬಡಕಲಾಗಿ ನರಳುತ್ತಿರುವ ಕರುಣಾಜನಕ ಕಥೆಯನ್ನು ಲೇಖಕರು ವಿವರಿಸಿದ್ದಾರೆ.

'ಮೈಸೂರು ದಸರೆ : ನಿಜವಾದ ಸಾಂಸ್ಕೃತಿಕ ಸಂಭ್ರಮವಾಗಬೇಕು' ಲೇಖನವು ಮೈಸೂರಿನ ದಸರೆಯು ತನ್ನ ಹಿಂದಿನ ಸಾಂಸ್ಕೃತಿಕ ವೈಭವ ಕಳೆದುಕೊಂಡು ಕೇವಲ ಸರ್ಕಾರಿ ಕಾರ್ಯಕ್ರಮವಾಗಿ ಪರಿವರ್ತನೆಗೊಳ್ಳುತ್ತಿರುವುದರ ಬಗ್ಗೆ ವಿಷಾಧವನ್ನು ವ್ಯಕ್ತಪಡಿಸುತ್ತದೆ. ಹಿಂದೆ ರಾಜರು ವಿಜೃಂಭಣೆಯಿಂದ ನಾಡಹಬ್ಬವನ್ನು ಆಚರಿಸುತ್ತಿದ್ದರು. ಆದರೆ ಇಂದು ಪ್ರಜೆಗಳೇ ಆಚರಿಸುವ, ಭಾಗವಹಿಸುವ ಹಬ್ಬವಾಗಿ ರೂಪುಗೊಂಡಿದೆ. ಕವಿಗೋಷ್ಠಿಗಳೆಲ್ಲಾ ಆಕರ್ಷಣೆ ಕಳೆದುಕೊಂಡು ಆಡಂಬರದ ಆಗರವಾಗಿ ನಿಂತು ರಾಜಕೀಯ ವ್ಯಕ್ತಿಗಳಿಗೆ ಮಣೆಹಾಕಿ ಸ್ವಾಗತಿಸುವ

ಸ್ಥಿತಿಗೆ ತಲುಪಿದೆ. ಪ್ರತಿಯೊಂದು ಕಾರ್ಯಕ್ರಮಗಳನ್ನು ವ್ಯವಹಾರಿಕ ದೃಷ್ಟಿಯಲ್ಲಿ ನೋಡುವಂತಾಗಿದೆ. ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳು ದಸರೆಯನ್ನು ದುಡ್ಡು ಹೊಡೆಯುವ ಸುಲಭದ ದಂಧೆಯೆಂದು ಭಾವಿಸಿದ್ದಾರೆ. ಜಂಬೂಸವಾರಿಯಲ್ಲೂ ನೀರಸ ಪ್ರತಿಕ್ರಿಯೆ ಕಂಡು ಬಂದಿರುವುದನ್ನು ತಿಳಿಸಿದ್ದಾರೆ.

ಒಟ್ಟಾರೆ ಲೇಖನದ ಸಾರವೆಂದರೆ, ದಸರೆಯು ಬಂದು ಹೋಗುವ ಕಾಟಾಚಾರದ ಆಚರಣೆಯಾಗದೆ ನಮ್ಮ ಹಿಂದಿನ ಸಂಸ್ಕೃತಿಯನ್ನು ವಾಸ್ತವಕ್ಕೆ ತಂದು ಅರ್ಥೈಸುವ ಆಚರಣೆಯಾಗಬೇಕು. ವರ್ತಮಾನದ ಅಭಿವೃದ್ಧಿ ಕಾರ್ಯಗಳ ಪ್ರದರ್ಶನವಾಗದೆ, ಹೃದಯದ ಹಬ್ಬವಾಗಿ ಎಲ್ಲರೂ ಹರ್ಷದಿಂದ ಸಂಭ್ರಮದಿಂದ ಆಚರಿಸುವಂತಾಗಬೇಕು.

'ಕನ್ನಡಿಗರು ತರಲೆಗಳು' ಲೇಖನದಲ್ಲಿ ಎಸ್.ಎಲ್.ಬೈರಪ್ಪ ಅವರು ಬಲಪಂಥೀಯ ನಿಲುವಿನಿಂದ ಮತ್ತು ವೈದಿಕ ಸಿದ್ಧಾಂತದ ಫಲದಿಂದ ಸತ್ಯದ ಮಗ್ಗುಲುಗಳನ್ನು ಮರೆತು ತಮ್ಮ ವಾದವನ್ನು ಮಂಡಿಸುವ ಬಗೆಯನ್ನು ವಿವರಿಸಲಾಗಿದೆ. ಬಲಪಂಥೀಯರ ಆಡಳಿತವನ್ನು ಒಪ್ಪಿಕೊಂಡು, ಅವರು ಮಾಡುವ ತಪ್ಪುಗಳನ್ನು ಮುಚ್ಚಿಹಾಕುವಲ್ಲಿ ಭೈರಪ್ಪ ಅವರು ವಿಶೇಷವಾದ ಆಸಕ್ತಿ ತೋರಿಸಿರುವುದನ್ನು ಅಲ್ಲಗೆಳೆದಿದ್ದಾರೆ. ಬಿಜೆಪಿ ಪಕ್ಷವು ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ ಬಲಪಂಥೀಯ ತತ್ವಗಳಲ್ಲಿ ನಂಬಿಕೆಯಿಟ್ಟಿರುವ ಸನಾತನ ಒಪ್ಪಿತ ರೂಢಿಗತ ಮೌಲ್ಯವನ್ನು ಭಾರತದಲ್ಲಿ ಪುನರ್‌ಸ್ಥಾಪಿಸುವ ಹುನ್ನಾರದಲ್ಲಿತ್ತು. ಆ ಪಕ್ಷದ ಸರ್ಕಾರ ಸ್ವಜನ ಪಕ್ಷಪಾತ ಮತ್ತು ಭೂ ಹಗರಣಗಳಿಗೆ ಸಿಕ್ಕಿ ನಲುಗುತ್ತಿದ್ದಾಗ ಪತ್ರಿಕೆಯವರು ಅದರ ಬಗ್ಗೆ ಅಭಿಪ್ರಾಯ ಕೇಳಲಾಗಿ ಬೈರಪ್ಪ ಅವರು, ಕನ್ನಡಿಗರನ್ನು ತರಲೆಗಳೆಂದು ಕರೆದಿದ್ದಾರೆ.

ಇವರ ಪ್ರಕಾರ ಭ್ರಷ್ಟರ ವಿರುದ್ಧ ಜನ ದನಿ ಎತ್ತುವುದು ತರಲೆ ಕೆಲಸಗಳಾಗಿವೆ. ಒಬ್ಬ ಸಾಹಿತಿಯಾಗಿ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವ ಬದಲು ಮೌಢ್ಯತೆಯನ್ನು ತುಂಬುವ ಪ್ರಯತ್ನವನ್ನು ಯಾವ ರೀತಿಯಲ್ಲಿ ಮಾಡಿದ್ದಾರೆ ಎಂಬುದನ್ನು ವಿವರಿಸಿದ್ದಾರೆ. ಲೇಖಕರ ಕೊನೆಯ ಅಭಿಪ್ರಾಯವೆಂದರೆ ತರಲೆಗಳೆಂದರೆ ಸ್ಥಾಪಿತ ಮೌಲ್ಯಗಳ ಕೆಳಗೆ ವ್ಯವಸ್ಥಿತವಾಗಿ ನಡೆಯುತ್ತಿರುವ ಪ್ರಕ್ರಿಯೆಯನ್ನು ಪ್ರಶ್ನಿಸಿ, ರೂಢಿಗತವಾಗಿ ಬರುತ್ತಿರುವ ಪದ್ಧತಿಯನ್ನು ವಿಮರ್ಶಿಸಿ, ಹಾದಿ ಬದಲಿಸುವ ಮನಸ್ಥಿತಿಯ ಕ್ರಿಯಾಶೀಲ ನಡೆಯಾಗಿದೆ. ಸಮಾಜದ ವ್ಯವಸ್ಥೆಯಲ್ಲಿ ಬದಲಾವಣೆ ತರುವವರೆಲ್ಲಾ ತರಲೆಗಳಾಗಿದ್ದಾರೆ ಎಂಬುದು.

'ಭ್ರಷ್ಟಾಚಾರದ ಸಹಸ್ರಮುಖಿ ರೂಪಗಳು' ಲೇಖನವು ಭ್ರಷ್ಟಾಚಾರದ ವಿವಿಧ ರೂಪಗಳನ್ನು ವಿವರಿಸಿದೆ. ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿ ಎಲ್ಲಾಕಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ.

ಇದು ಇಂದು ಬಂದ ನಡೆಯಲ್ಲ ಪ್ರಾಚೀನ ಕಾಲದಿಂದಲೂ ನಡೆಯುತ್ತಾ ಬಂದಿರುವುದನ್ನು ಚಾಣಕ್ಯನ ಅರ್ಥಶಾಸ್ತ್ರದ ಕೃತಿಯಿಂದ ತಿಳಿಯಬಹುದಾಗಿದೆ. ಮನುಷ್ಯ ತನ್ನ ಸುಖದ ಪಾರಮ್ಯವನ್ನು ಈಡೇರಿಸಿಕೊಳ್ಳುವ ಸಲುವಾಗಿ ಭ್ರಷ್ಟಾಚಾರದ ಹಾದಿಯನ್ನು ಹಿಡಿದಿದ್ದಾನೆ. ಭ್ರಷ್ಟಾಚಾರವು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹರಿಯುವ ಪ್ರವಾಹದಂತೆ.

ನಮ್ಮ ಸಮಕಾಲೀನ ಸಮಾಜದಲ್ಲಿ ಭ್ರಷ್ಟಾಚಾರದ ವಿವಿದ ರೂಪಗಳಿವೆ. ಧಾರ್ಮಿಕ ಕ್ಷೇತ್ರದಲ್ಲಿನ ಭ್ರಷ್ಟಾಚಾರ, ಶೈಕ್ಷಣಿಕ ಕ್ಷೇತ್ರದ ಭ್ರಷ್ಟಾಚಾರ, ಆರ್ಥಿಕ ಕ್ಷೇತ್ರದಲ್ಲಿನ ಭ್ರಷ್ಟಾಚಾರ, ಸಾಂಸ್ಕೃತಿಕ ಕ್ಷೇತ್ರದಲ್ಲಿನ ಭ್ರಷ್ಟಾಚಾರ ಇನ್ನು ಮುಂತಾದವು. ಇವು ವಿಭಿನ್ನ ರೀತಿಯ ಭ್ರಷ್ಟಾಚಾರದ ಹಾದಿಯಲ್ಲಿ ತೊಡಗಿಸಿಕೊಂಡು ಹೇಗೆ ಜನರನ್ನು ಶೋಷಿಸುತ್ತಿವೆ ಎಂಬುದನ್ನು ಲೇಖನ ವಿವರವಾಗಿ ವಿವರಿಸಿದೆ. ಭ್ರಷ್ಟಾಚಾರವನ್ನು ತೊಡೆದುಹಾಕಲು ಒಬ್ಬರಿಂದ ಸಾಧ್ಯವಿಲ್ಲ. ಸಾಮೂಹಿಕ ಪ್ರಯತ್ನ ಮತ್ತು ಕಾನೂನು ನಿಯಮಾವಳಿಗಳಿಂದ ಸಾಧ್ಯವಾಗುತ್ತದೆ. ಸಮುದಾಯಕ್ಕೆ ನೈತಿಕ ಶಿಕ್ಷಣವನ್ನು ನೀಡಿ ಅಂತರಂಗ ಶುದ್ಧಿ ಮಾಡಿಕೊಳ್ಳುವಂತೆ ಮಾಡಿದರೆ ಪರಿವರ್ತನೆಯನ್ನು ಕಾಣಬಹುದು ಎಂದಿದ್ದಾರೆ.

ಚಿಂತನ ಬರಹಗಳು ವೈಚಾರಿಕ ನೆಲೆಯಲ್ಲಿ ಪ್ರತಿಯೊಂದು ಅಂಶವನ್ನು ಯೋಚಿಸುವ ನಿಟ್ಟಿನಲ್ಲಿ ತೊಡಗಿಸಿಕೊಂಡಿವೆ. ಇವುಗಳಿಂದ ಸಮಾಜದ ಮೌಢ್ಯತೆ, ಮೂಢನಂಬಿಕೆ, ಕೆಟ್ಟ ಆಚಾರ–ವಿಚಾರಗಳನ್ನು ಸ್ವಲ್ಪಮಟ್ಟಿಗಾದರೂ ಬದಲಾವಣೆಯ ಹಾದಿಗೆ ತರಬಹುದಾಗಿದೆ. ಇಂತಹ ಚಿಂತನಾಶೀಲತೆಯನ್ನು ಹೊಂದಿರುವ ಶಿವರಾಮು ಕಾಡನಕುಪ್ಪೆ ಅವರು ಭಿನ್ನ ಭಿನ್ನ ವಿಚಾರಗಳನ್ನು ತೆಗೆದುಕೊಂಡು ವೈಚಾರಿಕ ನೆಲೆಯಲ್ಲಿ ಅವುಗಳನ್ನು ಜನರಿಗೆ ತಿಳಿಸಿ, ಬದಲಾವಣೆಯ ಹಾದಿಗೆ ಜನರು ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡವಲ್ಲಿ ಹೆಚ್ಚಿನ ಶ್ರಮವಹಿಸಿದ್ದಾರೆ ಎಂದರೆ ತಪ್ಪಾಗಲಾರದು.

'ಬಯಲ ಬೆಳೆ' ಒಳ್ಳೆಯ ವೈಚಾರಿಕ ನಿಲುವುಗಳನ್ನು ಹೊಂದಿರುವ ಕೃತಿಯಾಗಿದೆ. ಇಲ್ಲಿ ನಿತ್ಯ ನಾವು ತಿಳಿಯಬಹುದಾದ ಹಲವಾರು ವಿಷಯಗಳು ಕ್ರೂಢಿಕರಣ ಮಾಡಿದ್ದಾರೆ. ಇಲ್ಲಿನ ಲೇಖನಗಳು ಸುಧಾ ವಾರಪತ್ರಿಕೆಯ 'ವಿಚಾರ ಲಹರಿ' ಅಂಕಣದಲ್ಲಿ ಭಿತ್ತರಗೊಂಡು ಜನಮನ್ನಣೆಗಳಿಸಿ ಉತ್ತಮ ಪ್ರತಿಕ್ರಿಯೆಗಳನ್ನು ಪಡೆದಿದೆ. ಅವರ ಕೆಲವು ಲೇಖನಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಅವುಗಳ ಪರಿಚಯ ಮಾಡಿಕೊಡಲಾಗಿದೆ. ಈ ಕೃತಿಯಲ್ಲಿ ಎಲ್ಲರೂ ತಿಳಿದುಕೊಳ್ಳಬೇಕಾದ ಮತ್ತಷ್ಟು ವೈಚಾರಿಕ ವಿಚಾರಗಳಿವೆ. ಅವುಗಳೆಂದರೆ ಛೆ, ಹೆಣ್ಣು ಮಗುವೇ ! ? ಕರೆ–ನೆರೆ, ಮುಳುಗು ಸೂರ್ಯನ ಮಾಗಿದ ಬದುಕು, ವರದಕ್ಷಿಣೆ ಒಂದು ಅವಮಾನ ಮುಂತಾದವು.

'ಕುಕ್ಕರಹಳ್ಳಿ' ಕೃತಿಯು ಚಿಂತನ ಬರಹವಾಗಿದ್ದು, ಕುಕ್ಕರಹಳ್ಳಿಯ ನೈಜ ಬದುಕು ಕಣ್ಣಿಗೆ ಕಟ್ಟುವಂತೆ ರಚನೆ ಮಾಡಿದ್ದಾರೆ. ಅಲ್ಲಿನ ಪ್ರತಿಯೊಂದು ಘಟನೆಗಳು ಕಣ್ಮುಂದೆ ನಡೆಯುತ್ತಿವೆಯೇನೋ ಅನ್ನುವಷ್ಟರ ಮಟ್ಟಿಗೆ ಪ್ರಾಮಾಣಿಕವಾಗಿ ಮೂಡಿಬಂದಿವೆ.

'ಭೂಮಿ ತೂಕದ ಕಣ್ಣೀರು' ಮಹಿಳಾ ಚಿಂತನೆಯನ್ನು ಹೊಂದಿರುವ ಕೃತಿಯಾಗಿದ್ದು ಹೆಣ್ಣು ಮಕ್ಕಳ ಕಷ್ಟ, ನೋವುಗಳನ್ನು ಚಿತ್ರಿಸಿದ್ದಾರೆ. ಕೃತಿಯ ಮೂಲಕ ಹೆಣ್ಣಿಗೆ ಗೌರವಯುತವಾಗಿ ಬಾಳಲು ಅವಕಾಶ ಮಾಡಿಕೊಡಬೇಕೆಂದು ಸಂದೇಶವನ್ನು ನೀಡಿದ್ದಾರೆ. ಇಲ್ಲದಿದ್ದರೆ ಅವಳ ಪಾಡು ಏನಾಗುವುದೆಂದು ಹಲವು ಉದಾಹರಣೆಗಳು ಕೃತಿಯಲ್ಲಿ ದೊರಕುತ್ತವೆ.

'ಅಭಿವ್ಯಕ್ತಿ' ಸಂಚಿಕೆಯಲ್ಲಿನ ಲೇಖನಗಳು ಉತ್ತಮವಾಗಿವೆ. ಅವುಗಳಲ್ಲಿ ಕೆಲವನ್ನು ಪರಿಚಯ ಮಾಡಿಕೊಡಲಾಗಿದೆ. ಮತ್ತೆ ಕೆಲವು ಪ್ರಮುಖವಾದವುಗಳೆಂದರೆ, ಮತಭ್ರಾಂತಿ ಮತ್ತು ಮೌಢ್ಯತೆಗಳ ನಡುವೆ, ಪೆಸರಾಸೆ. ಅದೊಂದು ನಾಗರಿಕರ್ಗೆ ಮೀಸಲಾಗಿರ್ಪ ಮನೋಜಾಡ್ಯಂ ಕಣಾ, ಹೌದು, ನಮ್ಮದು ಪ್ರಜಾಪ್ರಭುತ್ವ, ಡಾ.ರಾಮಮನೋಹರ ಲೋಹಿಯಾ : ಅಶಾಂತ ಸಂತ ಮುಂತಾದವುಗಳು.

೫. ಸಂಪಾದಿತ ಕೃತಿಗಳು :

ಶಿವರಾಮು ಕಾಡನಕುಪ್ಪೆ ಅವರು, ಸಂಪಾದಕರಾಗಿಯು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇವರ ಸಂಪಾದಕತ್ವಕ್ಕೆ ಪ್ರಮುಖ ಉದಾಹರಣೆಗಳು ಶಿವರಾಮ ಕಾರಂತರ ಹತ್ತು ಅಧ್ಯಯನಗಳು, ವಿನಾಯಕ ಒಂದು ಅಧ್ಯಯನ, ಚಂಪಾ ಆಯ್ದ ಕವನಗಳು, ಹಾ.ಮಾ.ನಾ. ಒಂದು ನೆನಪು ಇವುಗಳು ಪ್ರಮುಖವಾಗಿವೆ. ಈ ಅಧ್ಯಯನದಲ್ಲಿ ಶಿವರಾಮ ಕಾರಂತರ ಮತ್ತು ವಿನಾಯಕರ ಕೃತಿಗಳ ವಿಮರ್ಶೆ ಮಾಡಿರುವ ವಿವಿಧ ಲೇಖಕರ ಲೇಖನಗಳನ್ನು ಚರ್ಚಿಸಲಾಗಿದೆ.

ಶಿವರಾಮ ಕಾರಂತರು ಆಧುನಿಕ ಕನ್ನಡ ಸಾಹಿತ್ಯದ ಮಹತ್ವಪೂರ್ಣ ಲೇಖಕರಲ್ಲಿ ಪ್ರಮುಖರಾದವರು. ಇವರಲ್ಲಿ ಬದುಕಿನ ಬಗ್ಗೆ ವಿಶೇಷ ರೀತಿಯ ಕಾಳಜಿ ಇದ್ದು, ಕುತೂಹಲ, ಸಂಶೋಧನಾ ಮನೋಭಾವ, ಹೊಸ ಪೀಳಿಗೆಯ ಬರಹಗಾರರ ಮೇಲೆ ಹೆಚ್ಚಿನ ಪ್ರಭಾವ ಬೀರಿವೆ. ಬದುಕನ್ನು ಸಂಶೋಧಿಸುತ್ತಾ ಅದರಲ್ಲಿನ ಒಳಿತು ಕೆಡಕುಗಳ ಮೌಲ್ಯ ನಿರ್ಣಯಿಸುವ ವಿಚಾರವಾದಿ, ವಾಸ್ತವವಾದಿಯಾಗಿದ್ದಾರೆ. ಶಿವರಾಮ ಕಾರಂತರು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ದುಡಿದಿರುವ ಸೃಜನಶೀಲ ಸಾಹಿತಿಯಾಗಿದ್ದಾರೆ. ಇವರ ಕೆಲವು ಮುಖ್ಯ ಕೃತಿಗಳ ವಿಮರ್ಶೆಯನ್ನು ಇಲ್ಲಿ ಮಾಡಲಾಗಿದೆ.

'ಅಳಿದ ಮೇಲೆ' ಲೇಖನವು ಕಾದಂಬರಿಯಲ್ಲಿ ಮಾನವನ ಬಾಳಿನಲ್ಲಿ ಅಂತಿಮವಾಗಿ ಉಳಿಯುವುದೇನೆಂದು ಹುಡುಕಿ ನೋಡುವ ಪ್ರಯತ್ನವಿದೆ. ಕಾದಂಬರಿಯಲ್ಲಿ ನಾಯಕನಾದ ಯಶವಂತರಾಯರ ವ್ಯಕ್ತಿತ್ವವನ್ನು ತೆರೆದು ತೋರಿಸುವಲ್ಲಿ ಕಾರಂತರ ಪ್ರಮುಖ ಪಾತ್ರ ಎಷ್ಟರ ಮಟ್ಟಿಗೆ ಕಾರ್ಯನಿರ್ವಹಿಸಿದೆ ಎಂಬುದನ್ನು ಇಲ್ಲಿ ವಿಮರ್ಶಿಸಲಾಗಿದೆ.

'ಬೆಟ್ಟದ ಜೀವ' ಲೇಖನವು ಕಾದಂಬರಿಯಲ್ಲಿನ ಚಲನಶೀಲ ಪ್ರಗತಿ ಮತ್ತು ಭಿನ್ನ ಪರಿಸರದ ಮಧ್ಯದ ತಾಕಲಾಟವನ್ನು ವಿವರಿಸಿದೆ. ಗೋಪಾಲಯ್ಯ, ಶಂಕರಿ, ಶಿವರಾಮಯ್ಯ, ಶಂಭು ಈ ಪಾತ್ರಗಳ ಮೂಲಕ ಬಾಳಿನ ಸಾರ್ಥಕತೆಯನ್ನು ತಮ್ಮ ಬದುಕಿನ ಹಲವು ಮೊಗ್ಗುಲುಗಳಿಂದ ಕಂಡುಕೊಳ್ಳುವಂತೆ ಮಾಡಿಕೊಳ್ಳುವಲ್ಲಿ ಲೇಖಕನ ಪಾತ್ರವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

'ಮರಳಿ ಮಣ್ಣಿಗೆ' ಲೇಖನವು ಶೂದ್ರ ಪ್ರಪಂಚ, ಬ್ರಾಹ್ಮಣ ಪ್ರಪಂಚಕ್ಕೆ ಪೂರಕವಾಗಿರುವುದನ್ನು ವಿವೇಚಿಸಿದೆ. ಹೆಣ್ಣು ಮಕ್ಕಳು ಗಂಡಸರಂತೆ ತಮ್ಮನ್ನು ಬೇಸಾಯಕ್ಕೆ ಅಂಟಿಸಿಕೊಂಡು ಶೂದ್ರರಂತೆ ದುಡಿಯುವ ಕಾರಣವನ್ನು ವಿಶ್ಲೇಷಿಸಲಾಗಿದೆ.

‘ಮೂಕಜ್ಜಿಯ ಕನಸುಗಳು’ ಲೇಖನವು ಮೂಕಜ್ಜಿಯ ಅತೀಂದ್ರಿಯ ಶಕ್ತಿಯ ಮೇಲೆ ಬೆಳಕು ಚೆಲ್ಲಿ ಅವಳು ಸಂಪ್ರದಾಯಬದ್ಧವಾಗಿರುವ ಸಮಾಜಕ್ಕೆ ಹಾಕುವ ಪ್ರಶ್ನೆಗಳ ಬಗ್ಗೆ ವಿಮರ್ಶಿಸಿದ್ದಾರೆ.

‘ಗೀತ ನಾಟಕಗಳು’ ಲೇಖನವು ಕಾರಂತರ ಗೀತ ನಾಟಕಗಳ ರಚನೆಯ ಕಾಲ, ಉದ್ದೇಶವನ್ನು ತಿಳಿಸುತ್ತದೆ. ‘ಲವ ಕುಶ’, ‘ಸಾವಿತ್ರಿ ಸತ್ಯವಾನ’, ‘ಸೋಮಿಯ ಸೌಭಾಗ್ಯ’, ಗೀತ ನಾಟಕಗಳ ಪರಿಚಯವನ್ನು ವಿಮರ್ಶಾತ್ಮಕವಾಗಿ ಮಾಡಿಕೊಟ್ಟಿದ್ದಾರೆ.

‘ಅಪೂರ್ವ ಪಶ್ಚಿಮ’ ಲೇಖನವು ವಿದೇಶಿ ಪ್ರವಾಸ ಕಥನವನ್ನು ತಿಳಿಸುವ ಲೇಖನವಾಗಿದೆ. ವಿದೇಶಿಗರ ಸ್ವಭಾವ, ಗುಣಗಳನ್ನು, ಪಾಶ್ಚಾತ್ಯ ಕಲೆಗಳನ್ನು, ಸ್ಥಳಗಳನ್ನು ಪರಿಚಯಿಸುವ ವಿವರವನ್ನು ಒಳಗೊಂಡಿರುವ ಸಂಶೋಧನಾ ಲೇಖನವಾಗಿದೆ.

‘ಯಕ್ಷಗಾನ’ ಲೇಖನವು ಕಾರಂತರು ಯಕ್ಷಗಾನ ಜನಪದಕ್ಕೆ ನೀಡಿರುವ ಪ್ರಾಮುಖ್ಯತೆಯನ್ನು ತಿಳಿಸಿದೆ. ಯುಕ್ಷಗಾನದ ಹುಟ್ಟು, ಬೆಳವಣಿಗೆ, ನಾಶದ ಬಗ್ಗೆ ಇಲ್ಲಿ ವಿವೇಚಿಸಲಾಗಿದೆ. ಯಕ್ಷಗಾನ ಜಾನಪದಗಳಿಗೆ ಕಾರಂತರು ನೀಡಿರುವ ಕೊಡುಗೆಯನ್ನು ಇಲ್ಲಿ ವಿವರಿಸಲಾಗಿದೆ.

‘ಹಳ್ಳಿಯ ಹತ್ತು ಸಮಸ್ತರು’ ಲೇಖನವು ಒಂದು ಹಳ್ಳಿಯು ಸ್ವತಂತ್ರ್ಯದ ಹೊಸ್ತಿಲಲ್ಲಿ ಸಮಾಜದ ಬದಲಾವಣೆ ಮಾಡಿಕೊಂಡು, ಇದೆ ಬದಲಾವಣೆಯೇ ವಿನಾಶವನ್ನು ಸೂಚಿಸುವ ಹಂತಕ್ಕೆ ತಲುಪುವ ಚಿತ್ರಣವನ್ನು ವಿವರಿಸಲಾಗಿದೆ. ಜಾತಿ, ಮತದ ಹೊಡೆದಾಟದಲ್ಲಿ ತಮ್ಮ ಊರಿನವರಲ್ಲದ ಜನ ಬಂದು ಅಧಿಕಾರ ಸ್ಥಾಪನೆ ಮಾಡಿ, ಇಲ್ಲಿನ ಜನರನ್ನು ಹಿಡಿತದಲ್ಲಿಟ್ಟುಕೊಂಡು ಬಂಡವಾಳಗಾರರಾಗುವ ಮೂಲಕ ದಬ್ಬಾಳಿಕೆ ಮಾಡುವ ಚಿತ್ರಣವನ್ನು ವಿಮರ್ಶಕರು ಇಲ್ಲಿ ತಿಳಿಸಿಕೊಟ್ಟಿದ್ದಾರೆ.

‘ಬಾಳ್ವೆಯೇ ಬೆಳಕು’ ಲೇಖನವು ಕಾರಂತರಲ್ಲಿನ ವೈಚಾರಿಕ ಮೌಲ್ಯವನ್ನು ತಿಳಿಸುತ್ತದೆ. ಕಾರಂತರು ವಿಜ್ಞಾನ ಮತ್ತು ತತ್ವ ಜ್ಞಾನದ ಪ್ರಭಾವದಿಂದ ಹೊರಬಂದು ವೈಚಾರಿಕತೆಯಿಂದ ಬದುಕನ್ನು ನೋಡುವ ಪ್ರಯತ್ನವನ್ನು ವಿವರಿಸಿದ್ದಾರೆ.

‘ಕಲೆಯ ದರ್ಶನ’ ಲೇಖನವು ಕಲೆಯ ಹುಟ್ಟು, ಪ್ರಯೋಜನ, ಪ್ರಭಾವ, ಕಲಾವಿದರ ಪಾತ್ರ ಮುಂತಾದ ಕಲೆಯ ದರ್ಶನ ಮಾಡಿಸುವ ಪ್ರಯತ್ನ ಮಾಡಿದ್ದಾರೆ.

ಕನ್ನಡ ಸಂಸ್ಕೃತಿಯ ನಿರ್ಮಾಣದಲ್ಲಿ ಹೆಸರು ಮಾಡಿದ ಪ್ರಮುಖರಲ್ಲಿ ವಿನಾಯಕ ಕೃಷ್ಣ ಗೋಕಾಕರು ಒಬ್ಬರು. ಕಾವ್ಯಕ್ಕೆ ಛಂದಸ್ಸಿನ ಚೌಕಟ್ಟನ್ನು ಕಿತ್ತುಹಾಕಿ ಹೊಸ ರೀತಿಯ ನವೀನ ಶೈಲಿಯಲ್ಲಿ ಕವನ ರಚನೆ ಮಾಡುವಲ್ಲಿ ಹೆಜ್ಜೆಯಿಟ್ಟವರಲ್ಲಿ ಇವರು ಪ್ರಥಮಿಗರಾಗಿದ್ದಾರೆ. ವಿಶಿಷ್ಟ

ವಸ್ತುವನ್ನೊಳಗೊಂಡಿರುವ 'ಭಾರತ ಸಿಂಧು ರಶ್ಮಿ' ಉತ್ತಮ ಕೃತಿಯಾಗಿದೆ. ಕನ್ನಡ ಸಾಹಿತ್ಯಕ್ಕೆ ಇವರು ನೀಡಿರುವ ಹಲವು ಪ್ರಕಾರಗಳ ಕೃತಿಗಳನ್ನು ಸೈದ್ಧಾಂತಿಕ ದೃಷ್ಟಿಯಿಂದ ಮತ್ತು ವಿಭಿನ್ನ ದೃಷ್ಟಿಕೋನದಿಂದ ಪರಿಚಯಿಸುವ ಪ್ರಯತ್ನವನ್ನು 'ವಿನಾಯಕ ಒಂದು ಅಧ್ಯಯನ' ಕೃತಿಯು ಮಾಡಿದೆ.

'ವಿನಾಯಕರ ಕಾವ್ಯ ಮಾರ್ಗ' ಲೇಖನವು ಕನ್ನಡ ಸಾಹಿತ್ಯಕ್ಕೆ ಹೊಸ ಛಂದೋ ವೈವಿಧ್ಯವನ್ನು ನೀಡಿ ಪೂರ್ವ ಪಶ್ಚಿಮಗಳ ಸಾಹಿತ್ಯ ಸಂಸ್ಕೃತಿಗಳ ಸಂಗಮ, ನವ್ಯ ಹಾಗೂ ನವೋದಯದ ಸಮನ್ವಯಗಳು ಉಂಟಾಗಿರುವ ಬಗೆಯನ್ನು ವಿಮರ್ಶಿಸಲಾಗಿದೆ. ಸಮುದ್ರ ಗೀತೆಗಳು ಮತ್ತು ಇಂದಲ್ಲ ನಾಳೆ ಕವನ ಸಂಗ್ರಹಗಳ ವಿವೇಚನೆಯನ್ನು ಮಾಡಲಾಗಿದೆ.

'ಸಮುದ್ರ ಗೀತೆಗಳು' ಲೇಖನವು ವಿನಾಯಕರ ಕಾವ್ಯ ರಚನೆಯಲ್ಲಿ ಹೊಸ ವಸ್ತುವಿನ ಆಯ್ಕೆಯಲ್ಲಿನ ನಿಲುವು, ವೈಯುಕ್ತಿಕ ಅನುಭವವನ್ನು ಕಾವ್ಯದಲ್ಲಿ ಅಭಿವ್ಯಕ್ತಿಗೊಳಿಸಿರುವುದನ್ನು ವಿಮರ್ಶಿಸಲಾಗಿದೆ. ಸಮುದ್ರದ ವರ್ಣನೆಯನ್ನು ಚಿಂತನೆಯ ಮೂಲಕ ವ್ಯಾಖ್ಯಾನಿಸಿರುವುದನ್ನು ಇಲ್ಲಿ ವಿವೇಚಿಸಲಾಗಿದೆ.

'ಸಮುದ್ರದಾಚೆಯಿಂದ' ಇಂಗ್ಲೆಂಡಿನ ಸಾಮ್ರಾಜ್ಯವಾದಿ ಜನಾಂಗದ ಜೀವನವನ್ನು ತಮ್ಮ ಅನುಭವದ ಮೂಲಕ ವಿವರಿಸಿರುವ ಬಗೆಯನ್ನು, ಕೃತಿಯ ರಚನೆಯಲ್ಲಿ ವಿನಾಯಕರ ಸೂಕ್ಷ್ಮ ಗ್ರಹಿಕೆ, ವಿಚಾರ ಸಂಪತ್ತು, ಪ್ರಾಮಾಣಿಕ ಭಾವನೆಗಳನ್ನು, ಸರಳ ಭಾಷಾ ಶೈಲಿಯನ್ನು ವಿವೇಚಿಸಲಾಗಿದೆ.

'ನವ್ಯತೆ ಕೆಲವು ಪ್ರಶ್ನೆಗಳು' ಲೇಖನದಲ್ಲಿ ನವ್ಯತೆಯ ಲಕ್ಷಣ, ನವ್ಯ ಮತ್ತು ನವೋದಯಗಳ ವ್ಯತ್ಯಾಸಗಳ ಬಗ್ಗೆ ವಿವರಿಸಲಾಗಿದೆ. ನವ್ಯಕ್ಕೆ ಗೋಕಾಕರು ಕೊಟ್ಟಿರುವ ಲಕ್ಷಣಗಳನ್ನು ಗಮನಿಸಿದಾಗ ನವ್ಯ ಕಾವ್ಯದ ರೀತಿ ಆಗಲು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬರಲಾಗುತ್ತದೆ. ನವ್ಯ ಕಾವ್ಯ ನವೋದಯ ಕಾವ್ಯಕ್ಕಿಂತ ಭಿನ್ನವಾದುದಲ್ಲ. ಅದು ನವೋದಯದ ವಿಸ್ತೃತ ರೂಪವೆಂಬುದು ವಿಮರ್ಶಕರ ವಾದವಾಗಿದೆ.

'ಜನ ನಾಯಕ' ಲೇಖನವು ನಾಟಕದ ಸಾರಾಂಶವನ್ನು ವಿಸ್ತೃತವಾಗಿ ತಿಳಿಸುತ್ತದೆ. ನಾಟಕವು ಒಳಗೊಂಡಿರುವ ಪ್ರಮುಖ ಅಂಶವೊಂದನ್ನು ತಿಳಿಸುವ ಪ್ರಯತ್ನ ಮಾಡಿದೆ. ಆಳುವ ವರ್ಗಗಳು ವಂಶಪಾರಂಪರ್ಯವಾಗಿ ಬಂದ ಅಧಿಕಾರವನ್ನು ಸದುಪಯೋಗ ಪಡಿಸಿಕೊಳ್ಳುವ, ದುರುಪಯೋಗ ಪಡಿಸಿಕೊಳ್ಳುವ ಹಾಗೂ ಪಲಾಯನವಾಗುವ ರೀತಿಯನ್ನು ವಿವರಿಸಲಾಗಿದೆ. ಒಂದು ನಿರ್ದಿಷ್ಟ ಜಹಗೀರಿನೊಳಗೆ ಪ್ರಜಾಪ್ರಭುತ್ವ ಗುಪ್ತ ನದಿಯಾಗಿ ಹರಿಯುತ್ತಿರುವ ಅಂಶವನ್ನು

ಗೋಕಾಕರು ನಾಟಕದಲ್ಲಿ ಸೂಕ್ಷ್ಮವಾಗಿ ಚಿತ್ರಿಸಿರುವುದನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಸಹಜತೆಗೆ ಹತ್ತಿರವಾಗುವ ಅಂಶಗಳನ್ನು ಒಳಗೊಂಡ ನಾಟಕ ಇದಾಗಿದೆ.

'ಇಜ್ಜೋಡು ಒಂದು ವಿವೇಚನೆ' ಲೇಖನವು ಎರಡು ಕುಟುಂಬಗಳ ನಡುವಿನ ವಿರಸವನ್ನು ಬಿಚ್ಚಿ ತೋರಿಸುವುದಾಗಿದೆ. ಒಂದು ಹೆಣ್ಣು ಮತ್ತೊಂದು ಹೆಣ್ಣಿನ ಮೇಲೆ ದರ್ಪತೋರಿ ಕ್ರೌರ್ಯ ಮೆರೆಯುವ ಚಿತ್ರಣವನ್ನು ವಿವರಿಸಿದ್ದಾರೆ. ಸ್ತ್ರೀ ಶಿಕ್ಷಣದ ಅಗತ್ಯತೆಯ ದನಿಯನ್ನು ಇಲ್ಲಿ ಗುರುತಿಸಿದ್ದಾರೆ.

'ವಿನಾಯಕರ ಭಾರತ ಸಿಂಧು ರಶ್ಮಿ ಒಂದು ಪರಿಚಯ' ಲೇಖನದಲ್ಲಿ ಭಾರತ ಸಿಂಧು ರಶ್ಮಿ ಮಹಾ ಕಾವ್ಯದ ಪ್ರಮುಖ ಅಂಶಗಳತ್ತ ಗಮನಹರಿಸಿ ಕಥಾ ಸಾರಾಂಶವನ್ನು ವಿವರಿಸಲಾಗಿದೆ. ವೈದಿಕ ಪರಂಪರೆಯ ಆಳಕ್ಕೆ ಆಧುನಿಕ ಪ್ರಜ್ಞೆಯೊಂದಿಗೆ ಇಳಿಯುವ ಗೋಕಾಕರ ಪ್ರಯತ್ನವನ್ನು ವಿವೇಚಿಸಲಾಗಿದೆ. ವಿಶ್ವಾಮಿತ್ರನ ಪಾತ್ರದ ಮೂಲಕ ಸಮಕಾಲೀನ ಸಂಕೀರ್ಣ ಯುಗವನ್ನು ಧ್ವನಿಸುವ ಪ್ರಯತ್ನ ನಡೆದಿದೆ.

'ಬಾಳದೇಗುಲದಲ್ಲಿ ಒಂದು ಹೊಸ ಬಗೆಯ ಕಾವ್ಯ' ಲೇಖನದಲ್ಲಿ ಗೋಕಾಕರು ಕಾವ್ಯದಲ್ಲಿ ಹೊಸ ಬಗೆಯನ್ನು ತರಲು ಪ್ರಯತ್ನಿಸಿದರೂ, ನವೋದಯದ ಪ್ರಭಾವಕ್ಕೆ ಒಳಗಾಗಿರುವುದನ್ನು ಗುರುತಿಸಿದೆ. ಇಲ್ಲಿನ ಕವಿತೆಗಳ ವಸ್ತುವಿನ ಬಗ್ಗೆ ಸೂಕ್ಷ್ಮವಾಗಿ ವಿವರಿಸಲಾಗಿದೆ. ಕೌಟುಂಬಿಕ ವಾತಾವರಣ ಕವಿತೆಗಳಲ್ಲಿ ಸಹಜವಾಗಿ ಕಂಡು ಬಂದಿರುವುದನ್ನು ಗುರುತಿಸಿದ್ದಾರೆ. ಸಾಮಾಜಿಕ ಮತ್ತು ರಾಜಕೀಯದ ಹಿನ್ನಲೆಯುಳ್ಳ ಕವನಗಳನ್ನು ಗುರುತಿಸಿದ್ದಾರೆ. ಸ್ವಾತಂತ್ರ್ಯದ ನಂತರದ ಭಾರತದ ಪರಿಸ್ಥಿತಿ, ನಿರಾಶೆಯ ಮುಖವನ್ನು ಕವನಗಳಲ್ಲಿ ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ವಿವರಿಸಿದ್ದಾರೆ. ಇಲ್ಲಿನ ಒಂದೊಂದು ಕವನಕ್ಕೂ ಪ್ರತ್ಯೇಕ ಅಸ್ತಿತ್ವವಿರುವುದನ್ನು ತೋರಿಸಿದ್ದಾರೆ.

'ವಿನಾಯಕರ ಕಾವ್ಯ ರೂಪ ಮತ್ತು ಅಭಿವ್ಯಕ್ತಿ' ಲೇಖನವು ವಿನಾಯಕರು ತಮ್ಮ ಕಾವ್ಯ ರಚನೆಗೆ ಆರಿಸಿಕೊಂಡ ಕಾವ್ಯ ವಸ್ತು ಅನುಭವ ಮತ್ತು ಪ್ರಮುಖ ಸ್ಥಳಗಳ ವರ್ಣನೆಯನ್ನೊಳಗೊಂಡಿದೆ. ವಿನಾಯಕರು ರಚಿಸಿರುವ ಕವಿತೆಗಳ ಮೇಲೆ ವಚನ ಸಾಹಿತ್ಯದ ಪ್ರಭಾವವಿರುವುದನ್ನು ಉದಾಹರಣೆಗಳ ಮೂಲಕ ಸಮರ್ಥಿಸಿದ್ದಾರೆ. ಕಾವ್ಯಗಳ ರಚನೆಯಲ್ಲಿ ವಿವಿಧ ಛಂದಸ್ಸಿನ ಬಳಕೆ ಮಾಡಿರುವುದನ್ನು ಗುರುತಿಸಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರು ಆಧುನಿಕ ಕನ್ನಡ ಸಾಹಿತ್ಯದಲ್ಲಿನ ಮಹಾನ್ ದಿಗ್ಗಜರುಗಳ ವಿವಿಧ ಕೃತಿಗಳ ಮೇಲೆ ಮಾಡಿರುವ ವಿಮರ್ಶೆಗಳನ್ನು ಸಂಪಾದಿಸಿದ್ದಾರೆ. ಮುಂದಿನ ಪೀಳಿಗೆಗೆ ಸಹಾಯವಾಗುವಂತೆ ಮಾಡಿರುವ ಅವರು, ನಿಜಕ್ಕೂ ಉತ್ತಮ ಸಂಪಾದಕರಲ್ಲೊಬ್ಬರಾಗಿದ್ದಾರೆ. ಕನ್ನಡ ಪ್ರಬಂಧಗಳು, ಆಧುನಿಕ ಕನ್ನಡ ಕಾವ್ಯ, ಸುವರ್ಣ ಪ್ರಬಂಧ, ಆಧುನಿಕ ಕನ್ನಡ ಕಥೆಗಳು ಶಿವರಾಮು ಅವರ ಪ್ರಮುಖ ಸಂಪಾದನ ಕೃತಿಗಳಾಗಿವೆ.

ಅಧ್ಯಾಯ –೪

ಶಿವರಾಮು ಕಾಡನಕುಪ್ಪೆ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹೋರಾಟ

ಶಿವರಾಮು ಕಾಡನಕುಪ್ಪೆ ಅವರು ಹುಟ್ಟಿದ್ದ ಒಂದು ಸಣ್ಣ ಹಳ್ಳಿಯಲ್ಲಿಯಾದರೂ ಅವರಲ್ಲಿ ಹೋರಾಟ ಮತ್ತು ವೈಚಾರಿಕ ಪ್ರಜ್ಞೆ ಬಾಲ್ಯದಿಂದಲೆ ಬೆಳೆದು ಬಂದಿತ್ತು. ಕಾಲೇಜು ದಿನಗಳಲ್ಲಿ ಅವರು ರೈತಪರ ಹೋರಾಟಗಳಿಂದ ಹೆಚ್ಚು ಪ್ರಭಾವಿತರಾದರು. ರಾಷ್ಟ್ರಕವಿ ಕುವೆಂಪು ಅವರ ಆದರ್ಶವನ್ನು ಹೆಚ್ಚಾಗಿ ಮೈ ಗೂಡಿಸಿಕೊಂಡಿದ್ದ ಇವರು ರಾಮಮನೋಹರ ಲೋಹಿಯ, ಜಯಪ್ರಕಾಶ್ ನಾರಾಯಣ ಅವರ ಪ್ರಭಾವಕ್ಕೆ ಒಳಗಾಗಿ ಹೋರಾಟಕ್ಕೆ ದುಮುಕಿದರು.

ಸಮಾಜದಲ್ಲಿ ನಡೆಯುವ ಅವ್ಯವಸ್ಥೆಗಳ ವಿರುದ್ಧ ಧ್ವನಿ ಎತ್ತುವವರ ಸಾಲಿನಲ್ಲಿ ಇವರು ಸಹ ಮೊದಲಿಗರಾಗಿದ್ದರು. ೮೦ರ ದಶಕದಲ್ಲಿ ರೈತಪರ ಚಳವಳಿಯಲ್ಲಿ ಭಾಗವಹಿಸಿ ಜೈಲು ವಾಸವನ್ನು ಅನುಭವಿಸಿದ್ದಾರೆ. ಸಮಾಜದ ಎಲ್ಲಾ ರಂಗಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು ರೈತಪರ ಹೋರಾಟ ಹಾಗೂ ಪರಿಸರ ಸಂರಕ್ಷಣೆಯ ಹೋರಾಟದಲ್ಲಿ ಸದಾ ಮೊದಲಿಗರಾಗಿದ್ದರು. ಸದಾ ಸಮಾಜಮುಖಿ ಚಿಂತನೆಯನ್ನು ಹೊಂದಿದ್ದ ಇವರು ಮತ್ತೊಬ್ಬರಿಗೆ ತಮ್ಮನ್ನೆ ಆದರ್ಶವಾಗಿ ಒಡ್ಡಿಕೊಂಡಿದ್ದರು.

ಪರಿಶ್ರಮ ಮತ್ತು ಪರಿವರ್ತನೆಯಿಂದ ಎಲ್ಲವೂ ಸಾಧ್ಯ ಎಂದು ತಿಳಿದಿದ್ದ ಇವರು ಬೇರೊಬ್ಬರಿಗೆ ಸಲಹೆ ನೀಡುವ ಮೊದಲು ನಾವು ಪರಿವರ್ತನೆಯಾಗಬೇಕು ಎಂಬ ಮನೋಭಾವನೆಯಿಟ್ಟುಕೊಂಡಿದ್ದರು ಎಂಬುದಕ್ಕೆ ಅವರು ಅಂತರ್ಜಾತಿ ಹಾಗೂ ಸರಳ ವಿವಾಹವಾಗಿರುವುದೆ ನಿದರ್ಶನವಾಗಿದೆ. ಅಲ್ಲದೆ ಬದುಕಿನಲ್ಲಿ ಸರಳತೆಯನ್ನು ಅಳವಡಿಸಿಕೊಳ್ಳುವ ಮೂಲಕ ಸಾಮಾಜಿಕ ಕಳಕಳಿಗೆ ತಮ್ಮನ್ನು ತೆರೆದುಕೊಂಡಿದ್ದಾರೆ.

ಇವರು ಎಂದಿಗೂ ಕರ್ತವ್ಯದಿಂದ ವಿಮುಖರಾದವರಲ್ಲ. ಸದಾ ಜನಪರ ಮತ್ತು ರೈತಪರ ಕಾಳಜಿಯನ್ನು ಹೊಂದಿರುವ ಇವರು, ಮೈಸೂರು, ಚಾಮರಾಜನಗರ, ಮಂಡ್ಯದ ಭಾಗಗಳಲ್ಲಿ ಎಲ್ಲಿಯೇ ರೈತ ಚಳುವಳಿ ನಡೆದರೂ ಇವರು ಖಾಯಂ ಆಹ್ವಾನಿತರಾಗಿ ಭಾಗವಹಿಸುತ್ತಿದ್ದರು. ಇದು ಅವರ ಸಾಮಾಜಿಕ ಚಳುವಳಿಯ ಕಾರ್ಯತತ್ಪರತೆಯನ್ನು ತೋರಿಸುತ್ತದೆ.

ಹೋರಾಟದ ಮೇಲೆ ಇವರು ಎಂದಿಗೂ ನಂಬಿಕೆ ಕಳೆದುಕೊಂಡವರಲ್ಲ. ಯಾವುದೆ

ಸಿದ್ಧಾಂತ, ಪಂಥ ಅಥವಾ ಪ್ರಕಾರವಿದ್ದರೂ ಪ್ರಾಮಾಣಿಕವಾದ ಮತ್ತು ತೀವ್ರವಾದ ಸ್ಪಂದನೆಯನ್ನು ನೀಡುವ ಜಾಯಮಾನ ಇವರದು. ಯಾವುದೆ ಪ್ರಗತಿಪರ ಚಳುವಳಿ ಅಥವಾ ಪ್ರತಿಭಟನೆಯಲ್ಲಿ ಶಿವರಾಮು ಕಾಡನಕುಪ್ಪೆ ಅವರದು ಸದಾ ಮುಂಚೋಣಿಯ ಪಾತ್ರ. ಅದು ಭಾಷೆಯ ಪರವಾಗಿರಲಿ, ಮಹಿಳೆಯ ಪರವಾಗಿರಲಿ ಅಥವಾ ರೈತರ ಪರವಾಗಿರಲಿ ಇವರು ಸಕ್ರಿಯವಾಗಿತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು.

ಪರಿವರ್ತನಾಶೀಲ ಸಮಾಜದಲ್ಲಿ ವೈಚಾರಿಕ ಉದಾರವಾದಿ ನೆಲೆಯಲ್ಲಿ ಸಮಾಜವನ್ನು ಗುಣಾತ್ಮಕವಾಗಿ ಕಟ್ಟುವ ಆಸಕ್ತಿಯುಳ್ಳ ಶಿವರಾಮು ಕಾಡನಕುಪ್ಪೆ ಅವರು, ಬಂಡಾಯ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜಾತಿ ರಹಿತ, ವರ್ಗ ರಹಿತ ಸಮಾಜದ ದೃಷ್ಟಿಯಿಟ್ಟುಕೊಂಡಿರುವ ಶಿವರಾಮು ಅವರು, ಸಾಹಿತ್ಯದಲ್ಲಿ ಪಂಥ ಸಿದ್ಧಾಂತಗಳಿದ್ದರು ಅವುಗಳನ್ನು ಮೀರುವ ಮೂಲಕ ತಮ್ಮ ಬರವಣಿಗೆಯಲ್ಲಿ ವೈಜಾರಿಕ ಪ್ರಜ್ಞೆಯನ್ನು ಕಾಯ್ದುಕೊಂಡಿದ್ದಾರೆ.

ಇವರ ಪ್ರತಿಯೊಂದು ಕೃತಿಯಲ್ಲಿಯೂ ಜೀವನ ಪ್ರೀತಿ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಕಾಣಬಹುದಾಗಿದೆ. ಸಮಾಜದಲ್ಲಿನ ಭ್ರಷ್ಟ ವ್ಯವಸ್ಥೆಯೊಂದಿಗೆ ಇವರು ಎಂದಿಗೂ ರಾಜೀಮಾಡಿಕೊಂಡಿರುವುದನ್ನು ಇವರ ಸಾಹಿತ್ಯಗಳಲ್ಲಿ ಕಾಣಲು ಸಾಧ್ಯವಾಗುವುದಿಲ್ಲ. ಇವರು ರಚಿಸಿರುವ ಪ್ರತಿಯೊಂದು ಕೃತಿಗಳಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಅವ್ಯವಸ್ಥೆಯ ವಿರುದ್ಧದ ಧ್ವನಿ ಇದ್ದೆ ಇದೆ. ಇದರಿಂದಲೆ ಇವರು ಸಾಹಿತ್ಯ ನೆಲೆಯಲ್ಲಿ ಬಂಡಾಯಗಾರನಾಗಿ ಗುರ್ತಿಸಿಕೊಂಡಿರುತ್ತಾರೆ. ಇವರ 'ಕುಕ್ಕರಹಳ್ಳಿ' ಹಾಗೂ 'ವಸುಂಧರೆ' ಕೃತಿಗಳಲ್ಲಿ ಪರಿಸರ ಪ್ರಜ್ಞೆ ಮತ್ತು ಕಾಳಜಿಯನ್ನು ಕಾಣಬಹುದಾಗಿದೆ. ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ಎಷ್ಟರ ಮಟ್ಟಿಗೆ ನಾಶ ಮಾಡುತ್ತಿದ್ದಾನೆ ಎಂಬುದರ ಬಗ್ಗೆ ವಿವರವಾಗಿ ಇವರು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ.

ಗಣಿಗಾರಿಕೆಗೆ ಪರಿಸರ ನಾಶ ಮಾಡುತ್ತಿರುವ ಭ್ರಷ್ಟ ವ್ಯವಸ್ಥೆಯ ವಿರುದ್ಧ ತಮ್ಮ ಸಾಹಿತ್ಯದಲ್ಲಿ ನೇರವಾಗಿ ಇವರು ಧನಿ ಎತ್ತಿದ್ದಾರೆ. ವ್ಯಕ್ತಿಯ ದುರಾಸೆಗೆ ಇಡಿ ಪರಿಸರ ಸಂಪತ್ತು ವಿನಾಶದ ಹಂಚಿಗೆ ತಲುಪುವ ಸನ್ನಿವೇಶವನ್ನು ಸಾಹಿತ್ಯದ ಮೂಲಕ ಚಿತ್ರಿಸಿದ್ದಾರೆ. ಇವರು ತಮ್ಮ ಬರವಣಿಗೆಯಲ್ಲಿ ಎಲ್ಲಿಯೂ ವ್ಯವಸ್ಥೆಯೊಂದಿಗೆ ರಾಜಿಯಾಗಿರುವುದನ್ನು ನಾವು ಕಾಣಲು ಸಾಧ್ಯವಾಗುವುದಿಲ್ಲ.

ಸಂದರ್ಶನ ಲೇಖನ:

ಪ್ರಶ್ನೆ : ಬಾಲ್ಯದಲ್ಲಿಯೇ ನಿಮಗೆ ಪ್ರಕೃತಿಯ ಮೇಲೆ ಪ್ರೀತಿ ಹುಟ್ಟಲು ಕಾರಣವೇನು ?

ಪ್ರತಿಕ್ರಿಯೆ : ನಾನು ಹುಟ್ಟಿದ್ದು ರಾಮನಗರದ ಒಂದು ಪಟ್ಟ ಹಳ್ಳಿ. ನನ್ನ ಹಳ್ಳಿಯ ಸುತ್ತಲು ಬೆಟ್ಟ, ಗುಡ್ಡಗಳ ರಮ್ಯ ಪರಿಸರವಿತ್ತು. ನನ್ನ ಕುಟುಂಬ ರೈತ ಕುಟುಂಬವಾಗಿದ್ದರಿಂದ ಭೂಮಿಯ ಒಡನಾಟ ರಕ್ತಗತವಾಗಿಯೇ ಬಂದಿತ್ತು. ನಾನು ಶಾಲೆಯಲ್ಲಿ ಕಲಿತ ವಿದ್ಯೆಗಿಂತ ಜನರು ಮತ್ತು ಪರಿಸರದ ನಡುವೆ ಕಲಿತದ್ದೆ ಹೆಚ್ಚು. ಇದರಿಂದಾಗಿಯೇ ಜನ ಸಾಮಾನ್ಯರು ಮತ್ತು ಪರಿಸರದ ಮೇಲೆ ನನಗೆ ಪ್ರೀತಿ ಮತ್ತು ಕಳಕಳಿ ಬೆಳೆಯಲು ಕಾರಣವಾಯಿತು.

ಪ್ರಶ್ನೆ : ಪ್ರಗತಿಶೀಲ ಸಾಹಿತ್ಯದ ಬಗ್ಗೆ ನಿಮ್ಮಲ್ಲಿ ಆಸಕ್ತಿ ಬೆಳೆದ ಬಗೆ ಹೇಗೆ ?

ಪ್ರತಿಕ್ರಿಯೆ : ನಾನು ಮಾಧ್ಯಮಿಕ ಶಾಲೆಯನ್ನು ರಾಮನಗರದಲ್ಲಿ ಕಲಿಯುತ್ತಿದ್ದ ವೇಳೆಯಲ್ಲಿ, ಅಲ್ಲಿ ಸರ್ಕಾರಿ ಗ್ರಂಥಾಲಯವಿತ್ತು. ಗ್ರಂಥಾಲಯದಿಂದ ಪುಸ್ತಕ ತಂದು ಓದಲು ಸದಸ್ಯನಾಗುವಷ್ಟು ಶಕ್ತಿ ನನ್ನಲಿರಲಿಲ್ಲ. ಇದರಿಂದಾಗಿ ಬಿಡುವಿನ ವೇಳೆಯಲ್ಲಿ ಗ್ರಂಥಾಲಯಕ್ಕೆ ಭೇಟಿ ಕೊಟ್ಟು ೫-೬ ಗಂಟೆಗಳ ಕಾಲ ಓದುತ್ತಿದ್ದೆ.

೧೯೬೦ರ ದಶಕದಲ್ಲಿ ಪ್ರಕಟವಾಗಿದ್ದ ಪ್ರಗತಿಶೀಲ ಚಿಂತಕರಾದ ಬಸವರಾಜ ಕಟ್ಟಿಮನಿ, ನಿರಂಜನ, ಅ.ನ.ಕೃಷ್ಣರಾಯರು, ತ.ರಾ.ಸು, ಪು.ತಿ.ನ, ಚದುರಂಗ ಅವರ ಕೃತಿಗಳ ಅಭ್ಯಾಸ ನನ್ನನ್ನು ಸಾಹಿತ್ಯದ ಕಡೆಗೆ ಮುಖ ಮಾಡುವಂತೆ ಪ್ರೇರೇಪಿಸಿತು. ಪ್ರೌಢಶಾಲೆಗೆ ಕಾಲಿಟ್ಟ ಸಂದರ್ಭದಲ್ಲಿ ಕುವೆಂಪು ಮತ್ತು ಬೇಂದ್ರೆ ಪ್ರಭಾವಕ್ಕೆ ಒಳಗಾದೆ. ಈ ಸಂದರ್ಭದಲ್ಲಿ ನನಗೆ 'ಸಾಹಿತ್ಯ ಎನ್ನುವುದು ಜನಪ್ರಿಯತೆಯ ಹಾದಿಯಲ್ಲಿರುವುದಲ್ಲ. ಅದು ಗಂಭೀರವಾದ ಸಮಸ್ಯೆಗಳನ್ನು ನಿರ್ವಹಿಸಬಲ್ಲದು ಎಂಬ ಸತ್ಯ ಗೋಚರವಾಯಿತು.

ಇದೆ ಸಂದರ್ಭದಲ್ಲಿ ರಾಮನಗರದಲ್ಲಿ ಸಮಾಜವಾದಿ ಹೋರಾಟರಾರರು ಹಾಗೂ ಅಂದಿನ ವಿಧಾನಸಭೆಯಲ್ಲಿ ಬೆಂಕಿನ ಚೆಂಡಿನಂತೆ ಮಾತನಾಡುತ್ತಿದ್ದ ಹೋರಾಟಗಾರ ಶಾಂತವೇರಿ ಗೋಪಾಲಗೌಡ ಶಿಷ್ಯ ಕೆ.ಕೃಷ್ಣಗೋಪಾಲ್ ಅವರು ರಾಮಮನೋಹರ ಲೋಹಿಯಾ ಅವರ ಬಗ್ಗೆ ಪತ್ರಿಕೆಯಲ್ಲಿ ಬರೆಯುತ್ತಿದ್ದ ಲೇಖನಗಳಿಂದ ಹೆಚ್ಚು ಪ್ರಭಾವಿತನಾದೆ. ಇದೆ ಸಂದರ್ಭದಲ್ಲಿ ಕೆ.ಪಿ.ಪೂರ್ಣ ಚಂದ್ರ ತೇಜಸ್ವಿ ಹಾಗೂ ಯು.ಆರ್.ಅನಂತಮೂರ್ತಿ ಅವರ ಪ್ರಭಾವದಿಂದ ಸಾಹಿತ್ಯವನ್ನು ಮತ್ತೊಂದು ಧಿಕ್ಕಿನಲ್ಲಿ ನೋಡಿ ಗ್ರಹಿಸತೊಡಗಿದೆ.

ಪ್ರಶ್ನೆ : ಕುವೆಂಪು, ಗಾಂಧಿ, ಅಂಬೇಡ್ಕರ್ ಪ್ರಭಾವ ಬೀರಿದ್ದು ಹೇಗೆ ?

ಪ್ರತಿಕ್ರಿಯೆ : ಮಂಡ್ಯದಲ್ಲಿ ಪದವಿ ವ್ಯಾಸಂಗ ಮುಗಿಸಿದ ನಾನು, ೧೯೭೦ರ ದಶಕದಲ್ಲಿ ಎಂ.ಎ. ಶಿಕ್ಷಣ ಪಡೆಯಲು ಮೈಸೂರಿಗೆ ಬಂದಾಗ ಹೊಸ ಜಾಗೃತಿಗಳ ಒಳನೋಟದ ಕಿಟಕಿಗಳು ನನಗೆ ತೆರೆದುಕೊಂಡವು. ಅಂದು ಮೈಸೂರಿನಲ್ಲಿಯೇ ಇದ್ದ ಕುವೆಂಪು ಅವರು ನನಗೆ ಹೆಚ್ಚು ಗಮನ ಸೆಳೆದರು. ಪೂರ್ಣಚಂದ್ರ ತೇಜಸ್ವಿ ಹಾಗೂ ಪ್ರೊ.ಎಂ.ಡಿ.ನಂಜುಂಡ ಸ್ವಾಮಿ ಅವರುಗಳು 'ಲೋಹಿಯಾ ಅವರ ಆಯ್ದ ಬರಹಗಳು' ಕೃತಿಯನ್ನು ಹೊರ ತಂದರು. ಇದಕ್ಕೆ ಕುವೆಂಪು ಅವರು ಮುನ್ನುಡಿಯನ್ನು ಬರೆದಿದ್ದರು. ಇದು ನನ್ನ ಮೇಲೆ ಆಳವಾದ ಪ್ರಭಾವ ಬೀರಿದುದೆ ಅಲ್ಲದೆ ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಲೋಹಿಯಾ ಅವರ ಕೃತಿಗಳನ್ನು ಅಭ್ಯಾಸ ಮಾಡಲು ಆಸಕ್ತಿ ಬರುವಂತೆ ಮಾಡಿತು.

ಹಾಗೇ ನೋಡಿದರೆ ಮಹಾತ್ಮಾ ಗಾಂಧೀಜಿಯವರ ಪ್ರಭಾವ ನನ್ನ ಮೇಲೆ ತಡವಾಗಿ ಆಯಿತು ಎಂದೆ ಹೇಳಬೇಕು. ಲೋಹಿಯಾ ಅವರ ಬಗ್ಗೆ ಆಂಗ್ಲ ಭಾಷೆಯಲ್ಲಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಬಗ್ಗೆ ವೈಚಾರಿಕ ನೆಲೆಗಟ್ಟಿನ ಮೇಲೆ ಚಿಂತನೆ ನಡೆಸತೊಡಗಿದೆ. ನನ್ನ ಬದುಕಿನಲ್ಲಿ ಗಾಂಧೀಜಿ, ಲೋಹಿಯಾ ಮತ್ತು ಅಂಬೇಡ್ಕರ್ ಅವರು ನನ್ನ ಆಲೋಚನೆಗಳ ಮೇಲೆ ಹೆಚ್ಚು ಪ್ರಭಾವ ಬೀರಿದ ವ್ಯಕ್ತಿಗಳಾಗಿದ್ದಾರೆ.

ಪ್ರಶ್ನೆ : ನೀವು ಸಾಹಿತ್ಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದು ಯಾವಾಗ ?

ಪ್ರತಿಕ್ರಿಯೆ : ಗಾಂಧೀಜಿ, ಲೋಹಿಯಾ ಮತ್ತು ಅಂಬೇಡ್ಕರ್ ಅವರ ಕೃತಿಗಳನ್ನು ಹೆಚ್ಚಾಗಿ ಓದಿ ಗ್ರಹಿಸಿಕೊಂಡ ನಂತರ, ಸೈದ್ಧಾಂತಿಕ ಹಿನ್ನಲೆ, ಸಾಮಾಜಿಕ ನೆಲೆಗಟ್ಟಿನ ಮೇಲೆ ಸಾಹಿತ್ಯವನ್ನು ನೋಡುವ ಮನೋಭಾವ ನನ್ನಲ್ಲಿ ಮೂಡಿತು. ಇದನ್ನು ಕೃತಿ ರೂಪಕ್ಕಿಳಿಸಲು ಆಲೋಚಿಸಿದ ನಾನು ೧೯೭೬ರಲ್ಲಿ 'ಸಮನ್ವಯ' ಕೃತಿಯನ್ನು ಪ್ರಕಟಿಸುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದೆ.

ಪ್ರಶ್ನೆ : ವಿಮರ್ಶಾ ಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಲು ಕಾರಣವೇನು ?

ಪ್ರತಿಕ್ರಿಯೆ : ಮೊದಲೆ ಹೇಳಿದಂತೆ ಸಾಹಿತ್ಯ ಎನ್ನುವುದು ಜನಪ್ರಿಯತೆಯ ಹಾದಿಯಲ್ಲಿರುವುದಲ್ಲ ಅದನ್ನು ಗಂಭೀರವಾದ ಸಮಸ್ಯೆಗಳನ್ನು ನಿರ್ವಹಿಸಲು ಬಳಸಿಕೊಳ್ಳಬೇಕು ಎಂಬ ಚಿಂತನೆ ಮಾಡಿದೆ. ಇದರಿಂದಾಗಿ ನನ್ನ ತಲೆಮಾರಿನ ನವ್ಯ ಲೇಖಕರೊಂದಿಗೆ ನನ್ನನ್ನು ಗುರ್ತಿಸಿಕೊಳ್ಳಲು ಇಷ್ಟವಾಗದೆ ವಿಮರ್ಶೆಯಲ್ಲಿ ಗುರ್ತಿಸಿಕೊಳ್ಳಲು ಮುಂದಾದೆ. ಅದರಂತೆ

ಕೃತಿಗಳನ್ನು ಸಾಮಾನ್ಯ ವಿಮರ್ಶೆಗೆ ಒಳಪಡಿಸದೆ, ವಿಮರ್ಶೆಯ ಶುದ್ಧ ಮಾನದಂಡಗಳನ್ನು ದೂರವಿಟ್ಟು ಸೈದ್ಧಾಂತಿಕ ಹಾಗೂ ಸಾಮಾಜಿಕ ದೃಷ್ಟಿಕೋನದ ನೆಲೆಯಿಂದ ತಳ ಸಂಸ್ಕೃತಿ ಮತ್ತು ಬಹು ಸಂಸ್ಕೃತಿಯ ಅಧ್ಯಯನಕ್ಕೆ ನನ್ನನ್ನು ತೆರೆದುಕೊಂಡೆ. ಇಂದಿಗೂ ಸಹ ನಾನು ಬರೆದಿರುವ ಸಾಹಿತ್ಯ ವಿಮರ್ಶೆಗಳು ಶುದ್ಧ ಸಾಹಿತ್ಯ ವಿಮರ್ಶೆಗಳಲ್ಲ.

ಪ್ರಶ್ನೆ : ಬದುಕು ಮತ್ತು ಜೀವನ ಪ್ರೀತಿ ಹಾಗೂ ದೇವರ ಬಗ್ಗೆ ನಿಮ್ಮ ಅನಿಸಿಕೆ ಏನು ?

ಪ್ರತಿಕ್ರಿಯೆ : ನನಗೆ ಬದುಕಿನ ಬಗ್ಗೆ ಅಪಾರ ಪ್ರೀತಿ ಮತ್ತು ಒಲವು ಇದೆ. ನಮ್ಮ ಬದುಕನ್ನು ನಾವೇ ಕಟ್ಟಿಕೊಳ್ಳಬೇಕೇ ವಿನಹ ಇನ್ನೊಬ್ಬರು ನಮ್ಮ ಬದುಕನ್ನು ಕಟ್ಟಿಕೊಡುವುದಿಲ್ಲ ಎಂಬುದರ ಮೇಲೆ ನಾನು ನಂಬಿಕೆ ಇಟ್ಟವನು. ಕೆಲವು ವೇಳೆ ಸಮಾಜದ ಕಟ್ಟುಪಾಡುಗಳಿಗೆ ಒಳಗಾಗುತ್ತೇವೆ. ಇದರ ಬಂಧನದಿಂದ ಹೊರಬಂದು ಸ್ವಂತಿಕೆಯಿಂದ ಬದುಕನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಗೆ ಒಳಗಾಗಬೇಕು.

ದೇವರ ಬಗ್ಗೆ ನನಗೆ ನಂಬಿಕೆಯಿಲ್ಲ. ಜಗತ್ತಿನ ನಿಗೂಢತೆಗಳಲ್ಲಿ ದೇವರು ಸಹ ಒಂದು. ದೇವರನ್ನು ವ್ಯಕ್ತಿ ತನಗಾಗಿ ಮತ್ತು ಸಮಾಜದ ಶಿಸ್ತಿಗಾಗಿ ಸೃಷ್ಟಿಸಿಕೊಂಡಿದ್ದಾನೆ. ದೇವರನ್ನು ಸಮಾಜದ ಶಿಸ್ತಿನಿಂದ ಬಂಧಿಸಿ ಅದರಿಂದ ಹೊರಬರದಂತೆ ಮಾಡಲಾಗಿದೆ. ಜಗತ್ತಿನ ಎಲ್ಲಾ ಚಿಂತನೆಯ ಹಿನ್ನಲೆಯಲ್ಲಿ ನೋಡಿದಾಗ ದೇವರು ಎಂಬುದು ಸುಳ್ಳು. ದೇವರನ್ನು, ಅದರ ಮೇಲಿನ ನಂಬಿಕೆಯನ್ನು ಪಕ್ಕಕ್ಕಿಟ್ಟು ತನ್ನ ಸಮಾಜಕ್ಕೆ ಒಳಿತಾದುದನ್ನು ಮಾಡಿಕೊಂಡು ಬದುಕು ನಡೆಸುವ ಕ್ರಿಯೆಯೇ ನಿಜವಾದ ಬದುಕು ಎನಿಸಿಕೊಳ್ಳುತ್ತದೆ.

ನೆಲ, ಮರ, ಗಿಡ, ಪಕ್ಷಿ, ಪ್ರಕೃತಿ, ಹಸಿರು ಎಲ್ಲವನ್ನು ನೋಡಿದಾಗ ಅದರಲ್ಲಿನ ಮುಗ್ಧತೆಗಳು ನಮಗೆ ಸತ್ಯದ ಅರಿವನ್ನು ಮೂಡಿಸುತ್ತವೆ. ಇವೆಲ್ಲಾ ತಾನೆ ಸೃಷ್ಟಿಯಾಗಿ ಬದುಕುತ್ತಿದ್ದು, ಮನುಷ್ಯ ಸಹ ಇವೆಲ್ಲದರ ಒಂದು ಭಾಗವಾಗಿದ್ದಾನೆ. ಆದರೆ ಸಮಾಜದಲ್ಲಿ ದೇವರು ಮತ್ತು ಇದಕ್ಕೆ ಪೂರಕವಾದ ಮತೀಯ ಶಕ್ತಿಗಳು ತನ್ನ ಕ್ರೌರ್ಯದ ಹಿಡಿತದಲ್ಲಿ ಜನರನ್ನು ಸಿಕ್ಕಿಸಿಕೊಳ್ಳುತ್ತಿರುವ ನಡೆಯನ್ನು ನಾವು ಕಾಣಬಹುದಾಗಿದೆ.

ಪ್ರಶ್ನೆ : ನಿಮ್ಮ ಸಾಹಿತ್ಯ ವಿಮರ್ಶೆಯ ಬದುಕಿನ ಬಗ್ಗೆ ಅಲ್ಪ ವಿವರಿಸಿ.

ಪ್ರತಿಕ್ರಿಯೆ : ಸಾಹಿತ್ಯ ವಿಮರ್ಶೆ ಎನ್ನುವುದು ಬಹುದೊಡ್ಡ ಹಾಗೂ ವಿಸ್ತಾರವಾದ ಕ್ಷೇತ್ರ ಇದರಿಂದಲೆ ನಾನು ವೈಚಾರಿಕ ಲೇಖನಗಳನ್ನು ಬರೆಯಲು ಪ್ರಾರಂಭಿಸಿದೆ. ೨೦೦೪ರಿಂದ ಸುಧಾ ಕನ್ನಡ ವಾರ ಪತ್ರಿಕೆಯಲ್ಲಿ 'ವಿಚಾರ ಲಹರಿ' ಅಂಕಣದ ಮೂಲಕ ಚರಿತ್ರೆ ಮತ್ತು

ವರ್ತಮಾನಗಳಿಗಿರುವ ಸಂಬಂಧದ ಬಗ್ಗೆ ನಿರಂತರವಾಗಿ ಅಂಕಣಗಳನ್ನು ಬರೆದಿದ್ದೇನೆ. ಮಂಡ್ಯ ಕರ್ನಾಟಕ ಸಂಘ ಹೊರ ತರುತ್ತಿರುವ 'ಸಮಕಾಲಿನ ಸಂವಾದ'ದಲ್ಲಿ ವೈಚಾರಿಕ ಲೇಖನಗಳು ಪ್ರಕಟಗೊಂಡಿವೆ.

ಜಾತಿ ರಹಿತ, ವರ್ಗ ರಹಿತ ಸಮಾಜ ನಿರ್ಮಾಣವಾಗಬೇಕೆಂಬುದು ನನ್ನ ಬಯಕೆ. ಇದೆ ಕಾರಣಕ್ಕೆ ನಾನು ಮತ್ತು ನನ್ನ ಸಂಸಾರ ಎಂಟು ವರ್ಷಗಳ ಕಾಲ ಮೈಸೂರಿನ ಕುಕ್ಕರಹಳ್ಳಿ ದಲಿತ ಕೇರಿಯಲ್ಲಿ ವಾಸವಾಗಿದ್ದೆವು. ಈ ಸಂದರ್ಭದಲ್ಲಿ ಇಲ್ಲಿನ ತಳ ಮಟ್ಟದ ಜನರ ಸಾಂಸ್ಕೃತಿಕ, ಅಧ್ಯಯನ ಸಾಧ್ಯವಾಯಿತು. ಇದು ನನ್ನ ಬದುಕಿನ ಮೇಲೆ ಉಂಟು ಮಾಡಿದ ಪರಿಣಾಮ ಅಪಾರವಾದುದು ಎಂದೆ ಹೇಳಬೇಕು.

ತಳ ಸಮುದಾಯದ ಜೀವನಮಟ್ಟ ಅಧ್ಯಯನ ಮಾಡಿ ಇದನ್ನು 'ಕುಕ್ಕರಹಳ್ಳಿ' ಕೃತಿಯಲ್ಲಿ ಬರೆದಿದ್ದೇನೆ. ವರ್ತಮಾನದಲ್ಲಿ ಪ್ರಕೃತಿಯ ಮೇಲೆ ನಡೆಸುತ್ತಿರುವ ದೌರ್ಜನ್ಯದ ವಿರುದ್ಧ 'ವಸುಂಧರೆ' ಕಾದಂಬರಿ ಬರೆದೆ. ನಾನು ನೋಡಿದ ಬೆಟ್ಟಗುಡ್ಡಗಳು, ಪರಿಸರ ನನ್ನ ಕಣ್ಮುಂದೆ ನಾಶವಾಗುತ್ತಿರುವುದನ್ನು, ಇದನ್ನು ಸಹಿಸದ ಪ್ರಕೃತಿ, ಉಂಟು ಮಾಡಬಹುದಾದ ಪರಿಣಾಮದ ಬಗ್ಗೆ ಕಾದಂಬರಿಯಲ್ಲಿ ವಿವರಿಸಿದ್ದೇನೆ.

ವಸುಂಧರೆ ಮತ್ತು ಕುಕ್ಕರಹಳ್ಳಿ ಕೃತಿಗಳು ನನಗೆ ಯಶಸ್ಸನ್ನು ತಂದುಕೊಟ್ಟವು. ಮೈಸೂರು ವಿಶ್ವವಿದ್ಯಾನಿಲಯ ಪದವಿ ವಿದ್ಯಾರ್ಥಿಗಳಿಗೆ ಕುಕ್ಕರಹಳ್ಳಿ ಕೃತಿಯನ್ನು ಪಠ್ಯ ವಿಷಯವಾಗಿ ಮಾಡಿದುದು, ವಿದ್ಯಾರ್ಥಿಗಳು ತಳಮಟ್ಟದ ಜನರ ಜೀವನ ಅಧ್ಯಯನ ಮಾಡಲು ಅನುಕೂಲವಾಗಿದೆ. ವಸುಂಧರೆ ಕಾದಂಬರಿಗೆ ಮಂಡ್ಯದ ಕರ್ನಾಟಕ ಸಂಘದಿಂದ 'ವರ್ಷಶ್ರೇಷ್ಠ ಕಾದಂಬರಿ ಪ್ರಶಸ್ತಿ' ಬಂದಿದೆ.

ವೈಚಾರಿಕ ಪ್ರಜ್ಞೆಯನ್ನು ಬರಹದ ಮೂಲಕ ಜನರಿಗೆ ತಿಳಿಸುವುದೆ ನನ್ನ ಸಾಹಿತ್ಯದ ಮುಖ್ಯ ಉದ್ದೇಶವಾಗಿದೆ.

ಅಧ್ಯಾಯ – ೫

ಉಪ ಸಂಹಾರ

ಕನ್ನಡ ಸಾರಸ್ವತ ಲೋಕದಲ್ಲಿ ಹೆಸರು ಮಾಡಿರುವ ಪ್ರಮುಖ ಸಾಹಿತಿಗಳಲ್ಲಿ ಶಿವರಾಮು ಕಾಡನಕುಪ್ಪೆ ಅವರು ಪ್ರಮುಖರಾಗಿದ್ದಾರೆ. ಬಹುಮುಖ ಪ್ರತಿಭೆಯುಳ್ಳ ಇವರು ಸಮಾಜಮುಖಿಯಾಗಿ, ಸಾಹಿತ್ಯಿಕ ಸಂಘಟಕರಾಗಿ, ಕನ್ನಡದ ಸುಸ್ಥಿರ ಅಸ್ಥಿತ್ವಕ್ಕಾಗಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ಯಾವುದೆ ಅಬ್ಬರ – ಆಡಂಬರವಿಲ್ಲದ ಸಾಮಾನ್ಯ ಜನರಮಟ್ಟಿಗೆ ತಲುಪುವಂತಹುದಾದಂತಹ ಕೃತಿಗಳ ರಚನೆಯನ್ನು ಮಾಡಿದ್ದಾರೆ.

ಇವರ ಕೃತಿಗಳು ಸರಳ – ಸಜ್ಜನಿಕೆಯಿಂದ ಕೂಡಿದವುಗಳಾಗಿದ್ದು ವರ್ತಮಾನ ಬದುಕಿನ ತಲ್ಲಣಗಳನ್ನು ತಮ್ಮ ಕೃತಿಯಲ್ಲಿ ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾರೆ. ತಮ್ಮ ಅನುಭವ ಮತ್ತು ಭಾವನೆಗಳನ್ನು ಕಾವ್ಯವಾಗಿ ಮೂಡಿಸಿದ್ದಾರೆ. ಕಾವ್ಯಕ್ಕಿಂತ ಹೆಚ್ಚಾಗಿ ವಿಮರ್ಶಾ ಲೇಖನಗಳನ್ನು ಬರೆದಿದ್ದಾರೆ. ಆದ್ದರಿಂದ ಇವರ ಆಸಕ್ತಿಯ ಕ್ಷೇತ್ರ ವಿಮರ್ಶಾ ಕ್ಷೇತ್ರವಾಗಿದೆ. ಇಲ್ಲಿ ಇವರು ಕೃತಿಯೊಳಗಿನ ಸೂಕ್ಷ್ಮತೆಗಳನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರ ವ್ಯಕ್ತಿತ್ವ ಎಲ್ಲರಿಗೂ ಮಾದರಿಯಾದುದಾಗಿದೆ. ಸಾಹಿತ್ಯದ ಯಾವುದೊ ಒಂದು ಪ್ರಕಾರಕ್ಕೆ ತಮ್ಮನ್ನು ಅಂಟಿಸಿಕೊಳ್ಳದೆ ವಿವಿಧ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಬದುಕಿನ ಅಂತಃಸತ್ವವನ್ನು ಕಾವ್ಯದಲ್ಲಿ ಮೂಡಿಸಿ ಬದುಕಿನ ವಾಸ್ತವತೆಯನ್ನು ತಮ್ಮ ಅಭಿವ್ಯಕ್ತಿಯಲ್ಲಿ ವ್ಯಕ್ತಪಡಿಸಿ ಇದುವರೆಗೂ ಸುಮಾರು ಹತ್ತೊಂಬತ್ತು ಮೌಲ್ಯಯುತ ಕೃತಿಗಳ ರಚನೆ ಮಾಡಿದ್ದಾರೆ. ಅವುಗಳಲ್ಲಿ ಎಲ್ಲಿಯೂ ಕೃತಕತೆ ಎಂಬುದು ಕಂಡುಬಂದಿರುವುದಿಲ್ಲ. ಅವೆಲ್ಲವೂ ನಿಜ ಜೀವನಕ್ಕೆ ತುಂಬ ಹತ್ತಿರವಾದ ನೈಜ ವಿಷಯಗಳಿಗೆ ಸಂಬಂಧಿಸಿದವುಗಳಾಗಿವೆ.

ಶಿವರಾಮು ಕಾಡನಕುಪ್ಪೆ ಅವರು ಸರಳ ವ್ಯಕ್ತಿತ್ವನ್ನು ಹೊಂದಿದ್ದು, ತಮ್ಮ ಅಧ್ಯಾಪಕ ವೃತ್ತಿಯಲ್ಲಿನ ಮೌಲ್ಯಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಶಿಷ್ಠ ಸಾಹಿತ್ಯಕ್ಕೆ ಹೆಚ್ಚಿನ ಒತ್ತು ನೀಡಿ ಅಧ್ಯಯನ ಮಾಡಿದ್ದಾರೆ.

ಸಂವಹನ, ಸಮನ್ವಯ, ಸಾಮಾಜಿಕ ನೆಲೆ, ರಾಷ್ಟ್ರಕವಿ ಕುವೆಂಪು ಮೊದಲಾದವುಗಳ ಆಳವಾದ ಅಧ್ಯಯನದ ಪ್ರತಿಫಲವಾಗಿ ವಿಮರ್ಶಾ ಕೃತಿಗಳಾಗಿ ಹೊರ ಬಂದಿವೆ. ಆಧುನಿಕ ಸಾಹಿತ್ಯದಲ್ಲಿ ಪ್ರಮುಖ ಕನ್ನಡ ಸಾಹಿತಿಗಳ ರಚನೆಯಲ್ಲಿನ ವೈಚಾರಿಕ ನಿಲುವು, ಪ್ರಾದೇಶಿಕ

ಅಂಶಗಳ ಪ್ರಭಾವ, ಸಾಮಾಜಿಕ ಪ್ರಜ್ಞೆ, ದಾರ್ಶನಿಕತೆ ಇವುಗಳನ್ನು ಆಳವಾಗಿ ಅಧ್ಯಯನಮಾಡಿ ಇವುಗಳ ಬಗೆಗಿನ ನಿಲವು ಏನಾಗಿತ್ತು ಎಂಬುದನ್ನು ವಿಮರ್ಶಾ ಕೃತಿಗಳಲ್ಲಿ ತಿಳಿಸಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರ ಕೃತಿಗಳನ್ನು ಓದಿದಾಗ ಕಂಡು ಬರುವ ಪ್ರಮುಖ ಅಂಶಗಳೆಂದರೆ, ಅವರ ಪ್ರತಿಯೊಂದು ಅಭಿವ್ಯಕ್ತಿಯಲ್ಲಿಯೂ ಸ್ವಂತಿಕೆ, ನೇರ ನಡೆ ನುಡಿ ಇರುವುದನ್ನು ಗಮನಿಸಬಹುದು. ಕೆಳವರ್ಗದ ಜನರ ಮೇಲೆ ಮಾನವತೆಯ ಭಾವನೆ ಇರುವುದನ್ನು ನೋಡಬಹುದು. ಬಂಡಾಯ ಸಾಹಿತ್ಯ ರೂಪುಗೊಳ್ಳುವ ಸಂದರ್ಭದಲ್ಲಿ ತಮ್ಮನ್ನು ಸಾಹಿತ್ಯ ಕ್ಷೇತ್ರಕ್ಕೆ ಅರ್ಪಿಸಿಕೊಂಡವರು ಶಿವರಾಮು ಕಾಡನಕುಪ್ಪೆ ಅವರು. ಇವರು ತಮ್ಮ ವೈಯಕ್ತಿಕ ಅನುಭವಗಳನ್ನು, ಮಾನಸಿಕ ತುಮುಲಗಳನ್ನು 'ನೀಲಿ ಚಂದ್ರಮ' ಕವನ ಸಂಕಲನದ ಮೂಲಕ ತೋಡಿಕೊಂಡಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರು ಗ್ರಂಥ ಸಂಪಾದನೆ ಮಾಡುವ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಶಿವರಾಮ ಕಾರಂತರ ಹತ್ತು ಅಧ್ಯಯನಗಳು, ವಿನಾಯಕ ಒಂದು ಅಧ್ಯಯನ, ಚಂಪಾ ಆಯ್ದ ಕವನಗಳು, ಹಾ.ಮಾ.ನಾ. ಒಂದು ನೆನಪು ಇವುಗಳು ಇವರು ಸಂಪಾದಿಸಿದ ಪ್ರಮುಖ ಕೃತಿಗಳಾಗಿವೆ. ವಿನಾಯಕ ಒಂದು ಅಧ್ಯಯನ ಕೃತಿಯಲ್ಲಿ ವಿನಾಯಕರ ಪ್ರಮುಖ ಕೃತಿಗಳ ವಿಶ್ಲೇಷಣೆಯನ್ನು ಮಾಡಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರು ವೈಚಾರಿಕ ನಿಲುವನ್ನು ಹೊಂದಿರುವ ವ್ಯಕ್ತಿಯಾಗಿದ್ದು, ಹಲವು ಚಿಂತನ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವು ಬಯಲ ಬೆಳೆ, ಕುಕ್ಕರಹಳ್ಳಿ ಇವುಗಳಲ್ಲಿ ವಿವಿಧ ವಿಷಯಗಳನ್ನು ವೈಚಾರಿಕ ಮೌಲ್ಯದಿಂದ ಚರ್ಚಿಸುವ ಪ್ರಯತ್ನ ಮಾಡಿದ್ದಾರೆ. ದಲಿತ ಗ್ರಾಮದ ಪರಿವರ್ತನೆಯನ್ನು ಬಯಸುವ, ಅದಕ್ಕಾಗಿ ಶ್ರಮಿಸುವ ಭಾವವನ್ನು ಕುಕ್ಕರಹಳ್ಳಿಯಲ್ಲಿ ಕಾಣಬಹುದಾಗಿದೆ.

ಶಿವರಾಮು ಕಾಡನಕುಪ್ಪೆ ಅವರು ಸಾಮಾಜಿಕ ಚಿಂತನೆಯುಳ್ಳ ವ್ಯಕ್ತಿಯಾಗಿದ್ದು, ಪ್ರಕೃತಿಯ ಮೇಲಿನ ಶೋಷಣೆಯನ್ನು ಪ್ರತಿಬಿಂಬಿಸುವ 'ವಸುಂಧರೆ' ಕಾದಂಬರಿಯನ್ನು ರಚಿಸಿದ್ದಾರೆ. ಸ್ವಾರ್ಥ ರಾಜಕಾರಣಿಗಳು ಪ್ರಕೃತಿಯ ಒಡಲನ್ನು ಬರಿದು ಮಾಡಿ ತಾವು ತಿಮಿಂಗಿಲಗಳಂತೆ ಬೆಳೆಯುತ್ತಿರುವುದನ್ನು ಪ್ರತಿಪಾದಿಸಿದ್ದಾರೆ. ಕಾದಂಬರಿಯ ಕೊನೆಯಲ್ಲಿ 'ಶಿಷ್ಟ ರಕ್ಷಕ ದುಷ್ಟ ನಾಶಕ' ಮೌಲ್ಯವನ್ನು ಅಳವಡಿಸಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರು ಮಹಿಳಾಪರ ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸ್ತ್ರೀ ಚಿಂತನೆಯನ್ನು ಹೊಂದಿರುವ ವ್ಯಕ್ತಿಯಾಗಿದ್ದಾರೆ. ಸ್ತ್ರೀಯರ ಶೋಷಣೆಯನ್ನು ವಿರೋಧಿಸುವ, ದುಡಿಯುವ ಮಹಿಳೆಯರ ಪರ ದನಿ ಎತ್ತುವ ಸಲುವಾಗಿ 'ಭೂಮಿ ತೂಕದ ಕಣ್ಣೀರು' ಕೃತಿಯನ್ನು ರಚನೆ ಮಾಡಿದ್ದಾರೆ. ಮಹಿಳೆಯು ಮನೆಯ ಒಳಗೆ ಹೊರಗೆ ದುಡಿಯುವ ಚಿತ್ರಣವನ್ನು ನೈಜವಾಗಿ ಚಿತ್ರಿಸಿದ್ದಾರೆ.

ಶಿವರಾಮು ಕಾಡನಕುಪ್ಪೆ ಅವರು ಒಬ್ಬ ಸಾಮಾನ್ಯ ವ್ಯಕ್ತಿಯಾಗಿ, ಸಾಹಿತಿಯಾಗಿ, ಪ್ರಾಧ್ಯಾಪಕರಾಗಿ, ವಿಮರ್ಶಕರಾಗಿ, ಚಿಂತಕರಾಗಿ ಹೆಸರು ಮಾಡಿದವರು. ಇಂತಹ ಮಹಾನ್ ವ್ಯಕ್ತಿಯ ಪರಿಚಯ ಮಾಡುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡಿದ್ದೇನೆ. ಇಲ್ಲಿ ನಾನು ನೋಡಿರುವ ಎಲ್ಲಾ ದೃಷ್ಟಿಕೋನವು ಸರಿಯೆಂದು ಭಾವಿಸಲಾಗದು. ಇಂತಹ ಬಹುಮುಖ ಪ್ರತಿಭೆಯುಳ್ಳ ಸಾಹಿತಿಗಳ ಅಧ್ಯಯನ ಮತ್ತಷ್ಟು ಸಾಹಿತ್ಯಾಸಕ್ತರಿಂದ ಆಗಬೇಕೆಂದು ಬಯಸುತ್ತೇನೆ.

ಆಕರ ಗ್ರಂಥಗಳು :

೧. ನೀಲಿ ಚಂದ್ರಮ – ಕಾವ್ಯ

೨. ವಸುಂಧುರೆ – ಕಾದಂಬರಿ

೩. ಕುವೆಂಪು ಸಾಹಿತ್ಯ ಮತ್ತು ವಿಚಾರ – ವಿಮರ್ಶೆ

೪. ಸಾಮಾಜಿಕ ನೆಲೆ – ವಿಮರ್ಶೆ

೫. ಸಮನ್ವಯ – ವಿಮರ್ಶೆ

೬. ಸಂವಹನ – ವಿಮರ್ಶೆ

೭. ಬಯಲ ಬೆಳೆ – ಚಿಂತನ ಬರಹ

೮. ಕುಕ್ಕರಹಳ್ಳಿ – ಚಿಂತನ ಬರಹ

೯. ಭೂಮಿ ತೂಕದ ಕಣ್ಣೀರು – ಚಿಂತನ ಬರಹ

೧೦. ಶಿವರಾಮ ಕಾರಂತ ಹತ್ತು ಅಧ್ಯಯನಗಳು – ಸಂಪಾದನೆ

೧೧. ವಿನಾಯಕ ಒಂದು ಅಧ್ಯಯನ – ಸಂಪಾದನೆ

೧೨. ಕರ್ನಾಟಕ ಸಂಘ ಹೊರತಂದಿರುವ 'ಅಭಿವ್ಯಕ್ತಿ' ಸಂಚಿಕೆಯಿಂದ ಆಯ್ದ ಲೇಖನಗಳು.

ಶಿವರಾಮು ಕಾಡನಕುಪ್ಪೆ ಅವರ ಕೃತಿಗಳು

೧. ಕಾವ್ಯ – ನೀಲಿ ಚಂದ್ರಮ

೨. ಕಾದಂಬರಿ – ವಸುಂಧರೆ

೩. ವಿಮರ್ಶಾ ಕೃತಿಗಳು – ಸಮನ್ವಯ
ಸಂವಹನ
ಸಾಮಾಜಿಕ ನೆಲೆ
ಕುವೆಂಪು ಸಾಹಿತ್ಯ ಮತ್ತು ವಿಚಾರ

೪. ಚಿಂತನ ಬರಹಗಳು – ಬಯಲ ಬೆಳೆ
ಕುಕ್ಕರಹಳ್ಳಿ
ಭೂಮಿ ತೂಕದ ಕಣ್ಣೀರು

೫. ಸಂಪಾದಿತ ಕೃತಿಗಳು – ಶಿವರಾಮ ಕಾರಂತ : ಹತ್ತು ಅಧ್ಯಯನಗಳು
ವಿನಾಯಕ : ಒಂದು ಅಧ್ಯಯನ
ಹಾ.ಮಾ.ನಾ. ಒಂದು ನೆನಪು
ಚಂಪಾ ಆಯ್ದ ಕವನಗಳು
ಕನ್ನಡ ಪ್ರಬಂಧಗಳು
ಆಧುನಿಕ ಕನ್ನಡ ಕಾವ್ಯ
ಆಧುನಿಕ ಕಥೆಗಳು
ಸುವರ್ಣ ಪ್ರಬಂಧ

೬. ಮಕ್ಕಳ ಸಾಹಿತ್ಯ – ಅತಿಯಾಸೆ ಗತಿಕೇಡು
ಸಗರ ಚಕ್ರವರ್ತಿ ಕಥೆ
ಮೂರು ಹಿತ ನುಡಿಗಳು